
ಸಂಪುಟ 24 ಸಂಚಿಕೆ 17
ಏಪ್ರಿಲ್ 28, 2002 ಬೆಲೆ ರೂ. 3.00

ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ




ವಿದ್ಯುತ್ ಸುಧಾರಣೆ ಎಂಬ ಮಹಾಮೋಸ



ವೆನಿಜುಲಾ ದಂಗೆ: ಅಮೆರಿಕಾ ಮುಖಭಂಗ



ಬಂದಿವೆ ಕೂಲಿ ಕಸಿಯುವ ಕೃಷಿ ಯಂತ್ರಗಳು!



ಮೋದಿ ವಜಾಕ್ಕೆ ಹೆಚ್ಚಿದ ದೇಶವ್ಯಾಪಿ ಚಳುವಳಿ

ಹವಾಲಾ ಹಗರಣದಲ್ಲಿ ಬಂಡವಾಳಶಾಹಿ ಪಕ್ಷಗಳು

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವ ಕುಂದಾಪುರ

ಧಾರವಾಹಿ: 94

ಹಿಂದಿನ ಸಂಚಿಕೆಯಲ್ಲಿ ಕಲ್ಕತ್ತ ಮಹಾನಗರ ಪಾಲಿಕೆಯಲ್ಲಿ ಎಡರಂಗದ ಜಯ, ಜ್ಯೋತಿಬಸುರವರ ಅಮೆರಿಕಾ ಪ್ರವಾಸ, ಪ.ಬಂಗಾಳ ಕೈಗಾರಿಕಾ ಬೆಳವಣಿಗೆ ಚರ್ಚೆ, ಆರ್.ಎಸ್.ಎಸ್. - ವಿಹೆಚ್‌ಪಿ ತಂತ್ರಗಾರಿಕೆಯಿಂದ ವಿದೇಶಢಲ್ಲೂ ಹಾಲು ಕುಡಿದ ಗಣೇಶ, ಬಾಂಬ್ ಸ್ಫೋಟದಲ್ಲಿ ಪಂಜಾಬ್ ಮುಖ್ಯಮಂತ್ರಿ ಸಾವು, ಸ್ಫೋಟಕ ವಿಷಯಗಳನ್ನೊಳಗೊಂಡ ವೋರಾ ವರದಿ ಮತ್ತು ಶಿವಸೇನೆ-ಬಿಜೆಪಿ ಕೂಟದಿಂದ ಕೇಂದ್ರ ಗೃಹಸಚಿವ ಎಸ್.ಬಿ.ಚವ್ಹಾಣ್‌ರವರಿಗೆ ಸನ್ಮಾನ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಪಿವಿಎಸ್ ರಾವ್‌ರವರ ಗುರು ಚಂದ್ರಸ್ವಾಮಿಯವರ ಮೇಲೆ ಹಲವು ಆರೋಪ, ಕೇಂದ್ರ ಖಾತೆ ಸಚಿವ ಸಂತೋಷ್ ಮೋಹನ್‌ದೇವ್ ಹಗರಣ, ಟೆಲಿಕಾಂ ಹಗರಣ, ಕೇಂದ್ರದ ಹಲವು ಮಂತ್ರಿಗಳ ರಾಜಿನಾಮೆ, ಬಯಲುಗೊಂಡ ಹವಾಲಾ ಹಗರಣ, ಬಿಜೆಪಿಯೂ ಪಾಲುದಾರ,ದಲಿತ ಕ್ರೈಸ್ತರ ಮೀಸಲಾತಿ ಸುಗ್ರೀವಾಜ್ಞೆ ರಾಷ್ಟ್ರಪತಿಯವರಿಂದ ತಿರಸ್ಕೃತ ಈ ಬಗ್ಗೆ ಓದಿ.....


ನರಸಿಂಹ ರಾವ್‌ರ ತತ್ವಶಾಸ್ತ್ರಜ್ಞ ಗುರು ಚಂದ್ರಸ್ವಾಮಿಯ ಸರದಿಯಾಗಿತ್ತು. ಹಲವಾರು ಆರೋಪಗಳ ಆಧಾರದಲ್ಲಿ ಅವರನ್ನು ಬಂಧಿಸುವಂತೆ ಗೃಹಖಾತೆ ರಾಜ್ಯ ಸಚಿವ ರಾಜೇಶ್ ಪೈಲಟ್ ಆದೇಶಿಸಿದರು. ಆದರೆ ಅಧಿಕಾರವಲಯದಲ್ಲಿ ಚಂದ್ರಸ್ವಾಮಿಗಿದ್ದ ಪ್ರಭಾವವನ್ನು ಪೈಲಟ್ ಸರಿಯಾಗಿ ಅರಿತಿರಲಿಲ್ಲ! ಪೈಲಟ್‌ರನ್ನು ಶೀಘ್ರವೇ ಬೇರೆ ಖಾತೆಗೆ ವರ್ಗಾಯಿಸಲಾಯಿತು. ಚಂದ್ರಸ್ವಾಮಿ ಇನ್ನೂ ಸ್ವತಂತ್ರ ಹಕ್ಕಿಯಂತಿದ್ದಾನೆ. ಅಕ್ಟೋಬರ್ 6 ರಂದು ಇನ್ನೊಂದು ಹಗರಣ ಪತ್ರಿಕೆಗಳಲ್ಲಿ ರಾರಾಜಿಸಿತು. ಕೇಂದ್ರ ಉಕ್ಕು ಸಚಿವ ಸಂತೋಷ ಮೋಹನದೇವ್‌ರ ಬ್ಯಾಂಕ್ ಖಾತೆಯಲ್ಲಿ 'ಲೆಕ್ಕವಿಲ್ಲದ' 23 ಲಕ್ಷ ರೂಪಾಯಿ ಇರುವುದನ್ನು ನಮ್ಮ ಸಂಸತ್ ಸದಸ್ಯರೊಬ್ಬರು ದಾಖಲೆ ಸಹಿತ ತೋರಿಸಿದರು. ಆಗ ಟೆಲಿಕಾಂ ಮತ್ತು ಹವಾಲಾ ಹಗರಣವೇ ಸುದ್ದಿಯಲ್ಲಿದ್ದವು. ಹೀಗಾಗಿ ಸಂತೋಷ ಮೋಹನದೇವ್‌ರ ಕುಕೃತ್ಯಗಳ ಬಗ್ಗೆ ಸಾರ್ವಜನಿಕರ ಗಮನ ಅಷ್ಟಾಗಿ ಹೋಗಲಿಲ್ಲ.

ಆದರೆ ಟೆಲಿಕಾಂ ಹಗರಣದ ಪಾಪಕ್ಕೆ ಫಲಸಿಕ್ಕಿತು. ದೇಶದ ಭದ್ರತೆಯೂ ಒಳಗೊಂಡಿರುವುದರಿಂದ ಇಂಥ ಎಲ್ಲಾ ವ್ಯವಹಾರಗಳಲ್ಲಿ ಪಾರದರ್ಶಕತೆ ಇರಬೇಕೆಂದು ನಾವು ಆಗ್ರಹಿಸಿದೆವು. ಟೆಲಿಕಾಂ ಕ್ಷೇತ್ರದ ಶೇಕಡ 49ನ್ನು ಖಾಸಗಿಗೆ ಮುಕ್ತವಾಗಿಡಬಹುದು ಹಾಗೂ ಶೇಕಡ 10 ಮಾಲಿಕತ್ವ ವಿದೇಶಿ ಕೈಗಳಿಗೆ ಹೋಗಬೇಕು ಎಂದು ರಾವ್ ಸರಕಾರ ಹೇಳಿತು. ವಾಸ್ತವವಾಗಿ ಅಮೇರಿಕಾದಲ್ಲಿ ಕೂಡ ಟೆಲಿಕಾಂ ವಲಯದಲ್ಲಿ ಶೇಕಡ 25 ರಷ್ಟು ಬಂಡವಾಳ ಹೊಂದಲು ಯಾವುದೇ ಕಂಪೆನಿಗೆ ಅವಕಾಶ ಇಲ್ಲ. ಆದರೆ ಇಲ್ಲಿನ ಸರಕಾರ ಶೇ. 49 ಮಾಲಿಕತ್ವ ನೀಡಲು ಮುಂದಾಗಿದೆ! ಸಹಜವಾಗಿಯೇ ಈ ವ್ಯವಹಾರಗಳಲ್ಲಿ ಕೋಟ್ಯಾಂತರ ರೂಪಾಯಿ ಲಂಚದ ವ್ಯವಹಾರ ನಡೆದಿರುತ್ತದೆ.

ಜೂನ್ 19-23ರ ಟೆಲಿಕಾಂ ನೌಕರರ ಮುಷ್ಕರದ ನಂತರ ಜನರಿಗೆ ಪರಿಸ್ಥಿತಿಯ ಗಂಭೀರತೆ ಅರಿವಾಯಿತು. ಪ್ರಸ್ತಾವಿತ ದೂರಸಂಪರ್ಕ ಪ್ರಾಧಿಕಾರ ಕುರಿತ ಮಸೂದೆಯೊಂದನ್ನು ಸರಕಾರ ತಂದಿತು. ಪ್ರತಿಪಕ್ಷಗಳು ರಾಜ್ಯ ಸಭೆಯಲ್ಲಿ ಅದು ಅಂಗೀಕಾರವಾಗಲು ಬಿಡಲಿಲ್ಲ ಹೊಸ ಕಾನೂನು ಅಂಗೀಕಾರವಾಗದ ಹೊರತು ಟೆಂಡರ್‌ಗಳನ್ನು ಕರೆಯಬಾರದು ಎಂದು ಪ್ರತಿಪಕ್ಷಗಳು ಹೇಳಿದವು. ದೂರಸಂಪರ್ಕ ಸಚಿವ ಸುಖರಾಂ ಅದಕ್ಕೆ ಒಪ್ಪಿದಂತೆ ಕಂಡಿತು. ಆದರೆ ಸಂಸತ್ ಅಧಿವೇಶನ ಮುಂದಕ್ಕೆ ಹೋದ ತಕ್ಷಣವೇ ಟೆಂಡರ್‌ಗಳನ್ನು ಕರೆಯಲಾಯಿತು ಹಾಗೂ ಚಳಿಗಾಲದ ಅಧಿವೇಶನ ಆರಂಭವಾಗುವ ಮುನ್ನವೇ ವ್ಯವಹಾರವನ್ನು ಮುಗಿಸಿಯಾಗಿತ್ತು. ಇದು ಸರಕಾರದ ಕಾರ್ಯವೈಖರಿ!

ಡಿಸೆಂಬರ್ 6 ರಂದು ಹಠಾತ್ತನೆ ಈ ಪ್ರಶ್ನೆಯನ್ನು ಸಂಸತ್ತಿನಲ್ಲಿ ಎತ್ತಲಾಯಿತು. ಗಾಬರಿಗೊಂಡ ಮಂತ್ರಿಗೆ ಜವಾಬು ಕೊಡಲು ಆಗಲಿಲ್ಲ. ಸಂಸದೀಯ ಸಮಿತಿ ರಚಿಸಲು ಸರಕಾರ ಒಪ್ಪಲಿಲ್ಲ. ಇದರ ಪರಿಣಾಮವಾಗಿ ಡಿಸೆಂಬರ್ 7 ರಿಂದ 22 ರವರೆಗೆ ಸಂಸತ್ತಿನ ಕಾರ್ಯಗಳು ಸ್ಥಗಿತಗೊಂಡವು. ಕಲಾಪಗಳನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಲಾಯಿತು. ಜನತಾಂತ್ರಿಕ ಭಾರತದಲ್ಲಿ ಅದೇನೋ ಅಭೂತಪೂರ್ವವಾದುದು ಸಂಭವಿಸಿತ್ತು.

ಪುರುಲಿಯಾ ಕುಖ್ಯಾತ ಶಸ್ತ್ರಾಸ್ತ್ರ ಪ್ರಕರಣ ಡಿಸೆಂಬರ್ 18 ರಂದು ನಡೆಯಿತು. ಇದರ ಹಿಂದೆ ಯಾರಿದ್ದಾರೆ ಎನ್ನುವುದು ಮೊದಲು ನಮಗೆ ಗೊತ್ತಾಗಲಿಲ್ಲ. ಆನಂದ ಮಾರ್ಗ ಇದಕ್ಕೆ ಹೊಣೆ ಎಂಬುದು ಡಮ್ಮಿಯಾಗಿ ತಿಳಿಯಿತು. ಈ ಬಗ್ಗೆ ಕೇಂದ್ರ ಸರಕಾರಕ್ಕೆ ಮೊದಲೇ ಮಾಹಿತಿಯಿತ್ತು ಎಂದೂ ನಮಗೆ ಗೊತ್ತಾಗಿದೆ. ನಮಗೆ ಅದನ್ನು ತಿಳಿಸಲಿಲ್ಲ. ಯಾಕೆ?



ಅಡ್ವಾಣಿ | ಯಶವಂತ ಸಿನ್ಹ | ಅರ್ಜುನ್ ಸಿಂಗ್ | ಪ್ರಣವ್ ಮುಖರ್ಜಿ

ಹವಾಲಾ ಹಗರಣ

1996 ಜನವರಿ ಯಾವ ದೃಷ್ಟಿಯಿಂದ ನೋಡಿದರೂ ಹವಾಲಾ ತಿಂಗಳಾಗಿತ್ತು. ಹವಾಲಾ ವರ್ತಕ ಜೆ.ಕೆ. ಜೈನ್‌ರ ದಿನಚರಿ ಸೋರಿ ಹೋಯಿತು. ಆಳುವ ಪಕ್ಷದ ಅನೇಕ ನಾಯಕರಿಗೆ ಕೋಟ್ಯಾಂತರ ರೂಪಾಯಿ ಲಂಚ ನೀಡಿರುವುದು ಅದರಿಂದ ಬೆಳಕಿಗೆ ಬಂತು. ರಾಜೀವ್‌ಗಾಂಧಿ ಕೂಡ ಒಳಗೊಂಡಿದ್ದರು. ಡೈರಿ ಪ್ರಕಾರ ಅವರಿಗೆ ಎರಡು ಕೋಟಿ ರೂಪಾಯಿ ಕೊಡಲಾಗಿತ್ತು. ರಾವ್ ಹೆಸರೂ ಹೊರಬಂತು. ಎಲ್.ಕೆ. ಆಡ್ವಾಣಿ, ಮದನಲಾಲ್ ಖುರಾನಾ, ಶರದ್ ಯಾದವ್ ಸೇರಿದಂತೆ ಬಹುತೇಕ ಎಲ್ಲಾ ಪಕ್ಷಗಳ ಮುಖಂಡರ ಬಾಯಿಗೆ ಲಂಚದ ಹಣ ಮೆತ್ತಿತ್ತು. ಎಡಪಕ್ಷಗಳು ಮಾತ್ರ ಇದರಿಂದ ಹೊರತಾಗಿದ್ದವು. ಸಿಬಿಐ ಆರೋಪಪಟ್ಟಿಯಲ್ಲಿ 18 ಹೆಸರುಗಳಿದ್ದವು.

ಕೇಂದ್ರ ಸಚಿವರಾದ ಬಲರಾಂ ಜಾಖಡ್, ವಿ.ಸಿ. ಶುಕ್ಲ ಮತ್ತು ಮಾಧವರಾವ್ ಸಿಂಧಿಯಾರ ಮೇಲೆ ಆರೋಪಪಟ್ಟಿ ರೂಪಿಸಲು ಜನವರಿ 16 ರಂದು ಸಿಬಿಐ ಅನುಮತಿ ನೀಡಿತು. ಈ ಮೂರೂ ಮಂತ್ರಿಗಳು ಮರುದಿನ ರಾಜೀವಾಮೆ ಕೊಟ್ಟರು. ಸುಪ್ರೀಂಕೋರ್ಟಿನ ಸೂಚನೆ ಮೇರೆಗೆ ಪ್ರಧಾನಿಯನ್ನು ಕೂಡ ತನಿಖೆಯ ವ್ಯಾಪ್ತಿಗೆ ತರಲಾಯಿತು.

ಫೆಬ್ರವರಿ 1 ರಂದು ಸಿಬಿಐ ವರದಿ ಬಹಿರಂಗಗೊಂಡಿತು. ಸೈಂಟ್ ಕಿಟ್ಸ್‌ನಲ್ಲಿ ವಿ.ಪಿ.ಸಿಂಗ್‌ರ ವಿರುದ್ಧ ಆರೋಪ ಹೊರಿಸುವಲ್ಲಿ ಸ್ವತಃ ನರಸಿಂಹರಾವ್ ಕೈವಾಡವಿದೆ ಎಂದು ವರದಿ ಹೇಳಿತು. ಫೆಬ್ರವರಿ 7 ರಂದು ಕಲ್ಪನಾಥ ರಾಯ್ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸಲಾಯಿತು. ರಾಯ್‌ಗೆ ಮಾಫಿಯಾ ದೊರೆ ದಾವೂದ್ ಇಬ್ರಾಹಿಂ ಜೊತೆ ಸಂಪರ್ಕವಿದೆ ಎಂದು ಆರೋಪಪಟ್ಟಿ ಹೇಳಿತು. ರಾಯ್ ರಾಜಿನಾಮೆ

ತಿಹಾರ್ ಸೆರೆಮನೆಗೆ ಕಳಿಸಲಾಯಿತು. ಸಚಿವರಾದ ಕಮಲನಾಥ, ಬೂಟಾಸಿಂಗ್ ಮತ್ತು ಅರವಿಂದ ನೇತಾ ತಲೆ ಕೂಡ ಉರುಳಿತು.

ಪ್ರತಿಪಕ್ಷಗಳು ಮಂಡಿಸಿದ್ದ ಅವಿಶ್ವಾಸ ಗೊತ್ತುವಳಿ ಪ್ರಕರಣದಲ್ಲಿ ಮತನೀಡಲು ನರಸಿಂಹರಾವ್‌ರಿಂದ ತಾನು ಹಣ ಪಡೆದಿದ್ದೇನೆ ಎಂದು ಜಾರ್ಖಂಡ್ ನಾಯಕ ಶೈಲೇಂದ್ರ ಮೆಹತೋ ಫೆಬ್ರವರಿ 26 ರಂದು ಬಾಯಿಬಿಟ್ಟರು. ಏಪ್ರಿಲ್ 3 ರಂದು ಪಿ. ಚಿದಂಬರಂ ಮತ್ತು ಅರುಣಾಚಲಂ ಸಚಿವ ಸ್ಥಾನವನ್ನು ಬಿಟ್ಟರು. ಹಿಮಾಚಲ ಪ್ರದೇಶದ ರಾಜ್ಯಪಾಲ ಹಾಗೂ ಕೇಂದ್ರದ ಮಾಜಿ ಮಂತ್ರಿ ಶೀಲಾ ದೀಕ್ಷಿತ್ (ಕಾಂಗ್ರೆಸ್) ವಸತಿ ಹಗರಣದಲ್ಲಿ ರಾಜೀನಾಮೆ ನೀಡಿದರು. ರಾಜೀನಾಮೆ ಕೊಡಲು ಅವರು ಸಿದ್ಧರಿರಲಿಲ್ಲ. ಪದತ್ಯಾಗ ಮಾಡುವಂತೆ ಸ್ವತಃ ರಾಷ್ಟ್ರಪತಿಯವರೇ ಸೂಚಿಸಿದ ಮೇಲೆ ಹಾಗೆ ಮಾಡಿದರು.

ಚುನಾವಣೆ ವೇಳೆ ಕಾಂಗ್ರೆಸ್ ಮತ್ತು ಬಿಜೆಪಿಗೆ ಮುಖವಿರಲಿಲ್ಲ. ಆ ವರ್ಷ ಸರ್ಕಾರಕ್ಕೆ ಮತ್ತೊಂದು ಆಘಾತ ಉಂಟಾಯಿತು. 'ದಲಿತ' ಕ್ರೈಸ್ತರನ್ನು ಮೀಸಲಾತಿಗೆ ಒಳಪಡಿಸಲು ಉದ್ದೇಶಿಸಿದ ಸುಗ್ರೀವಾಜ್ಞೆಯನ್ನು ರಾಷ್ಟ್ರಪತಿ ವಾಪಸ್‌ಮಾಡಿದರು. ರಾಷ್ಟ್ರಪತಿ ಸರಿಯಾದುದನ್ನೇ ಮಾಡಿದರು. ಅವರು ತನ್ನ ಆತ್ಮಸಾಕ್ಷಿಯಂತೆ ನಡೆದಿದ್ದರು. ಇದೆಲ್ಲ ಆದ ಮೇಲೆ ಓಟು ಕೊಡಿ ಎಂದು ಜನರ ಮುಂದೆ ಹೋಗುವ ಸ್ಥಿತಿಯಲ್ಲಿ ರಾವ್ ಸರಕಾರ ಇರಲಿಲ್ಲ.

(ಮುಂದುವರಿಯುವುದು)

ಮೇ 24, 25, 26
ಸಿಪಿಐ(ಎಂ) ಕೇಂದ್ರ ಸಮಿತಿ ಸಭೆ - ಬೆಂಗಳೂರಿನಲ್ಲಿ

ದುಡಿಯುವ ವರ್ಗದ ಕ್ರಾಂತಿಕಾರಿ ಪಕ್ಷವಾಗಿರುವ ಸಿಪಿಐ(ಎಂ)ನ ಕೇಂದ್ರ ಸಮಿತಿಯ ಸಭೆ ಬೆಂಗಳೂರಿನಲ್ಲಿ ಜರುಗಲಿದೆ. 2002 ರ ಮೇ 24, 25, 28 ರಂದು ಕೇಂದ್ರ ಸಮಿತಿ ಹಾಗೂ ಅದರ ಪೂರ್ವಭಾವಿಯಾಗಿ 23 ರಂದು ಪೊಲಿಟ್‌ಬ್ಯೂರೋ ಸಭೆಗಳು ಸೇರಲಿವೆಯೆಂದು ಪಿ.ಬಿ. ಪ್ರಕಟಿಸಿದೆ.

ಪಕ್ಷದ 17ನೇ ಮಹಾಧಿವೇಶನದ ನಂತರ ಸೇರುತ್ತಿರುವ ಪ್ರಥಮ ಕೇಂದ್ರ ಸಮಿತಿ ಸಭೆ ಇದು. ದೇಶದ ರಾಜಕೀಯ ದಲ್ಲಿ ಆಗುತ್ತಿರುವ ತೀವ್ರ ತರವಾದ ವಿದ್ಯಮಾನ ಗಳ ಹಿನ್ನೆಲೆಯಲ್ಲಿ ಈ ಸಭೆಗೆ ವಿಶೇಷ ಮಹತ್ವವಿದೆ.

ಮೇ 26 ಬೃಹತ್ ರ್‍ಯಾಲಿ

ಈ ಸಭೆಗೆ ದೇಶದ ಅತ್ಯಂತ ಹಿರಿಯ, ಅನುಭವಿ, ಉತ್ಸಾಹಿ ನಾಯಕತ್ವ ಸಿಪಿಐ(ಎಂ) ಕೇಂದ್ರ ಸಮಿತಿಯ ಸುರ್ಜಿತ್, ಜ್ಯೋತಿಬಸು, ಬುದ್ಧದೇವ್ ಭಟ್ಟಾಚಾರ್ಯ, ಮಾಣಿಕ್ ಸರ್ಕಾರ್, ಇ.ಕೆ.ನಾಯನಾರ್, ಅಚ್ಯುತಾನಂದನ್, ಬಾಲಾನಂದನ್, ಪ್ರಕಾಶ್ ಅನಿಲ್ ಬಿಸ್ವಾಸ್, ಕೊರಟಾಲ ರಾಮಚಂದ್ರನ್, ಎಸ್.ಆರ್.ಪಿಳ್ಳೈ, ಪಾಂಡೆ ಮುಂತಾದ ಹಲವಾರು ಧೀಮಂತ ನಾಯಕರು ಆಗಮಿಸಲಿದ್ದಾರೆ. ಕರ್ನಾಟಕ ರಾಜ್ಯದಲ್ಲಿಯೂ ಇದು ಅತ್ಯಂತ ಮಹತ್ವದ ಪ್ರಭಾವ ಬೀರುವ ಘಟನೆ ಕೂಡ.

ಸಿಪಿಐ(ಎಂ) ನ ಕೇಂದ್ರ ಸಮಿತಿಯು ಕರ್ನಾಟಕದಲ್ಲಿ ಸೇರಲು ಅವಕಾಶ ಲಭ್ಯವಾದುದು ಇದು ಮೂರನೇ ಬಾರಿ. ಹಿಂದೆ 1970 ರ ದಶಕದ ಆರಂಭದಲ್ಲಿ ಒಮ್ಮೆ ನಂತರ 1993 ರಲ್ಲಿ ಸೇರಿತ್ತು. ರಾಷ್ಟ್ರದ ನಾಯಕರು ಆಗಮಿಸುತ್ತಿರುವ ಈ ಸಂದರ್ಭದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸಲು ಸಿದ್ಧತೆಗಳು ನಡೆದಿವೆ. ಮುಖ್ಯವಾಗಿ ಮೇ 26 ರಂದು ಬೃಹತ್ ಬಹಿರಂಗ ರ್‍ಯಾಲಿಯನ್ನು ನಡೆಸಲಾಗುತ್ತಿದೆ.

ಇದರ ಯಶಸ್ವಿಯಾಗಿ ಪಕ್ಷದ ಎಲ್ಲಾ ಸದಸ್ಯರು, ಸಮಿತಿಗಳು, ಹಿತೈಷಿಗಳೂ ಅಹೋರಾತ್ರ ಶ್ರಮಿಸಬೇಕೆಂದು ಪಕ್ಷದ ರಾಜ್ಯ ಸಮಿತಿ ಕೋರಿದೆ.

ಮೇ ದಿನಾಚರಣೆ ಸಂಚಿಕೆ

ಮೇ ದಿನದ ಮಹತ್ವ, ಅದರ ಸಂದೇಶಗಳು, ಜರ್ಮನಿಯ ಹಿಟ್ಲರನ ಫ್ಯಾಸಿಸ್ಟ್ POGROM ನೆನಪಿಸುವ ಗುಜರಾತ್‌ನ ಭೀಕರ ಮಾರಣಹೋಮದ ವಿವರಗಳು. ಕಥೆ, ಕವನ, ವಿಶ್ಲೇಷಣೆ ಒಳಗೊಂಡ ವಿಶೇಷ ಲೇಖನಗಳ ಮೇ ದಿನದ ಸಂಚಿಕೆ ಸಿದ್ಧವಾಗುತ್ತಿದೆ. ಹೆಚ್ಚಿನ ಪ್ರತಿಗಳು ಬೇಕಾದಲ್ಲಿ ಮುಂದಾಗಿ ತಿಳಿಸುವುದು. ಅಲ್ಲದೇ ನಿಮ್ಮ ಪ್ರದೇಶಗಳಲ್ಲಿ ವಿಶಿಷ್ಟವಾಗಿ ಆಚರಿಸಿದ ಮೇ ದಿನದ ಹಳೆಯ ನೆನಪುಗಳು, ಫೋಟೋಗಳನ್ನು ಕಳುಹಿಸಿ...

- ಸಂ.

ಸಿಂಧನೂರಿನ ಭತ್ತದ ಗದ್ದೆಗಳಿಗೆ 200 ದಷ್ಟು ಹಾರ್ವೆಸ್ಟರ್ ಯಂತ್ರಗಳು ಬಂದಿಳಿದಿವೆ. ಭತ್ತ ಕೊಯ್ಯುವ, ಹಸನು ಮಾಡಿ ಚೀಲಕ್ಕೆ ತುಂಬುವ ಕೆಲಸ ಮಾಡುವ ಈ ಯಂತ್ರಗಳು ಕಬಳಿಸುತ್ತಿರುವುದು ಬಡ ಕೂಲಿಕಾರರ ಬದುಕನ್ನು. ಜೀವನದ ಬೇರನ್ನೇ ಕಿತ್ತೆಸೆಯಲು ಹೊರಟಿರುವ ಇವುಗಳ ಬಳಕೆಯ, ಬಳಸುತ್ತಿರುವ ಭೂಮಾಲೀಕರ ವಿರುದ್ಧ ಕೃಷಿಕೂಲಿಕಾರರು ಸಿಡಿದೆದ್ದಿದ್ದಾರೆ. ಈ ಹೋರಾಟ ಇತರೆ ಜಿಲ್ಲೆಗಳಿಗೂ ವಿಸ್ತರಿಸುತ್ತಿದೆ. ಸಿಂಧನೂರಿನಲ್ಲಿ ಆರಂಭಗೊಂಡ ಹೋರಾಟದ ಸ್ವರೂಪವೇನು?....

ಕೂಲಿ ಕಸಿಯುವ ಯಂತ್ರಗಳು

ವರದಿ ಶರಬಣ್ಣ ನಾಗಲಾಪೂರ

ಕರ್ನಾಟಕ ರಾಜ್ಯದಲ್ಲಿಯೇ ಸಿಂಧನೂರು ತಾಲೂಕು ವಿಶಿಷ್ಟವಾದದ್ದು. ಇದರ ವೈಶಿಷ್ಟತೆ ಏನೆಂದರೆ, ಸಮೃದ್ಧಿ ಮತ್ತು ದಾರಿದ್ರ್ಯ ಕಣ್ಣಿಗೆ ರಾಚುವಂತಿದೆ. ವಿಷ್ಯಾದಲ್ಲಿಯೇ ಅತ್ಯಂತ ಹೆಚ್ಚು ಟ್ರ್ಯಾಕ್ಟರ್, ಗೊಬ್ಬರ, ಕ್ರಿಮಿನಾಶಕಗಳು, ಕಾರುಗಳು, ಮೋಟಾರ ಸೈಕಲ್‌ಗಳು, ಬಂಗಾರ, ಔಷದಿ ಮತ್ತು ಭತ್ತ ಮಾರಾಟವಾಗುವ ತಾಲೂಕ ಕೇಂದ್ರವಾಗಿದೆ. ವರ್ಷದಲ್ಲಿ ಭತ್ತದ ಉತ್ಪಾದನೆಯೇ ಎರಡು ಕೋಟಿ ಚೀಲಗಳು.

ಈ ಮೊದಲು ಹತ್ತಿ, ಕಬ್ಬು, ಜೋಳ, ಶೇಂಗಾ, ಸೂರ್ಯಪಾನ ಮೆಕ್ಕೆ ಜೋಳ ಬೆಳೆಯುತ್ತಿದ್ದ ಗದ್ದೆಯಲ್ಲಿ ಈಗ ಭತ್ತ ಪ್ರಧಾನ ಬೆಳೆಯಾಗಿದೆ. ಭತ್ತವಿಂದು ರೈತರಿಗೆ ಆಹಾರ ಬೆಳೆಯಾಗಿರದೆ ವಾಣಿಜ್ಯ ಬೆಳೆಯಾಗಿದೆ. ಅಂದರೆ ಒಂದು ಎಕರೆಗೆ ಭತ್ತ ಬೆಳೆಯಲು ಹತ್ತರಿಂದ ಹದಿನೈದು ಸಾವಿರ ರೂಪಾಯಿ ಖರ್ಚು. ಇಲ್ಲಿ ಆಧುನಿಕ ಕೃಷಿ, ನೀರಾವರಿ, ಟ್ರಾಕ್ಟರ್ ಗೊಬ್ಬರ ಕ್ರಿಮಿನಾಶಕ ಹಾರ್ವೆಸ್ಟರ್ ಉಪಯೋಗ ಸಾಮಾನ್ಯವಾಗಿದೆ. ಹೀಗಾಗಿ ಶ್ರೀಮಂತ ರೈತರ ಮತ್ತು ಭೂ ಮಾಲೀಕರ ಕೈಯಲ್ಲಿಯೇ ಭೂ ಒಡೆತನವಿದ್ದು ತಾಲೂಕಿನ ಆರ್ಥಿಕತೆ ಮತ್ತು ಆಡಳಿತ ಇವರ ಕೈಯಲ್ಲಿರುತ್ತದೆ.

ಈ ಮೊದಲು ವರ್ಷದಲ್ಲಿ 250 ರಿಂದ 300 ದಿನಗಳವರೆಗೆ ಕೆಲಸ ಮಾಡುತ್ತಿದ್ದ ಕೂಲಿಕಾರರಿಗೆ ಈಗ 60ರಿಂದ 90 ದಿನಗಳ ಕೂಲಿ ಸಿಗುವುದೇ ಕಷ್ಟವಾಗಿದೆ. ಅದೂ ಒಂದು ದಿನಕ್ಕೆ ಕೇವಲ 20ರೂ.ಕೂಲಿ ಮಾತ್ರ! ಈ ಕೂಲಿಯಲ್ಲಿಯೇ ಹೆಂಡತಿ ಮಕ್ಕಳು ಸೇರಿ ಕುಟುಂಬ ಬದುಕಬೇಕು, ಹೆಚ್ಚಿನ ಕೂಲಿಕಾರ ಕುಟುಂಬಗಳು ಕಾಲುವೆಯ ಪಕ್ಕದಲ್ಲಿ ಇಲ್ಲವೇ ರಸ್ತೆಯ ಬದಿಗಳಲ್ಲಿಯ ಜೋಪಡಿಯಲ್ಲಿ ವಾಸಮಾಡುತ್ತಿವೆ. ಇವರು ಎಲ್ಲಾ ನಾಗರೀಕ ಸೌಲಭ್ಯದಿಂದ ವಂಚಿತರು. ಮಹಿಳೆಯರ ಸಂಕಷ್ಟವಂತೂ ಹೇಳತೀರದು. ಮಕ್ಕಳ ಪೋಷಣೆ, ವೃದ್ಧರ ಆರೈಕೆ, ಮನೆಗೆಲಸ ಮಾಡಿಕೊಂಡು ಗದ್ದೆಯ ಬಯಲಿನಲ್ಲಿ ಬಿಸಲು ಮಳೆಯೆನ್ನದೇ ಕೂಲಿ ಮಾಡಿ ಸಂಜೆಗೆ ಗುಡಿಸಲಿಗೆ ಬಂದು ತಾನು ತಂದ 20 ರೂ.ಗಳಿಂದಲೇ ದಿನಸಿ ಖರೀದಿ ಮಾಡಿ ನಂತರ ಮನೆಗೆಲಸವನ್ನು ಸಹಿತ ತಾನೇ ಮಾಡಿ ನಿದ್ದೆಹೋಗುವದರೊಂದಿಗೆ ಅವಳ ದಿನಚರಿ ಅಂತ್ಯಗೊಳ್ಳುತ್ತದೆ. ಈ ರೀತಿಯ ಬದುಕು ಸಾಗಿಸುವ ಕೃಷಿ ಕೂಲಿಕಾರರ ಕುಟುಂಬಗಳು ಒಂದು ನಿರ್ಣಾಯಕ ಶಕ್ತಿಯಾಗಿವೆ.

ಕೃಷಿ ಕೂಲಿಕಾರರ ಮೇಲೆ ಹೊಸ ದಾಳಿ

ಕಳೆದ 5-6 ವರ್ಷಗಳಿಂದ ಹಾರ್ವೆಸ್ಟರುಗಳು ಹೊಲಕ್ಕೆ ನುಗ್ಗಿ ಕೃಷಿ ಕೂಲಿಕಾರರ ಆದಾಯವನ್ನೇ ಕಸಿದುಕೊಂಡಿವೆ. ದಿನಕ್ಕೆ 200ರಿಂದ 250 ಕೂಲಿಕಾರರ ಕೆಲಸ ಮಾಡುವ ಸಾಮರ್ಥ್ಯ ಇವಕ್ಕೆ ಇದ್ದು ಕನಿಷ್ಠ 200ಕ್ಕಿಂತಲೂ ಹೆಚ್ಚು ಹಾರ್ವೆಸ್ಟರುಗಳು ಪಂಜಾಬ್, ತಮಿಳುನಾಡು, ಆಂಧ್ರಪ್ರದೇಶಗಳಿಂದ ಬಂದಿವೆ. ಭತ್ತದ ಬೆಳೆ ಕೊಯ್ಯುವ, ಹಸನು ಮಾಡಿ ಚೀಲಕ್ಕೆ ಕಾಳು ತುಂಬುವ ಕೆಲಸವನ್ನೆಲ್ಲಾ ಮಾಡುತ್ತವೆ. ದಿನ ಒಂದಕ್ಕೆ 50 ಸಾವಿರ ಕೂಲಿಕಾರರ ಕೆಲಸ ಮಾಡುವ ಈ ಯಂತ್ರಗಳು ಒಂದು ಕೂಲಿಗೆ ಕನಿಷ್ಠ 50ರಂತೆ ಆದರೂ ದಿನ ಒಂದಕ್ಕೆ ಕೃಷಿ ಕೂಲಿಕಾರರ ಸಮುದಾಯಕ್ಕೆ ಸೇರಬೇಕಾದ 25 ಲಕ್ಷ ರೂ.ಗಳು ಭೂ ಒಡೆಯರಿಗೆ ಹಾರ್ವೆಸ್ಟರ ಮಾಲೀಕರಿಗೇ ಸೇರುತ್ತದೆ. ಇದರಿಂದಾಗಿ ಹತ್ತಿ, ಗೋದಿ, ಸಕ್ಕರೆ, ಸೀಮೆ ಎಣ್ಣೆ, ಬಟ್ಟೆ ಔಷದಿ, ಮುಂತಾದ ಅಗತ್ಯ ವಸ್ತುಗಳಿಗೆ ಬೇಡಿಕೆ ಕೊರತೆ ಉಂಟಾಗಿ ವಹಿವಾಟುಗಳಲ್ಲಿ ತೀವ್ರ ಹಿಂಜರಿತ ಕಂಡು ಬಂದಿದೆ. ನಗರದ ವ್ಯಾಪಾರಿಗಳು ತಮ್ಮ ಅಂಗಡಿಗಳಲ್ಲಿ ತಮ್ಮ ತಮ್ಮ ಮುಖಗಳನ್ನು ತಾವೇ ನೋಡಿಕೊಳ್ಳುತ್ತಾ ಕಾಲ ಹರಣ ಮಾಡುವುದು ಶೋಚನೀಯ ಸ್ಥಿತಿ ಉಂಟಾಗಿದೆ. ಆರ್ಥಿಕತೆಯ ಇನ್ನೊಂದು ಮುಖವೆಂದರೆ ರೈತರು ಬ್ಯಾಂಕುಗಳಲ್ಲಿ ಲೇವಾ ದೇವಿಗಾರರಲ್ಲಿ ಭಾರೀ ಬಡ್ಡಿಗೆ ಹಣ ತಂದು ಭತ್ತ ಸಂಗ್ರಹ ಮಾಡಿದ್ದು; ಸಾರಿಗೆ, ಬಡ್ಡಿ, ಸಂಗ್ರಹಣ ವೆಚ್ಚ ದಿನೇ ದಿನೇ ಹೆಚ್ಚುತ್ತಿದ್ದು ಗೋದಾಮುಗಳಲ್ಲಿ ಸಂಗ್ರಹವಾದ ಭತ್ತಕ್ಕೆ ದರ ಹೆಚ್ಚಾಗದಿರುವುದರಿಂದ ಹೊರ ರಾಜ್ಯಗಳಿಂದ ಬರಬೇಕಾದ ಬೇಡಿಕೆ ಬಾರದೆ ಇರುವುದರಿಂದ ರೈತರು ಆತಂಕದಲ್ಲಿದ್ದಾರೆ. ಪ್ರತಿ ಗ್ರಾಮಗಳ ಖಾಸಗಿ ಗೋದಾಮುಗಳಲ್ಲಿ ಭತ್ತದ ಸಂಗ್ರಹಣೆ ಹಾಗೇಯೇ ಬಿದ್ದಿದೆ. ಒಟ್ಟಾರೆಯಾಗಿ ಯಾವುದೇ ಜನ ಸಮೂಹ ಅದು ರೈತರಿರಲೀ, ವ್ಯಾಪಾರಿಗಳಿರಲಿ, ನೌಕರನಿರಲಿ, ಮಹಿಳೆಯಿರಲಿ ಎಲ್ಲರೂ ತೀವ್ರ ಬಿಕ್ಕಟ್ಟಿನಲ್ಲಿರುವುದು ಎದ್ದು ಕಾಣಿಸುತ್ತದೆ.

ಕೂಲಿಕಾರರ ಎಚ್ಚರ

ಈಗ ಕೃಷಿ ಕೂಲಿಕಾರರು ಎಚ್ಚರವಾಗುತ್ತಿದ್ದಾರೆ, ಹಾರ್ವೆಸ್ಟರುಗಳ ವಿರುದ್ಧ ಹೋರಾಟಕ್ಕೆ ಸಜ್ಜಾಗಿದ್ದು ಈ ಹಾರ್ವೆಸ್ಟರ ಹಾವಳಿಗಳನ್ನು ಸಂಪೂರ್ಣವಾಗಿ ತೊಡೆದುಹಾಕಲು ಸಿದ್ದರಾಗಿದ್ದಾರೆ.

ಹಾರ್ವೆಸ್ಟರುಗಳನ್ನು ತಡೆಯಬೇಕು, ಪಂಚಾಯತ ಮಟ್ಟದಲ್ಲಿ ಕೃಷಿ ಕೂಲಿಕಾರರ ಯಾದಿ ತಯಾರಿಸಿ ಗುರುತಿನ ಚೀಟಿಗಳನ್ನು ನೀಡಬೇಕು, ಪ್ರತಿ ಗ್ರಾಮ ಪಂಚಾಯತ ಮಟ್ಟದಲ್ಲಿ ಕೂಲಿಗಾಗಿ ಕಾಳು ಯೋಜನೆ ಜಾರಿ ಮಾಡಬೇಕು, ಉದ್ಯೋಗ ಭರವಸೆ ನೀಡಬೇಕು. ಸರಕಾರ ನಿಗದಿಪಡಿಸಿದ ಕನಿಷ್ಠ ಕೂಲಿ ಜಾರಿ ಮಾಡಬೇಕು. ರಸ್ತೆಯ ಬದಿಯಲ್ಲಿ ವಾಸಿಸುವ ಮತ್ತು ವಸತಿ ಹೀನ ಕೃಷಿ ಕೂಲಿಕಾರರಿಗೆ ವಸತಿ ಸೌಲಭ್ಯ ಒದಗಿಸಬೇಕು, ಪಡಿತರ ಚೀಟಿಯನ್ನು ನೀಡಬೇಕು. ಯಂತ್ರ ಬಳಕೆ ಕಡಿಮೆ ಮಾಡಿ ಮಾನವ ಶಕ್ತಿಗೆ ಪ್ರಾಧಾನ್ಯತೆ ನೀಡಬೇಕು. ಈ ಪ್ರಶ್ನೆಗಳ ಆದಾರದಲ್ಲಿ ತಾಲೂಕ ಕೃಷಿ ಕೂಲಿಕಾರರು "ನೆಲ್ಲು ಕೊಯ್ಯುವ ಮಿಶಿನ್ ವಿರುದ್ಧ ಕೃಷಿ ಕೂಲಿಕಾರರ ಜಂಟಿ ಹೋರಾಟ ಸಮಿತಿಯ ನೇತೃತ್ವದಲ್ಲಿ ಏಪ್ರಿಲ್ 2 ರಂದು ಪ್ರತಿಭಟನಾ ಮೆರವಣಿಗೆ ನಡೆಸಿದರು. ಸಾವಿರಾರು ಕೂಲಿಕಾರರು ಮೆರವಣಿಗೆಯಲ್ಲಿ ಪಾಲುಗೊಂಡಿದ್ದರಲ್ಲದೇ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದದ್ದು ಕಂಡು ಬಂತು. ಸ್ಥಳೀಯ ಪ್ರವಾಸ ಮಂದಿರದಿಂದ ಹೊರಟ ರ್‍ಯಾಲಿಯು ತಹಶೀಲ್ ಕಾರ್ಯಾಲಯಕ್ಕೆ ತಲುಪಿ ತಹಶಿಲ್ದಾರರಿಗೆ ಮನವಿ ಪತ್ರ ಅರ್ಪಿಸಲಾಯಿತು. ಕರ್ನಾಟಕ ರಾಜ್ಯ ಕೃಷಿ ಕಾರ್ಮಿಕರ ಸಂಘದ ಸ್ಥಳೀಯ ಸಂಚಾಲಕ ಹನುಮೇಶ ಗಿಣಿವಾರ ಮನವಿ ಪತ್ರ ಅರ್ಪಿಸಿದರು. ನಂತರ ರ್‍ಯಾಲಿಯು ಮರಳಿ ಪ್ರವಾಸಿ ಮಂದಿರದ ಮೈದಾನಕ್ಕೆ ತೆರಳಿ ಅಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು. ಮನವಿ ಪತ್ರ ಕೊಟ್ಟರೆ ಸಾಲದು ಹಾರ್ವೆಸ್ಟರುಗಳನ್ನು ಘೇರಾವು ಮಾಡುವುದರ ಮೂಲಕ ಚಳುವಳಿಯನ್ನು ಇನ್ನೂ ತೀವ್ರಗೊಳಿಸಬೇಕು ಎಂದು ಸಿ.ಪಿ.ಐ (ಎಂ) ಜಿಲ್ಲಾ ಕಾರ್ಯದರ್ಶಿ ಬಿ. ಲಿಂಗಪ್ಪ ಕರೆ ನೀಡಿದರು. ಹಾಗೆಯೇ ಬಹಿರಂಗ ಸಭೆಯನ್ನುದ್ದೇಶಿಸಿ ಬಾಷುಮಿಯಾ, ನಾರಾಯಣ ಕಿಲ್ಲೇದ, ಬೋನವೆಂಚರ ಇತರರು ಮಾತನಾಡಿದರು. ಕೊನೆಯಲ್ಲಿ ದಲಿತ ಸಂಘರ್ಷ ಸಮಿತಿಯ ಗೆಳೆಯರಿಂದ ಹಾಡುಗಳ ಕಾರ್ಯಕ್ರಮದೊಂದಿಗೆ ಅಂದಿನ ಹೋರಾಟ ಮುಕ್ತಾಯವಾಯಿತು.

ಪ್ರಾರಂಭವಾದ ಬಿಸಿ ಚರ್ಚೆ

ಈ ಹೋರಾಟವನ್ನು ಕೃಷಿ ಕೂಲಿಕಾರರು, ಸ್ವಾಗತಿಸಿದರೆ ಹಾರ್ವೆಸ್ಟರುಗಳು ಬ್ರೋಕರಗಳು ಹಾರ್ವೆಸ್ಟರ ಮಾಲೀಕರು ಇದನ್ನು ತೀವ್ರವಾಗಿ ವಿರೋಧಿಸಿ, ತಮ್ಮ ಕೋಪವನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಪರ ಮತ್ತು ವಿರೋಧಗಳ ಚರ್ಚೆ ಆರಂಭವಾಗುತ್ತಿದ್ದಂತೆ ಇತ್ತ ಜಂಟಿ ಸಮಿತಿಯು ತನ್ನ ಹೋರಾಟ ಸ್ವರೂಪವನ್ನು ಗ್ರಾಮೀಣ ಪ್ರದೇಶಗಳಿಗೆ ಕೊಂಡೊಯ್ಯಲು ನಿರ್ಧರಿಸಿದೆ.

ವಿದ್ಯುತ್ ಬಳಕೆದಾರರ ಹೋರಾಟ-ಒಂದು ಅನುಭವ

ಕೆ.ಎನ್. ಉಮೇಶ್

ಒಣ ಒಣ ಬಿಸಿಲು, ಸುಮಾರು 150 ಮಂದಿಯ ಮೆರವಣಿಗೆ ನಡೆದಿದೆ, ಮುಂದಿನ ಸಾಲಿನಲ್ಲಿ ತಿಪಟೂರು- ಚಿ.ನಾ. ಹಳ್ಳಿಯ ಇಬ್ಬರು ಮಾಜಿ ಶಾಸಕರು ನಡೆದಿದ್ದಾರೆ, ಕೆಲವರು ಪಂಪ್‌ಸೆಟ್‌ಗೆ ಮೀಟರ್ ಅಳವಡಿಕೆಗೆ ಧಿಕ್ಕಾರ ಕೂಗುತ್ತಿದ್ದರೆ, ಮಧ್ಯದಲ್ಲಿಯೇ ಜನತಾ ಪರಿವಾರಕ್ಕೆ ಜಯವಾಗಲಿ ಎಂಬ ಘೋಷಣೆಯೂ ಕೆಲವರಿಂದ ನಡೆದಿತ್ತು.

"ಈ ಮೆರವಣಿಗೆಯಲ್ಲಿ ಜನರೇ ಇಲ್ಲವಲ್ಲಾ! ನಮ್ಮ ಸಮಾವೇಶಕ್ಕೆ ಎಷ್ಟೊಂದು ರೈತರು ತಾವಾಗಿಯೇ ಬಂದಿದ್ದರೂ ಅಲ್ಲವಾ ಸರ್? ನೋಡಿ ಈ ಮನೆಹಾಳ ರಾಜಕೀಯದೋರು ಮಾಡೋದೆಲ್ಲಾ ಹಿಂಗೆ, ತಮ್ಮ ರಾಜಕೀಯಕ್ಕಾಗಿ ಹೋರಾಟನೆ ಮುರಿದು ಬಿಡುತ್ತಾರೆ". ಎಂಬ ದುಃಖಿತ ಹಾಗೂ ಆಕ್ರೋಶ ಭರಿತ ಮಾತುಗಳನ್ನು ಸಹಾ ಮೆರವಣಿಗೆಯ ಹಿಂದಿನ ಸಾಲಿನಲ್ಲಿ ನಡೆದಿದ್ದ ನನ್ನೊಂದಿಗೆ, ಅಮಾಯಕ ರೈತರು. ನೊಣವಿನಕೆರೆಯ ಪಕ್ಕದ ಅಲ್ಲೂರಿನ ಚನಪ್ಪ ಆಡುತ್ತಿದ್ದರು. ಅದೇ ಊರಿನ ಮತ್ತೊಬ್ಬ ಹಿರಿಯರು "ಸಮಾವೇಶ ಆದ ದಿನ ರಾತ್ರಿ "ನಮ್ಮೂರಿನೋರೆಲ್ಲಾ ಊರಿನ ಎಲ್ಲಾ ಟ್ರಾಕ್ಟರ್‌ಗಳಲ್ಲಿ ತುಂಬಾ ಭರ್ತಿ ಜನ ಏಪ್ರಿಲ್ ಒಂದರಂದು, ತಿಪಟೂರಿಗೆ ಹೋಗಬೇಕು ಕಣ್ರೋ ಅಂತ ತೀರ್ಮಾನ ಮಾಡಿದ್ವಿ ಸಾರ್. ಆದರೆ ಈ ವಯಸ್ಸಿಗೆ ಏನು ಬಂತೋ, ಇದ್ದಕ್ಕಿದ್ದಂತೆ ಜನತಾ ಪರಿವಾರದ ನಂಜಾಮರಿ, ಮಾಧುಸ್ವಾಮಿ, ಮತ್ತಿತರೆ ಪರಿವಾರದ ಮಂದಿ ಭಾಷಣ ಬಿಗಿದಿದ್ದಾಗ, ಬಹಳಷ್ಟು ಜನ ಒಬ್ಬರೇ ಬಂದು, ಇದೇ ರೀತಿಯ ಮಾತುಗಳನ್ನು ನನ್ನೊಂದಿಗೆ ಹಾಗೂ ಇತರರೊಂದಿಗೆ ಆಡತೊಡಗಿದ್ದರು. ಬಿಸಿಲಿನ ಜಳಕ್ಕಿಂತ ಎದೆ ಆಳದ ನೋವು ಕೆಲವರನ್ನು ಸಿಟ್ಟಿಗೇರಿಸಿತ್ತು. "ಈ ಮನುಷ್ಯ ಸಮಾವೇಶದಲ್ಲಿ ನಮಗೆ ಹೇಳಿದ್ದು ಏನು ಸಾರ್? ನಾನೊಬ್ಬ ರೈತನಾಗಿ ಬರ್ತೀನಿ, ನಿಮ್ಮ ಹೋರಾಟಕ್ಕೆ ಬೆಂಬಲಿಸಿ ಇಡೀ ತಿಪಟೂರು ಬಂದ್ ಮಾಡೋಣ ಅಂತ ಅಲ್ವಾ ಸಾರ್? ಇಲ್ಲಿ ನೋಡಿದರೆ ಬರೋ ರೈತರನ್ನು ಬರದಂಗೆ ಮಾಡಿ, ಇವರ ಜನಾನೂ ಕರೆ ತರದೆ, ನಮ್ಮ ಹೋರಾಟನಾ ಹಾಳು ಮಾಡಿದರಲ್ಲಾ ಇವರೂ--- ನೀವು ಹೇಳಿದಂಗೆ ಎಲ್ಲಾ ಪಕ್ಷದವರನ್ನು ಸೇರಿಸಿ--- ರೈತ ಸಂಘ ಹೋರಾಟ

ಪುಟ 9 ಕ್ಕೆ

ವಿಶಾಲ ಐಕ್ಯ ಹೋರಾಟದ ಮಹತ್ವ

ಪ್ರತಿಭಟನೆ ಅಂತ ಕರಪತ್ರ ಹಂಚಿ, ರೈತರು ಭಾಗ ಆಗೋ ಹಾಗೆ ಮಾಡಿ ಬಿಟ್ಟರು ಸಾರ್. ಮೊದಲು ಎಲ್ಲರೂ ಬರ್ತೀವಿ ಅಂದಿದ್ದೋರು ಜನತಾ ದಳದೋರು ಬೇಕಾದರೆ ಹೋಗಿ, ನಾವು ಬರಲ್ಲಾ , ನಾವು ಬರಲ್ಲಾ ಅಂತ ಒಬ್ಬೊಬ್ಬರೇ ಹಿಂದೆ ಸರಿದು ಬಿಟ್ಟರು, ಇಲ್ಲಿ ನೋಡಿದರೆ ಇವರ ಪಕ್ಷದ ಜನಾನೂ ಬಂದಿಲ್ಲಾ---- ಒಟ್ಟಾರೆ ನಮ್ಮ ರೈತರನ್ನು ಹಾಳು ಮಾಡಿದೋರು ಇವರು ಸಾರ್ ಎಂದರು.

ಮೆರವಣಿಗೆ ಉದ್ದಕ್ಕೂ, ಹಾಗೂ ತಿಪಟೂರು KPTCL ಕಚೇರಿ ಎದುರು, ಮಾಜಿ ಶಾಸಕರಾದ



ವಿಶಾಲ ಹೋರಾಟದಲ್ಲಿ

ಒಣಗುತ್ತಿರುವ ಬೆಳೆ

ಕಾಲುವೆಗೆ ನೀರು ಬಿಡಲು ಒತ್ತಾಯಿಸಿ ಚಳುವಳಿ

ಬೇಸಿಗೆ ಹತ್ತಿರವಾಗುತ್ತಿದೆಯೆಂದರೆ ರೈತರು ದಿಗಿಲೇಳುತ್ತಾರೆ. ಗದ್ದೆಗಳಲ್ಲಿ ಬೆಳೆದು ನಿಂತ ಪೈರು ತಲೆದೂಗುತ್ತಿರುವಾಗಲೇ ನೀರಿನ ಕೊರತೆಯ ನೆಪವೊಡ್ಡಿ ಕಾಲುವೆಗಳಲ್ಲಿ ನೀರನ್ನು ನಿಲ್ಲಿಸಲಾಗುತ್ತದೆ. ಆಗ ರೈತರು ಕಂಗಾಲು, ಇದ್ದು ಎದ್ದು 'ದೊಡ್ಡವರಿಗೆ' ಸಲಾಮು ಹಾಕಿ, ಕೈಕಾಲು ಹಿಡಿದು ನೀರಿಗಾಗಿ ಪರಿತಪಿಸಬೇಕು. ಆದರೀಗ ರೈತರು ಸಂಘಟಿತರಾಗುತ್ತಿರುವಂತೆ ಪರಿಸ್ಥಿತಿ ಬದಲಾಗಿದೆ, ಆಳುವವರ, ಅಧಿಕಾರಿಗಳ ತಾರತಮ್ಯ, ಅನ್ಯಾಯದ ವಿರುದ್ಧ ಹೋರಾಟಕ್ಕೆ ಇಳಿಯುತ್ತಿದ್ದಾರೆ. ಬಳ್ಳಾರಿ ಪ್ರದೇಶದ ರೈತರ ಇತ್ತೀಚಿನ ಒಂದು ಹೋರಾಟದ ವರದಿ ಇಲ್ಲಿದೆ.

ಬಳ್ಳಾರಿಯು 7 ತಾಲೂಕುಗಳನ್ನೊಳಗೊಂಡಿದ್ದು ಹೊಸಪೇಟೆ ತಾಲೂಕಿನಲ್ಲಿ ಬೃಹದಾಕಾರವಾಗಿ ಹರಿಯುವ ತುಂಗಭದ್ರ ನದಿ ಇದೆ, 133,TMC, ನೀರನ್ನು ತನ್ನ ಮಡಿಲಲ್ಲಿ ಇಟ್ಟುಕೊಂಡು ತುಂಬಿ ಹರಿಯುತ್ತಿದೆ. ಈ ನದಿ ನೀರನ್ನು ಪೂರ್ಣವಾಗಿ ಸಮರ್ಪಕ ಬಳಕೆ ಮಾಡದೆ ಹೊಳೆಗೆ ಹರಿದು ಹೋಗುತ್ತಿದೆ, ಬಳ್ಳಾರಿಯ ಶಿರುಗುಪ್ಪ, ಹೊಸಪೇಟೆ ತಾಲೂಕುಗಳ ಶೇ.50ರಷ್ಟು ಭೂಮಿಗೆ ಮಾತ್ರ ನೀರಾವರಿಯಾಗಿದೆ. ಉಳಿದ 5 ತಾಲೂಕುಗಳನ್ನು ಸಂಪೂರ್ಣ ನೀರಾವರಿ ಮಾಡುವ ಸಾಧ್ಯತೆ ಇದ್ದರೂ ಕರ್ನಾಟಕದಲ್ಲಿ ಆಡಳಿತ ನಡೆಸಿದವರು ಚಿಂತನೆ ನಡೆಸಲಿಲ್ಲ. ಆದರೆ ಮುಂದಿನ ದಿನಗಳಲ್ಲಿ ರೈತರ ಜಮೀನಿಗೆ ನೀರು ಕಡಿಮೆಯಾಗುತ್ತಿವೆ ಎಂದು ತಿಳಿದಿದ್ದರೂ ಬಳ್ಳಾರಿ ಜಿಲ್ಲೆಯಲ್ಲಿ ತಲೆ ಎತ್ತಿರುವ ಜಿಂದಾಲ್, ಮುಕುಂದ್, ಕಲ್ಯಾಣಿ ಮುಂತಾದ ಬೃಹತ್ ಕೈಗಾರಿಕೆಗಳಿಗೆ 10 TMCಗೂ ಹೆಚ್ಚು ನೀರನ್ನು ತುಂಗಭದ್ರ ನದಿಯಿಂದ ಬಿಡಲಾಗಿದೆ, ಪ್ರತಿವರ್ಷ ಡಿಸೆಂಬರ್‌ನಲ್ಲಿ HLC ಮತ್ತು ಮಾರ್ಚ್‌ನಲ್ಲಿ LLC (ಲೋಲೆವೆಲ್ ಕ್ಯಾನಲ್)ನೀರಿಗಾಗಿ ಕರ್ನಾಟಕ ಪ್ರಾಂತರೈತ ಸಂಘ ಹೋರಾಟ ಮಾಡುತ್ತಾ ಬಂದಿವೆ.

ಗಾಯದ ಮೇಲೆ ಬರೆ ಎಳೆದಂತೆ

ಜಿಲ್ಲೆಯ ಈ ಮೂರು ತಾಲೂಕಿನಲ್ಲಿ ಸುಮಾರು 62 352 ಎಕರೆ ಪ್ರದೇಶದಲ್ಲಿ 11 ತಿಂಗಳುಗಳ ಕಾಲ LLC ಕಾಲುವೆ ನೀರು ಹರಿಯುತ್ತಿದೆ. ಆದರೆ ಹೊಸಪೇಟೆ ತಾಲೂಕಿನಲ್ಲಿ 2 ಸಕ್ಕರೆ ಕಾರ್ಖಾನೆಗಳು ಇರುವುದರಿಂದ ಅಲ್ಲಿಯ ರೈತರು ಕಬ್ಬು ಬೆಳೆಯನ್ನೇ ಮುಖ್ಯ ಬೆಳೆಯಾಗಿ ಬೆಳೆಯುತ್ತಿದ್ದಾರೆ. ಶಿರುಗುಪ್ಪ ತಾಲೂಕಿನಲ್ಲಿಯು 1 ಸಕ್ಕರೆ ಕಾರ್ಖಾನೆ ಇದ್ದು ಶೇ.50ರಷ್ಟು ಭತ್ತ ಬೆಳೆದರೆ ಬಳ್ಳಾರಿ ತಾಲೂಕಿನಲ್ಲಿ ಬತ್ತವೇ ಮುಖ್ಯ ಬೆಳೆಯಾಗಿದೆ. ಭತ್ತವನ್ನು ಎರಡು ಬೆಳೆ ಬೆಳೆದರೂ ರೈತರು ಮಾತ್ರ ಸಾಲದ ಹೊರೆಯಿಂದ ಮುಕ್ತಿ ಕಂಡಿಲ್ಲ. ಸುಗ್ಗಿ, ಮತ್ತು ಬೇಸಿಗೆ ಬೆಳೆ ಬೆಳೆಯುವ ರೈತರು, ಸುಗ್ಗಿಯ ಬೆಳೆಗೆ ಸಾಹುಕಾರರಿಂದ ತಂದ ಸಾಲವನ್ನು ಬೆಳೆ ಬಂದ ನಂತರ ಸಾಲ ಕಟ್ಟದೇ ಆ ಹಣವನ್ನು ಮುಂದಿನ ಬೇಸಿಗೆ ಬೆಳೆಗೆ ಖರ್ಚು ಮಾಡಿ ಬೆಳೆ ಬಂದ ನಂತರ ಸಾಲ ಕಟ್ಟಿ ಉಳಿದ ಹಣದಲ್ಲಿಯೇ ವರ್ಷವಿಡಿ ತಮ್ಮ ಕುಟುಂಬ ನಿರ್ವಹಣೆ ಮಾಡಿಕೊಳ್ಳುತ್ತಾರೆ.

ಆದರೆ ಈಗ ಪರಿಸ್ಥಿತಿ ಬೇರೆಯೇ ಆಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಯಿಂದಾಗಿ ಎರಡು ಬೆಳೆ ಬೆಳೆದರೂ ಕನಿಷ್ಠ ಜೀವನ ನಡೆಸಲಾಗದ ಹೀನಾಯ ಸ್ಥಿತಿ ತಲುಪಿದ್ದಾರೆ. ವರ್ಷದಿಂದ ವರ್ಷಕ್ಕೆ ಸಾಲದ ಹೊರೆ ಹೆಚ್ಚಾಗುತ್ತಿದೆ. ಇದು ಸಾಲದ್ದಕ್ಕೆ ಪ್ರಕೃತಿ ವಿಕೋಪಗಳು ರೈತರನ್ನು ಕಾಡುತ್ತಾ ಬಂದಿವೆ ಮತ್ತು ಬೆಳೆಗಳಿಗೆ ರೋಗ ರುಜಿನಗಳು ಬಂದು ಬೆಳೆಗಳು ಹಾಳಾಗುತ್ತಾ ಬಂದಿವೆ ಹಾಗೂ ಕಳಪೆ ಗುಣಮಟ್ಟದ ಔಷದಿ, ರಾಸಾಯನಿಕ ಗೊಬ್ಬರ, ಬೀಜಗಳು ರೈತರನ್ನು ಬೆನ್ನ ಹತ್ತಿವೆ. ಬೆಳೆ ಬಂದ ನಂತರ ವ್ಯಾಪಾರಸ್ಥರು ಆಡುವ

ಕುಸಿದಿವೆ. ಈಗ ಸುಟ್ಟಗಾಯದ ಮೇಲೆ ಬರೆ ಎಳೆದಂತೆ ಬೆಳೆ ಬರುವ ಸಮಯದಲ್ಲಿ ರಾಜ್ಯ ಸರ್ಕಾರವು LLC ಕಾಲುವೆಗೆ ನೀರು ನಿಲ್ಲಿಸಿ ರೈತರನ್ನು ಅಪಾಯದ ಅಂಚಿಗೆ ನೂಕಿದೆ.

ಈ ಎಲ್ಲಾ ಅಂಶಗಳು ಸರ್ಕಾರದ ಆಡಳಿತದ ವೈಖರಿಯನ್ನು ಎತ್ತಿ ತೋರುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 62352 ಎಕರೆ ಪ್ರದೇಶದಲ್ಲಿ ಭತ್ತ ಬೆಳೆಯಲಾಗಿದೆ, ಹೊಸಪೇಟೆ, ಶಿರುಗುಪ್ಪಾ 28595 ಎಕರೆ ಹಾಗೂ ಬಳ್ಳಾರಿ ತಾಲೂಕಿನಲ್ಲಿ 25197 ಎಕರೆ ಪ್ರದೇಶದಲ್ಲಿ ಬೆಳೆದು ನಿಂತ ಭತ್ತದ ಬೆಳೆಯು ನೀರಿಲ್ಲದೇ ಕಾಳುಗಟ್ಟುವ ಹಂತದಲ್ಲಿಯೇ ಒಣಗಿ ಹೋಗುತ್ತಿದೆ. ರೈತರು ಒಂದು ಎಕರೆಗೆ 5000 ನಂತೆ ರೂ. ಖರ್ಚು ಮಾಡಲಾಗಿದ್ದು 10,000 ರೂ.ಗಳ ಬೆಳೆ ಬರಬಹುದೆಂದು ಅಂದಾಜು ಮಾಡಲಾಗಿತ್ತು. ಈಗ ಸರ್ಕಾರವು ನೀರು ನಿಲ್ಲಿಸಿರುವುದರಿಂದ 1 ಎಕರೆಗೆ 15,000 ರೂ.ಗಳು ನಷ್ಟವಾದಂತಾಗುತ್ತದೆ. 62352 ಎಕರೆಗೆ ಒಟ್ಟು 93,52,80,000 ರೂ.ಗಳು (ತೊಂಬತ್ತ ಮೂರು ಕೋಟಿ ಐವತ್ತೆರಡು ಲಕ್ಷದ ಎಂಬತ್ತು ಸಾವಿರ)ರೂ.ಗಳು ರೈತರು ನಷ್ಟ ಅನುಭವಿಸಬೇಕಾಗಿದೆ.

ಭ್ರಷ್ಟಾಚಾರ ನಿರ್ಲಕ್ಷ್ಯ

ತುಂಗಭದ್ರ ಎಡ ಮತ್ತು ಬಲದಂಡೆ ಕಾಲುವೆ ನೀರು ಬಳಕೆದಾರ ರೈತರಿಂದ ಪ್ರತಿ ವರ್ಷ ಕೋಟಿಗಟ್ಟಲೆ ಹಣವನ್ನು ನೀರಿನ ತೆರಿಗೆಗಾಗಿ ವಸೂಲಿ ಮಾಡುವ ಸರ್ಕಾರ ಆ ಹಣವನ್ನು ನೀರಿನ ಸಂಗ್ರಹಣೆ ಹೆಚ್ಚಳಕ್ಕೆ ಬಳಸದೇ ಕಾಲುವೆ ರಿಪೇರಿ ಹೆಸರಿನಲ್ಲಿ ಹಣ ದುರುಪಯೋಗ ಮಾಡುತ್ತಿದೆ. ಕಾಲುವೆಗೆ ನೀರು ಬಿಡುವ ಸಮಯದಲ್ಲಿ ಟೆಂಡರ್ ಕರೆದು ತರಾತುರಿಯಲ್ಲಿ ಕೆಲಸ ಮುಗಿಸಿ ಗುತ್ತಿಗೆದಾರರಿಂದ ಹಣ ದೋಚುವ ಕೆಲಸ ಮಾಡುತ್ತಿದೆ. ಕರ್ನಾಟಕ ಪ್ರಾಂತ ರೈತ ಸಂಘವು ಭ್ರಷ್ಟಾಚಾರ ನಿರ್ಮೂಲನೆ ಹಾಗೂ ನೀರಿನ ಸಂಗ್ರಹಣೆ ಹೆಚ್ಚಳಕ್ಕಾಗಿ ಹಲವು ಬಾರಿ ಸರ್ಕಾರದ ಜೊತೆ ಮಾತುಕತೆ ನಡೆಸಿದೆ. ಕಳೆದ ಒಂದು ದಶಕದಿಂದಲೂ ನದಿಗೆ ಹೂಳು ಬರದಂತೆ ತಡೆಗೋಡೆಗಳನ್ನು ನಿರ್ಮಿಸುವಂತೆಯೂ, ನದಿಯಲ್ಲಿ ತುಂಬಿದ ಹೂಳು ತೆಗೆಸುವಂತೆಯೂ ಮತ್ತು ಜಿಲ್ಲೆಯ ಕೆಲಭಾಗಗಳಲ್ಲಿ ಸಮನಾಂತರ ಜಲಾಶಯಗಳನ್ನು ನಿರ್ಮಿಸುವಂತೆಯೂ ಸರ್ಕಾರವು ಮಾತ್ರ ಜಿಡ್ಡುಗಟ್ಟಿದ ಬಂಡೆಯಂತೆ ಭಂಡತನಕ್ಕೆ ಬಿದ್ದಿದೆ. ಸರ್ಕಾರದ ಇಂತಹ ನಿರ್ಲಕ್ಷ್ಯ ಧೋರಣೆಯಿಂದಾಗಿ ತುಂಗಭದ್ರ ನದಿಯಲ್ಲಿ ಶೇ 28ರಷ್ಟು ಹೂಳು ತುಂಬಿ ನೀರಿನ ಸಂಗ್ರಹಣೆ ಮಟ್ಟ ಕಡಿಮೆಯಾಗುತ್ತಾ ಬಂದಿದೆ. ಇದರ ಪ್ರತಿಫಲವಾಗಿಯೇ ಈಗ ರೈತರ ಬೆಳೆಗೆ ನೀರು ಸಿಗದಂತಾಗಿ ಭತ್ತದ ಬೆಳೆಗಳು ಒಣಗುತ್ತಿವೆ.

ಬಳ್ಳಾರಿ ಬಂದ್

ನೀರು ನಿಲ್ಲಿಸಿಯೇ ಬಿಟ್ಟರು - ಆರಂಭವಾಯಿತು ಹೋರಾಟ

ಇದೇ ಮಾರ್ಚ್ 20ರಂದು ನೀರು ನಿಲ್ಲಿಸುವುದಾಗಿ ತುಂಗಭದ್ರ ಜಲ ಮಂಡಳಿ ಪ್ರಕಟಿಸಿತ್ತಾದರೂ ಭತ್ತದ ಬೆಳೆ ಹಾಲು ಕಟ್ಟುವ ಹಂತದಲ್ಲಿರುವುದರಿಂದ ನೀರು ನಿಲ್ಲಿಸಲಾರದೆಂಬ ನಂಬಿಕೆ ರೈತರಲ್ಲಿ ಬೇರೂರಿತ್ತು. ಆದರೆ ಲಜ್ಜೆಗೆಟ್ಟ ಕಾಂಗ್ರೆಸ್‌ನ ರಾಜ್ಯ ಸರ್ಕಾರ ಏಕಾಏಕಿ, LLC ಕಾಲುವೆಗೆ ನೀರು ನಿಲ್ಲಿಸಿಯೇಬಿಟ್ಟಿತು. ಆಗ ಕರ್ನಾಟಕ ಪ್ರಾಂತರೈತ ಸಂಘವು 500ಕ್ಕೂ ಹೆಚ್ಚು ರೈತರನ್ನು ಸೇರಿಸಿ ಬಳ್ಳಾರಿಯ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ರಸ್ತೆಯಲ್ಲಿ ಒಲೆ ಹಚ್ಚಿ ಅಡುಗೆ ಮಾಡುವ ಮೂಲಕ 21-ಮಾರ್ಚ್ 02ರಂದು ಧರಣಿ ಪ್ರಾರಂಭಿಸಿತು. ರಸ್ತೆ ಮೇಲೆ ಬೆಂಕಿ ಹಾಕಿದ್ದರಿಂದ ಪೋಲೀಸ್ ಇಲಾಖೆಯೇ ಅಲ್ಲಿಗೆ ಧಾವಿಸಿ ಬೆಂಕಿ ತೆಗೆಯಲು ಪ್ರಯತ್ನಪಟ್ಟರೂ ರೈತರ ಸಮೂಹ ಪೋಲೀಸರ ವಿರುದ್ಧ ತಿರುಗಿ ಬಿದ್ದು ರಸ್ತೆ ತಡೆ ನಡೆಸಿದರು. ಆಗ ಪೋಲೀಸರು ಸುಮ್ಮನೇ ಹಿಂದೆ ಸರಿದರು. ಸಂಜೆವರೆಗೂ ಧರಣಿ ನಡೆಸಿದರೂ ಜಿಲ್ಲಾಧಿಕಾರಿಗಳು ಬರಲಿಲ್ಲ. ಆಗ ಪ್ರಾಂತರೈತಸಂಘದ ತೀರ್ಮಾನದಂತೆ, ನಗರದ ಹೃದಯ ಭಾಗದ ಗಡಿಗಿ ಚನ್ನಪ್ಪ ವೃತ್ತದ 4 ರಸ್ತೆಗಳನ್ನು ಬಂದ್ ಮಾಡಿ ರಸ್ತೆ ತಡೆ ನಡೆಸಲಾಯಿತು. ನಂತರ ಚಳುವಳಿಗಾರರ ಬಳಿ ಬಂದು ಜಿಲ್ಲಾಧಿಕಾರಿಗಳು ಮನವಿ ಸ್ವೀಕರಿಸಿದಾದರು. ಆದರೆ ರೈತರಿಗೆ ನೀರು ಬಿಡುವ ಯಾವುದೇ ಬರವಸೆ ನೀಡಲಿಲ್ಲ. ಆಗ ಕರ್ನಾಟಕ ಪ್ರಾಂತರೈತ ಸಂಘದ ಬಳ್ಳಾರಿ ಜಿಲ್ಲಾದ್ಯಕ್ಷರಾದ ವಿ.ಎಸ್.ಶಿವಶಂಕರ್‌ರವರು ಉಗ್ರ ಹೋರಾಟ ಮಾಡುವುದಾಗಿ ಜಿಲ್ಲಾಧಿಕಾರಿಗಳಿಗೆ ಎಚ್ಚರಿಕೆ ನೀಡಿದರು ಮತ್ತು ಧರಣಿ ಮುಂದುವರೆಸುವುದಾಗಿ ಕರ್ನಾಟಕ ಪ್ರಾಂತ ರೈತ ಸಂಘ ಘೋಷಿಸಿತು. ಧರಣಿಗೆ ಬಂದ ರೈತರಲ್ಲಿ ಸುಮಾರು 200ಕ್ಕೂ ಹೆಚ್ಚು ರೈತರು ಬಳ್ಳಾರಿ ನಗರದ ಜಿಲ್ಲಾಧಿಕಾರಿ ಕಛೇರಿ ಮುಂದೆ ಹಾಕಿದ್ದ ಟೆಂಟ್‌ನಲ್ಲಿಯೇ ಮಲಗಿಕೊಂಡು ಮರುದಿನ ಧರಣಿ ಮುಂದುವರೆಸಿದರೆ ಜಿಲ್ಲಾ ಸಮಿತಿ ಜಂಟೀ ಕಾರ್ಯದರ್ಶಿ ಕೆ.ಗಾದಿಲಿಂಗಪ್ಪ,

ತಾಲೂಕಿನಲ್ಲಿ ಜೀಪ್ ಜಾತ ನಡೆಸಿ ಮಾರ್ಚ್ 22 ರಂದು 400 ರೈತರ ಧರಣಿ ನಡೆಸಲಾಯಿತು. ಆಗ ಹೋರಾಟಕ್ಕೆ ಬಗ್ಗಿದಂತೆ ಕಂಡ ರಾಜ್ಯ ಸರ್ಕಾರವು ರೈತರ ಜಮೀನಿಗೆ 2, ಹಾಗೂ ಕುಡಿಯಲು 1ರಂತೆ ಒಟ್ಟೂ 3. TMC ನೀರು ಬಿಡುವುದಾಗಿ ಸೂಚನೆ ನೀಡಿತು. ನಂತರ ಭದ್ರಾನದಿ ಕೆಳಗಿನ ರೈತರ ಒತ್ತಡಕ್ಕೆ ಮಣಿದು LLC ಕಾಲುವೆಗೆ ನೀರು ಬಿಡುವುದಿಲ್ಲವೆಂದು LLC ಸಭೆ ಮೇಲೆ ಒತ್ತಡ ತರಲು ಕರ್ನಾಟಕ ಪ್ರಾಂತ ರೈತ ಸಂಘ ಬಳ್ಳಾರಿ ಬಂದ್‌ಗೆ ಕರೆ ನೀಡಿದ್ದು ಬಂದ್‌ನಲ್ಲಿ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಜನ ರೈತರು ಭಾಗವಹಿಸಿದ್ದರು. ಆದರೆ ಕೊಟ್ಟ ಮಾತಿನಂತೆ ಸರ್ಕಾರ ನಡೆದುಕೊಳ್ಳಲಿಲ್ಲ.

ಬಳ್ಳಾರಿ ಬಂದ್‌ನಲ್ಲಿ ಸಂಯುಕ್ತ ಜನತಾದಳ ಮತ್ತು ರಾಜ್ಯ ರೈತ ಸಂಘ ಸಹ ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿದವು. ಬಳ್ಳಾರಿ ನಗರದ ಬುಡಾದ ಮಾಜೀ ಅಧ್ಯಕ್ಷರಾದ ನಾರಾ ಸೂರಿ ನಾರಾಯಣ ರೆಡ್ಡಿಯವರು ನೂರಾರು ಜನರೊಂದಿಗೆ 3 ದಿನಗಳ ಕಾಲ ಚಳುವಳಿಯಲ್ಲಿ ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿ ಮಾತನಾಡಿದರು. ಜನತಾದಳದ ಮಾಜೀ ಶಾಸಕ ರೇವಣ ಸಿದ್ದಯ್ಯ ಬೆಂಬಲ ವ್ಯಕ್ತಪಡಿಸಿ ಸರ್ಕಾರದ ನೀತಿ ವಿರುದ್ಧ ಮಾತನಾಡಿದರು. ಬಂದ್ ಆಚರಣೆಯ ದಿನ ರಾಜ್ಯದ ಮುಖ್ಯಮಂತ್ರಿ ಕೃಷ್ಣ, ನೀರಾವರಿ ಸಚಿವ ಹೆಚ್.ಕೆ.ಪಾಟೀಲ್ ಮತ್ತು ಕುರುಗೋಡು ಶಾಸಕ ಹಾಗೂ KPCCI ಅಧ್ಯಕ್ಷ ಅಲ್ಲಂ ವೀರಭದ್ರಪ್ಪ ಇವರ ಪ್ರತಿಕೃತಿಯನ್ನು ಧಹನಮಾಡಿ, ಗಡಗಿ ಚನ್ನಪ್ಪ ವೃತ್ತದಿಂದ ಬಳ್ಳಾರಿ ನಗರವಿಡೀ ಮೆರವಣಿಗೆ ಮೂಲಕ 2 ಸಾವಿರಕ್ಕೂ ಹೆಚ್ಚು ರೈತರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಂಚರಿಸಿ ಅದೇ ಗಡಿಗಿ ಚನ್ನಪ್ಪ ವೃತ್ತದ ಬಳಿ ಸಮಾವೇಶಗೊಂಡಿತು. ರೈತರನ್ನುದ್ದೇಶಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ಪ್ರಸನ್ನಕುಮಾರ್ ಮಾತನಾಡಿದರಲ್ಲದೇ 3 ದಿನಗಳು ರೈತರು ದೊಡ್ಡ ಚಳುವಳಿ ನಡೆಸುತ್ತಿದ್ದರೂ ಜಿಲ್ಲೆಯ ಕಾಂಗ್ರೆಸ್‌ನ 8 ಜನ ಶಾಸಕರು, ಸಂಸದರು ಅದರಲ್ಲಿ ಇಬ್ಬರು ಮಂತ್ರಿಗಳು ಇದ್ದು ಸೌಜನ್ಯಕ್ಕಾದರೋ ಬಾರದಿರುವುದನ್ನು ಸಭೆಯಲ್ಲಿ ಖಂಡಿಸಿದರು. KPRS ನ ಜಿಲ್ಲಾ ಸಮಿತಿ ಅದ್ಯಕ್ಷರಾದ ವಿ.ಎಸ್.ಶಿವಶಂಕರ್, ಜಂಟೀ ಕಾರ್ಯದರ್ಶಿ ಕೆ.ಗಾದಿಲಿಂಗಪ್ಪ ಇವರು ಸರ್ಕಾರದ ರೈತ ವಿರೋದಿ ನೀತಿಗಳ ಬಗ್ಗೆ ಸಭೆಯಲ್ಲಿ ವಿವರಿಸಿದರು. ಈ ಸಭೆಯಲ್ಲಿ KPRS ಮುಖಂಡ ರಾದ ಎಚ್.ರಾಯನಗೌಡ, ಕೆ.ಮಲ್ಲಯ್ಯ, ಎನ್.ರಾಮಲಿಂಗಪ್ಪ, DYFI ಮುಖಂಡ ಎಸ್.ಪಿ.ಮಹಮ್ದ್ ಖಾನ್, CITU ನ ಮುಖಂಡ ಅಂಪೆ ಹಾಲೇಶ್ವರಗೌಡ, SFI ಮುಖಂಡರು ಹಾಗೂ ರೈತ ನಾಯಕರಾದ ಹೆಚ್.ವಾಗೇಶ್ ಮುಷ್ಠಗಟ್ಟಿ ಮಾರೆಣ್ಣ, ಹನುಮಂತಪ್ಪ, ಮತ್ತು ಸಿ.ಜಿ. ರುದ್ರಗೌಡ, ಎನ್.ತಿಪ್ಪೇರುದ್ರಪ್ಪ, ರಾಜ್ಯ ರೈತ ಸಂಘದ ಈರಪ್ಪ, ಸಂಜೀವಪ್ಪ ಬಾಗವಹಿಸಿದರು.


ಬಳ್ಳಾರಿ ಮತ್ತು ಗಂಗಾವತಿಯಲ್ಲಿ ನೀರಿಗಾಗಿ ಹೋರಾಟ

ವರದಿ: ಕೆ. ಗಾದಿಲಿಂಗಪ್ಪ

ಮೋದಿ ವಜಾಗೊಳಿಸಲು ಆಗ್ರಹಿಸಿ ದೇಶವ್ಯಾಪಿ ಪ್ರತಿಭಟನೆ

ಗುಜರಾತಿನ ನರಹಂತಕ ಮುಖ್ಯಮಂತ್ರಿ ನರೇಂದ್ರಮೋದಿಯ ರಾಜಿನಾಮೆಗೆ ಒತ್ತಾಯಿಸಿ, ಮುಂದುವರೆಯುತ್ತಿರುವ ಹಿಂಸಾಚಾರವನ್ನು ತಡೆಗಟ್ಟಲು ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಳ್ಳಲು ಒತ್ತಾಯಿಸಿ ಮತ್ತು ಮಾನವ ಹಕ್ಕುಗಳ ಆಯೋಗದ



ದೆಹಲಿಯಲ್ಲಿ..

ಶಿಫಾರಸ್ಸುಗಳನ್ನು ಜಾರಿಗೊಳಿಸಲು ಏಪ್ರಿಲ್ 17ರಂದು ದೇಶಾದ್ಯಂತ ಪ್ರತಿಭಟಿಸಲು ಕರೆ ನೀಡಿದ್ದ ಪೀಪಲ್ಸ್ ಫ್ರಂಟ್ ಕರೆಗೆ ದೇಶಾದ್ಯಂತ ತೀವ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಸಂಸತ್ತಿನ ಕಲಾಪಗಳನ್ನು ಬಹಿಷ್ಕರಿಸಿ ರಂಗದ ಶಾಸಕರು ನವದೆಹಲಿಯ ಜಂತರ್‌ಮಂತರ್ ಬಳಿ ತೀವ್ರ ಪ್ರತಿಭಟನೆ ನಡೆಸಿದರು. ರಂಗದ ನಾಯಕರುಗಳಾದ ಜ್ಯೋತಿ ಬಸು, ಹರಕಿಷನ್ ಸಿಂಗ್ ಸುರ್ಜಿತ್, ಹೆಚ್.ಡಿ.ದೇವೆಗೌಡ, ಮುಲಾಯಂ ಸಿಂಗ್ ಯಾದವ್, ಎ.ಬಿ.ಬರ್ದನ್, ಪ್ರತಿಭಟನೆಯ ನೇತೃತ್ವ ವಹಿಸಿ, ನೆರೆದಿದ್ದ ಜನಸಮೂಹವನ್ನುದ್ದೇಶಿಸಿ ಮಾತನಾಡಿದರು, ಇದರಲ್ಲಿ ಸಮಾಜಸೇವಕಿ ನಫೀಸಾ ಅಲಿ, ಚಿತ್ರತಾರೆ ನಂದಿತಾದಾಸ್‌ರಂತಹ ಪ್ರಮುಖರು ಭಾಗವಹಿಸಿದ್ದರು.

ಇತ್ತ ಬೆಂಗಳೂರಿನಲ್ಲಿ ಜನತಾದಳ (ಎಸ್) ಕಛೇರಿಯಿಂದ ಸಿದ್ದರಾಮಯ್ಯ, ಸಿ.ಪಿ.ಐ(ಎಂ)ನ ಕಾರ್ಯದರ್ಶಿ ಎಸ್.ಸೂರ್ಯನಾರಾಯಣರಾವ್, ಸಿ.ಪಿ.ಐನ ಸಿದ್ದನಗೌಡ ಪಾಟೀಲ್ ನೇತೃತ್ವದಲ್ಲಿ ಹೋರಟ ಸಿ.ಪಿ.ಎಂ, ಸಿ.ಪಿ.ಐ ಜನತಾ ಪರಿವಾರದ ಸಾವಿರಾರು ಕಾರ್‍ಯಕರ್ತರು ಬಸವೇಶ್ವರ ವೃತ್ತದವರೆಗೆ ಘೋಷಣೆ ಕೂಗುತ್ತ ಮೆರವಣಿಗೆ ನಡೆಸಿ, ಬಸವೇಶ್ವರ ವೃತ್ತದಲ್ಲಿ ಬಹಿರಂಗಸಭೆ ನಡೆಸಿದರು. ಈ ಸಭೆಯುನ್ನುದ್ದೇಶಿಸಿ, ಸಿದ್ಧರಾಮಯ್ಯ, ಸೂರ್ಯನಾರಾಯಣ ರಾವ್, ಸಿದ್ದನಗೌಡ ಪಾಟೀಲ್ ಮಾತನಾಡಿ ಮೋದಿ



ಬೆಂಗಳೂರಿನಲ್ಲಿ..

ರಾಜಿನಾಮೆಗೆ ಆಗ್ರಹಿಸಿ ಗುಜರಾತ್ ಹಿಂಸಾಚಾರವನ್ನು ತಡೆಗಟ್ಟಲು ಒತ್ತಾಯಿಸಿದರು.

ಗುಜರಾತಿನ ಮುಖ್ಯಮಂತ್ರಿ ನರೇಂದ್ರ ಮೋದಿ ಹಿಂಸಾಚಾರವನ್ನು ಕೇವಲ '72' ಗಂಟೆಗಳಲ್ಲಿ ತಡೆಗಟ್ಟಿದ್ದೇವೆ ಎಂದು ಘೋಷಿಸಿಕೊಂಡಿದ್ದರೂ ಸತತ '7' ವಾರಗಳ ನಂತರವೂ ಈ ಸರ್ಕಾರಿ ಪ್ರಯೋಜಿತ ಹತ್ಯಾಕಾಂಡ ನಿಂತಿಲ್ಲ, ಕೊಲೆಗಡುಕರನ್ನು ನಗ್ನವಾಗಿ ಬೆಂಬಲಿಸಲಾಗುತ್ತಿದೆ, ಅಲ್ಪಸಂಖ್ಯಾತರನ್ನು ಮಲತಾಯಿ ಧೋರಣೆಯಿಂದ ನೋಡಲಾಗುತ್ತಿದೆ, ಪರಿಹಾರ ಶಿಬಿರಗಳಲ್ಲಿರುವ ಜನತೆ ಅಮಾನವೀಯ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

ಇಡೀ ದೇಶವೇ ಈ ಘಟನೆಗಳಿಗಾಗಿ 'ಥೂ' ಎಂದು ಉಗಿಯುತ್ತಿದ್ದರೂ ಬಿಜೆಪಿ ಮುಖಂಡರು ಭಂಡತನ, ಹುಂಬತನದಿಂದ ವರ್ತಿಸುತ್ತಿದ್ದಾರೆ. ಪಣಜಿಯ ರಾಷ್ಟ್ರೀಯ ಕಾರ್‍ಯಕಾರಿಣಿಸಭೆಯಲ್ಲಿ ಮೋದಿಯನ್ನು ರಕ್ಷಿಸಿಕೊಳ್ಳಲು ತೀರ್ಮಾನಿಸಲಾಗಿದೆ, ನರೇಂದ್ರ ಮೋದಿ ನಾಯಕತ್ವದಲ್ಲಿ ಹೊಸ ಚುನಾವಣೆ ನಡೆಸಿ, ಜನಾದೇಶ ಪಡೆಯಲು ನಿರ್ದೇಶನ ನೀಡಲಾಗಿದೆ, ವಾಜಪೇಯಿಯವರು ಗುಜರಾತಿನ ಸಾಮೂಹಿಕ ನರಮೇದವನ್ನು ಯಾವ ನಾಚಿಕೆಯೂ ಇಲ್ಲದೇ ಸಮರ್ಥಿಸಿಕೊಳ್ಳುತ್ತಿದ್ದಾರೆ. ಪಾರ್ಲಿಮೆಂಟಿನಲ್ಲಿ ಚರ್ಚೆಗೆ ನಿರಾಕರಿಸುತ್ತಿದ್ದಾರೆ.

ಗುಜರಾತಿ ಈ ಕೋಮುವಾದಿಗಳ ಅಟ್ಟಹಾಸಕ್ಕೆ ಸಿಕ್ಕು ನಲುಗಿ ಹೋಗಿದೆ, ಈಗಾಗಲೇ 2500 ಕೋಟಿಗಳಿಗೂ ಅಧಿಕ ಆರ್ಥಿಕ ನಷ್ಟವನ್ನು ಅನುಭವಿಸಿರುವ ಗುಜರಾತ್, ಮುಂದೆ ದೇಶದಲ್ಲೇ ಕೈಗಾರಿಕೆಯಲ್ಲಿ ಮುಂದುವರೆದ ರಾಜ್ಯ ಎಂಬುದನ್ನು ನಾಶಮಾಡಿಕೊಳ್ಳುವ ಬೀತಿಯಲ್ಲಿದೆ, ಆರ್ಥಿಕವಾಗಿ ಮುಂದಿನ ದಿನಗಳಲ್ಲಿ ಭೀಕರ ಸಂಕಷ್ಟಕ್ಕೆ ತುತ್ತಾಗಲಿದೆ. ಕಾಂಗ್ರೆಸ್ಸಿಗೆ ಪರ್‍ಯಾಯವೆಂದು ಅಧಿಕಾರಕ್ಕೆ ಬಂದ ಕೋಮುವಾದಿ ಬಿಜೆಪಿ ಆರ್ಥಿಕ ನೀತಿಗಳಲ್ಲಿ ಕಾಂಗ್ರೆಸ್ ರಾತ್ರಿ ಕೊಳ್ಳೆ ಹೊಡೆದರೆ ಬಿಜೆಪಿ ಹಗಲೇ ದರೋಡೆ ಮಾಡುವ 'ಹಗಲು ದರೋಡೆ'ಕೋರ ಎಂದಾಗಿಬಿಟ್ಟಿದೆ. ದೇಶದ ಸಾರ್ವಭೌಮತ್ವವನ್ನೇ ಕತ್ತರಿಸಿಹಾಕುತ್ತಿರುವ ಬಿಜೆಪಿ ಜನತೆಯ ಕೆಂಗಣ್ಣಿಗೆ ಗುರಿಯಾಗುತ್ತಿದೆ.

ಆರ್ಥಿಕ ನೀತಿಗಳಿಂದ ಜನತೆಯ ವಿಶ್ವಾಸಗಳಿಸಿ ಚುನಾವಣೆಗಳನ್ನು ಗೆಲ್ಲಲಾರದ ಬಿಜೆಪಿ ಪ್ರತಿಚುನಾವಣೆ ಸಂದರ್ಭದಲ್ಲೂ ಮಂದಿರ, ಮಸೀದಿ ಪ್ರಶ್ನೆಗಳನ್ನೆತ್ತಿ ಕೋಮು ಗಲಬೆ ಸೃಷ್ಟಿಸಿ ಜನರ ಶವಗಳ ಮೇಲೆ ಅಧಿಕಾರ ನಡೆಸಲು ಹವಣಿಸುತ್ತದೆ.

1998ರಿಂದ ನಡೆದ 22 ರಾಜ್ಯ ವಿಧಾನ ಸಭಾ ಚುನಾವಣೆಗಳಲ್ಲಿ 18ರಲ್ಲಿ ಬಿಜೆಪಿ ನೆಲಕಚ್ಚಿದೆ. 19ನೆಯದಾಗಿ ಗೋವಾ ಸೇರುತ್ತದೆ ಮತ್ತು 20ನೆಯದಾಗಿ ಆ ಸಾಲಿಗೆ ಗುಜರಾತ್ ಸೇರಬೇಕಿತ್ತು. ಆದರೆ ಉತ್ತರ ಪ್ರದೇಶ ಚುನಾವಣೆಗಳನ್ನು 'ಅಯೋಧ್ಯೆ' ಹೆಸರಲ್ಲಿ ಗೆಲ್ಲಲು ವಿಫಲವಾಗಿ, ತನ್ನ ಭದ್ರಕೋಟೆ ಎಂದೆಣಿಸಿರುವ ಗುಜರಾತನ್ನು ಉಳಿಸಿಕೊಳ್ಳಲು ಬಿಜೆಪಿ ಗುಜರಾತಿಗೆ ಬೆಂಕಿಯಿಟ್ಟಿದೆ. ''ಉರಿವ ಮನೆಯಲ್ಲಿ ಗಳ ಹಿರಿವ'' ದೇಶಪ್ರೇಮಿಗಳಿವರು.

ಇಂದು ಗುಜರಾತಿಗೆ ಬೆಂಕಿಯಿಟ್ಟವರು, ಗರ್ಬಿಣಿಯ ಹೊಟ್ಟೆ ಸೀಳಿ ಹಸುಳೆಯನ್ನು ತುಂಡು ಮಾಡಿ ಬೆಂಕಿಗಿಟ್ಟವರು, ಮಾತೆಯರ ಬಗ್ಗೆ ಭಾಷಣ ಬಿಗಿದು ಬೀದಿಯಲ್ಲೆ ಅತ್ಯಾಚಾರ ಮಾಡಿದವರು, ಅಂಗಡಿಗಳಿಗೆ ಬೆಂಕಿಯಿಟ್ಟು ಸಿಕ್ಕಷ್ಟು ದೋಚಿದವರು ಇವರು. ಆದ್ದರಿಂದ ಗುಜರಾತ್ ತಾತ್ಕಾಲಿಕವಾಗಿಯಾದರೂ ಉಳಿಯಲು, ಅಲ್ಲಿಯ ಅಲ್ಪಸಂಖ್ಯಾತ ಜನತೆಗೆ ಸ್ವಲ್ಪವಾದರೂ ಭರವಸೆ ನೀಡಲು ಮೋದಿ ತೊಲಗಬೇಕು, ಗುಜರಾತ್‌ನ ಭವಿಷ್ಯಕ್ಕೆ ಆ ಮೂಲಕ ಭಾರತದ ಭವಿಷ್ಯಕ್ಕೆ ಬಿಜೆಪಿಯನ್ನು ಭಾರತದ ರಾಜಕೀಯ ಭೂಪಟದಿಂದ ಅಳಿಸಿ ಹಾಕಬೇಕು. ಆಗ ಮಾತ್ರ ಭಾರತ ಉಳಿದೀತು.

ಈ ಹಿನ್ನೆಲೆಯಲ್ಲಿ ಏಪ್ರಿಲ್ 17ರ ಪೀಪಲ್ಸ್ ಫ್ರಂಟ್ ಕರೆಗೆ ಅಮೋಘ ಸ್ಪಂದನ ದೇಶಾದ್ಯಂತ ವ್ಯಕ್ತವಾಗಿದೆ, ಮುಂದಿನ ದಿನಗಳಲ್ಲಿ ಅದು ಮತ್ತಷ್ಟು ತೀವ್ರಗೊಳ್ಳುತ್ತದೆ.

ಗುಲ್ಬರ್ಗಾ: ತೊಗರಿಯ ನಾಡಾದ ಗುಲ್ಬರ್ಗಾದಲ್ಲೂ ಪೀಪರ್ಸ್ ಫ್ರಂಟ್ ಕರೆಯ ಮೇರೆಗೆ ಸಿಪಿಐ ಮತ್ತು ಸಿಪಿಐ(ಎಂ) ಪಕ್ಷಗಳು ಏಪ್ರಿಲ್ 17 ರಂದು 'ನರೇಂದ್ರ ಮೋದಿ ರಾಜಿನಾಮೆ'ಗೆ ಒತ್ತಾಯಿಸಿ ಮೆರವಣಿಗೆ ಮತ್ತು ಧರಣಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಸುಮಾರು 250 ಜನ ಕಾರ್‍ಯಕರ್ತರು ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು. ಮೆರವಣಿಗೆಯಲ್ಲಿ ಮಾಜಿ ಸಚಿವರಾದ ಎಸ್.ಕೆ.ಕಾಂತಾ ಭಾಗವಹಿಸಿದ್ದರು. ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ)ನ ಮಾರುತಿ ಮಾನ್ಪಡೆ, ಕೆ.ನೀಲಾ ಹಾಗೂ ಸಿಪಿಐನ

ಪುಟ 9 ಕ್ಕೆ

ಗುಜರಾತ್ ಹಿಂಸಾಚಾರ ಅಲ್ಲಿಗೇ ನಿಲ್ಲುವುದಿಲ್ಲ

ಗುಜರಾತ್ ಹಿಂಸಾಚಾರ ಅಲ್ಲಿಗೆ ಕೊನೆಗೊಳ್ಳುವುದಿಲ್ಲ, ಏಕೆಂದರೆ ಅದು ಗುಜರಾತಿನಿಂದ ಮಾತ್ರ ಆರಂಭವಾಗಿಲ್ಲ, ಅದಕ್ಕೊಂದು ದೀರ್ಘ ಇತಿಹಾಸವಿದೆ, ಎಂದು ಖ್ಯಾತ ಪರಿಸರವಾದಿ ಮೇದಾ ಪಾಟ್ಕರ್ ಹೇಳಿದರು.

ಅವರು ಸಂತ ಜೋಸೆಫ್ ಸಂಜೆ ಕಾಲೇಜಿನಲ್ಲಿ ಗುಜರಾತಿನ ಹತ್ಯಾಕಾಂಡಗಳ ಪ್ರತ್ಯಕ್ಷ ಅನುಭವಗಳನ್ನು ಹಂಚಿಕೊಳ್ಳುತ್ತಾ, ಗುಜರಾತಿನ ಸರ್ಕಾರಿ ಪ್ರಯೋಜಿತ ಮಾನವ ನರಮೇಧವನ್ನು ಭಾವುಕರಾಗಿ ವಿವರಿಸಿದರು.

ಈಗ ಗುಜರಾತಿಗೆ ಹತ್ತಿರುವ ಕೋಮು ಬೆಂಕಿಗೆ ತನ್ನದೇ ಆದ ಇತಿಹಾಸವಿದೆ, ಉದ್ದೇಶ, ಗುರಿ ಹೊಂದಿದೆ, ಇದು ನಮ್ಮ ನಂಬಿಕೆಗಳನ್ನು, ಸಂಸ್ಕೃತಿಯನ್ನು, ಮನುಷ್ಯರೆಲ್ಲರನ್ನೂ ಸುಟ್ಟು ಬೂದಿ ಮಾಡುತ್ತದೆ ಎಂದರು.

ಈಗ ನಾವು ಮಾತನಾಡುತ್ತಾ ಕುಳಿತುಕೊಳ್ಳುವ ಕಾಲವಲ್ಲ, ಕಾರ್‍ಯಾಚರಣೆಗೆ ಇಳಿಯಬೇಕಾಗಿದೆ, 1991ರಲ್ಲೂ ಅಯೋಧ್ಯೆಯಿಂದಲೇ ಆರಂಭಿಸಿದ ಕೋಮುವಾದಿಗಳು ದೇಶಕ್ಕೆ ಬೆಂಕಿಹಚ್ಚಿದರು, ಈಗಲೂ ಅಯೋಧ್ಯೆಯಿಂದಲೇ ಆರಂಭಿಸಿದ್ದಾರೆ, ಅದು ಗುಜರಾತಿನಲ್ಲಿ ಹರಡಿಕೊಂಡಿದೆ, ಗುಜರಾತಿನ ಈ ಹಿಂಸಾಚಾರಕ್ಕೆ ನೇರ ಕುಮ್ಮಕ್ಕು ಕೊಟ್ಟ, ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ಶಿಕ್ಷಿಸಬೇಕು ಎಂದರು.

ಸ್ವತಂತ್ರ ಭಾರತದಲ್ಲಿ ಅಲ್ಪಸಂಖ್ಯಾತರನ್ನು ಕೊಚ್ಚಿ ಹಾಕುವುದನ್ನು, ಗರ್ಭಿಣಿಯರ ಹೊಟ್ಟೆಬಗೆದು ಬೆಂಕಿ ಹಾಕುವುದನ್ನು ನೀರಿಕ್ಷಸಲು, ಊಹಿಸಲೂ ನಂಬಲೂ ಸಾದ್ಯವಿಲ್ಲ ಎಂದರು. ಒಂದು ಕಡೆ ಕುಟುಂಬ ರಾಜಕಾರಣ, ಮತ್ತೊಂದು ಕಡೆ ಕೋಮುವಾದಿ ರಾಜಕಾರಣ ಈ ದೇಶವನ್ನು ನಾಶ ಮಾಡುತ್ತಿವೆ ಎಂದ ಮೇದಾ, ಈ ಗಲಭೆ ಹತ್ಯಾಕಾಂಡಗಳಲ್ಲಿ ಹೇಗೆ ಆದಿವಾಸಿಗಳನ್ನು ಕೆಳವರ್ಗದವರನ್ನು ಬಳಸಿಕೊಂಡರು ಎಂದು ವಿವರಿಸಿದರು.

ಗೋದ್ರಾ ಹತ್ಯಾಕಾಂಡ ಖಂಡನಾರ್ಹ, ಹಾಗೆಯೇ ಗೋದ್ರ ನಂತರದ ಹತ್ಯಾಕಾಂಡ




ಪೂರ್ವಯೋಜಿತ, ಅಯೋಧ್ಯೆಗೆ ತೆರಳುವಾಗ, ಮರಳುವಾಗ ಕರಸೇವಕರು ರುಡಾಲಿ, ಮತ್ತಿತರ ರೈಲ್ವೆ ನಿಲ್ದಾಣಗಳಲ್ಲಿ ನಡೆಸಿದ ಪುಂಡಾಟಿಕೆ ನಾಚಿಕೆಗೇಡು, ಅದು ಗೋದ್ರಾ ಘಟನೆಗೆ ಕಾರಣವಾಗಿದೆ, ಇದನ್ನು ಬಳಸಿಕೊಂಡು ವಿ.ಹೆಚ್.ಪಿ. ಬಜರಂಗದಳದ ಪುಂಡ ಕೋಮುವಾದಿಗಳು ಅಲ್ಪಸಂಖ್ಯಾತರ ಆಸ್ತಿಗಳನ್ನು ಗುರುತಿಸಿ ನಾಶಪಡಿಸಿದ್ದಾರೆ. ಗುಜರಾತಿನ ಗೃಹಮಂತ್ರಿ ಪೋಲೀಸ್ ಕಂಟ್ರೋಲ್ ರೂಮಿನಲ್ಲಿ ಕುಳಿತು ಗಲಭೆಗಳನ್ನು ನಿರ್ದೇಶಿಸಿದ್ದಾರೆ, ಇಡೀ ಸಚಿವ ಸಂಪುಟವೇ ಅಹ್ಮದಾಬಾದಿನ ಬೀದಿಗಳಲ್ಲಿ ನಿಂತು ಗಲಭೆಗಳನ್ನು ನಡೆಸಿದೆ ಎಂದು ಮೇದಾ ಆರೋಪಿಸಿದರು.

ಗುಜರಾತಿಗೆ ಮಾತ್ರವೇ ಈ ಗಲಭೆಗಳು ಸೀಮಿತಗೊಂಡಿಲ್ಲ ಮಲೆಗಾಂವ್‌ಗೆ, ನಾಸಿಕ್‌ಗೆ, ಹಳ್ಳಿ, ಹಳ್ಳಿಗೂ ಹರಡಿಕೊಂಡಿವೆ, ಹರಿಜನರನ್ನು ದಾಳಿಗಳಿಗೆ ಗುರಿಮಾಡಲಾಗಿದೆ.

ರಾಜಕಾರಣಿಗಳು ಮತ್ತು ರಾಜಕೀಯ ಒಳ್ಳೆಯದಕ್ಕೆ ಬದ್ದವಾಗಿರಬೇಕು, ಧರ್ಮವನ್ನು ರಾಜಕೀಯಗೊಳಿಸುವುದನ್ನು, ರಾಜಕೀಯವನ್ನು ಧಾರ್ಮಿಕಗೊಳಿಸುವುದನ್ನು ಕೈಬಿಡಬೇಕೆಂದು ಹೇಳಿದ ಮೇದಾ, ವ್ಯಾಪಾರಿ ಸಂಸ್ಥೆಗಳ ಒತ್ತಡದಿಂದ ಚಂದ್ರಬಾಬು ಮೋದಿ ಮೇಲೆ ಕ್ರಮ ಕೈಗೊಳ್ಳಲು ಒತ್ತಾಯಿಸುತ್ತಿದ್ದಾರೆ, ಆದ್ದರಿಂದ ನಮಗೆ ಮಾತನಾಡುವುದಕ್ಕಿಂತ ಕಾರ್‍ಯಾಚರಣೆಗಿಳಿಯು ಬೇಕಾದ ಸಮಯವಿದು ಎಂದು ತಮ್ಮ ಮಾತು ಮುಗಿಸಿದರು.

ವಿದ್ಯುತ್ ಸು
ಎಂಬ ಮಹಾ

ಈಗ ವಿದ್ಯುತ್ ಸುಧಾರಣೆಗೆ ಟೊಂಕ ನಿಂತಿದ್ದೇವೆ ಎನ್ನುತ್ತದೆ ಸರ್ಕಾರ ಮತ್ತು ಅಧಿಕಾರಿಗಳು. ವಿದ್ಯುತ್ ದರಗಳನ್ನು ಬೇಕಾಬಿಟ್ಟಿ ಏರಿಸುವ ಮಂಡಳಿಯನ್ನು ನಾಲ್ಕು ಭಾಗಗಳಾಗಿ ವಿಭಜಿಸುವುದು,ಸಾವಿರಾರು ಕೋಟಿ ರೂಪಾಯಿಗಳ ಆಸ್ತಿಯನ್ನು ಪರಭಾರೆ ಮಾಡುವುದರತ್ತ ತೀವ್ರ ಹೆಜ್ಜೆ ಇಡಲಾಗುತ್ತಿದೆ. ಇದು ವಿಶ್ವಬ್ಯಾಂಕಿನ ನೀತಿ ಅಷ್ಟೆ. ಮಂಡಳಿ ವಿಭಜಿಸಿ ದರಗಳನ್ನು ಹೆಚ್ಚಿಸುವುದು ಬಳಿಕ ಖಾಸಗಿ ಧಣಿಗಳಿಗೆ ಇಡೀಯಾಗಿ ಒಪ್ಪಿಸುವುದು ಇದರ ಹಿಂದಿನ ಕುತಂತ್ರ. ಅದು ಉದಾರೀಕರಣ, ಜಾಗತೀಕರಣದ ದಳ್ಳುರಿಯಲ್ಲಿ ಜನತೆ ಬೆಯುತ್ತಿರುವಾಗ ಬೆಲೆಯಿಲ್ಲದೆ ರೈತರು ಆತ್ಮಹತ್ಯೆಗೀಡಾಗುತ್ತಿರುವಾಗ ಬರದ ಭೀಕರ ಕರಾಳ ಛಾಯೆ ಬೆನ್ನಟ್ಟಿರುವಾಗ ಈ ಸುಧಾರಣೆಗಳನ್ನು ತರುತ್ತಿದ್ದಾರೆ.ಇದೊಂದು ಅಮಾನವೀಯ ಸಂಗತಿ. ಕೆಪಿಟಿಸಿಎಲ್‌ನ ಮಹಾ ಮೋಸಗಳನ್ನು ತೆರೆದಿಡುವ ಲೇಖನಗಳು ಇಲ್ಲಿವೆ.



ನಿತ್ಯಾನಂದ ಸ್ವಾಮಿ

ಕರ್ನಾಟಕ ಸರ್ಕಾರವು ರಾಜ್ಯದ ವಿದ್ಯುತ್ ಬಳಕೆದಾರರ ಮೇಲೆ ಭಾರಿ ಪ್ರಮಾಣದ ಧಾಳಿ ನಡೆಸಲು ಸಜ್ಜಾಗಿದೆ. ವಿವಿಧ ವಿಭಾಗಗಳ ಬಳಕೆದಾರರ ಮೇಲೆ ಸರಾಸರಿ ಶೇಕಡಾ 30.15 ರಷ್ಟು ದರ ಏರಿಕೆಯ ಹೊರೆಯನ್ನು ಹೇರಲು ಉದ್ದೇಶಿಸಲಾಗಿದೆ. ರಾಜ್ಯವನ್ನು ಬೆಂಗಳೂರು, ಮಂಗಳೂರು, ಹುಬ್ಬಳ್ಳಿ ಮತ್ತು ಗುಲ್ಬರ್ಗಾವೆಂದು 4 ವಲಯಗಳಾಗಿ ವಿಂಗಡಿಸಿ, ವಿದ್ಯುತ್ ವಿತರಣೆ ಮತ್ತು ಶುಲ್ಕ ಸಂಗ್ರಹಕ್ಕಾಗಿ 4 ಕಂಪನಿಗಳನ್ನು ಸ್ಥಾಪಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಈ ಕಂಪನಿಗಳನ್ನು ಕ್ರಮೇಣ ಖಾಸಗೀಕರಣಗೊಳಿಸಲಾಗುವುದು. ಕೊನೆಯದಾಗಿ ಕೆ.ಪಿ.ಟಿ.ಸಿ.ಎಲ್. ದಿಂದ ಬಂಡವಾಳವನ್ನು ಹಿಂತೆಗೆದುಕೊಂಡು ಅದನ್ನು ಯಾವುದಾದರೊಂದು ಬಹುರಾಷ್ಟ್ರೀಯ ಕಂಪನಿಗೆ ಮಾರಾಟ ಮಾಡಲಾಗುವುದು. ಒಂದು ದೇಶ ಅಥವಾ ರಾಜ್ಯದ ಅಭಿವೃದ್ಧಿಯಲ್ಲಿ ವಿದ್ಯುಚ್ಛಕ್ತಿಗೆ ಅತ್ಯಂತ ಪ್ರಮುಖವಾದ ಪಾತ್ರವಿದೆ. ಕೈಗಾರಿಕೆಗಳು, ಕೃಷಿ ಹಾಗೂ ಗೃಹ ಬಳಕೆಗೆ ವಿದ್ಯುತ್ ಬೇಕೇ ಬೇಕು. ವಿದ್ಯುತ್ತನ್ನು ಅತ್ಯಂತ ಅಗ್ಗದ ಬೆಲೆಗೆ ಒದಗಿಸುವುದು ಸರ್ಕಾರಗಳ ಬಹುಮುಖ್ಯ ಕಾಳಜಿಯಾಗಿರಬೇಕು. ಆದರೆ ಕರ್ನಾಟಕ ಸರ್ಕಾರವು ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸಲು, ಬಳಕೆದಾರರ ಮೇಲೆ ದರ ಏರಿಕೆಯ ವಿಪರೀತ ಹೊರೆ ಹೇರಲು ಹೊರಟಿದ್ದು ಇದು ಎಷ್ಟರ ಮಟ್ಟಿಗೆ ಸಮಂಜಸ ಎಂದು ಆಲೋಚನೆ ಮಾಡಬೇಕಾಗಿದೆ.

ವಿಶ್ವಬ್ಯಾಂಕ್ ನಿರ್ದೇಶಿತ ವಿದ್ಯುತ್ ನೀತಿ: ರಾಜ್ಯಗಳಿಗೆ ವಾಜಪೇಯಿ ದಬಾವಣೆ

ವಿದ್ಯುತ್ ಕ್ಷೇತ್ರದ ಸುಧಾರಣೆಗಳ ಹೆಸರಿನಲ್ಲಿ ತರಲಾಗುತ್ತಿರುವ ಈ ಕ್ರಮಗಳ ಹಿಂದೆ ಇರುವ ವಿಶ್ವಬ್ಯಾಂಕ್ ಒತ್ತಡಗಳನ್ನು ಮರೆಮಾಚಲಾಗುತ್ತಿದೆ. ವಿಶ್ವಬ್ಯಾಂಕ್ ಇಂದು ವಿದ್ಯುತ್ ಕ್ಷೇತ್ರದ ಸುಧಾರಣೆಗಳಿಗೆ ಸಾಲವನ್ನು ಒದಗಿಸುವ ಪ್ರಮುಖ ಮೂಲವಾಗಿದೆ. ಅಮೆರಿಕ ಮೊದಲಾದ ಬಲಾಢ್ಯ ರಾಷ್ಟ್ರಗಳ ಹಿಡಿತದಲ್ಲಿರುವ ಈ ವಿಶ್ವಬ್ಯಾಂಕ್ ಜೊತೆ ಸಹವಾಸ ಮಾಡಿದ ದೇಶಗಳೆಲ್ಲಾ ದಿವಾಳಿಯಾಗುತ್ತಿರುವುದನ್ನು ಕಣ್ಣಾರೆ ಕಾಣುತ್ತಿರುವಾಗಲೂ ಭಾರತ ಸರ್ಕಾರ **ವಿಶ್ವಬ್ಯಾಂಕ್‌ನ ಏಜೆಂಟ್‌ನಂತೆ ವರ್ತಿಸುತ್ತಾ ಪೂರ್ಣಪ್ರಮಾಣದ ವಿದ್ಯುತ್ ಸುಧಾರಣೆಗಳನ್ನು ಕೈಗೊಳ್ಳುವಂತೆ ರಾಜ್ಯ ಸರ್ಕಾರಗಳನ್ನು ಒತ್ತಾಯಿಸುತ್ತಿದೆ.** ಹಿಂದೆ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗಲೇ ಈ ಪ್ರಕ್ರಿಯೆ ಆರಂಭವಾಗಿತ್ತಾದರೂ ಇಂದಿನ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಇನ್ನೂ ಹೆಚ್ಚು ಬಲವಂತದ ಕ್ರಮಗಳಿಗೆ ಕೈಹಾಕಿದೆ. 2001 ರ ಆರಂಭದಲ್ಲಿ ಪ್ರಧಾನಿ ವಾಜಪೇಯಿ ಅವರು ರಾಜ್ಯಗಳ ಮುಖ್ಯಮಂತ್ರಿಗಳ ಮತ್ತು ವಿದ್ಯುತ್ ಮಂತ್ರಿಗಳ ಸಮಾವೇಶವನ್ನು ಕರೆದು ವಿದ್ಯುತ್ ಕ್ಷೇತ್ರದ ಸುಧಾರಣೆಗಳ ಅನುಷ್ಠಾನಕ್ಕೆ ಕಾಲಮಿತಿಯನ್ನು ನಿಗದಿಪಡಿಸುವ ಒಪ್ಪಂದಕ್ಕೆ ಸಹಿ ಹಾಕಿದರೆ ಮಾತ್ರ ವಿದ್ಯುತ್ ಕ್ಷೇತ್ರಕ್ಕೆ ಕೇಂದ್ರದಿಂದ ಧನಸಹಾಯ ನೀಡಲಾಗುವುದು ಎಂದು ಬೆದರಿಕೆ ಹಾಕಿದರು. **ವಾಜಪೇಯಿ ಅವರ ಗೊಡ್ಡು ಬೆದರಿಕೆಯನ್ನು ಪಶ್ಚಿಮ ಬಂಗಾಳ ಸರ್ಕಾರ ನಿರ್ಭಿಡೆಯಿಂದ ವಿರೋಧಿಸಿತು. ಕೃಷ್ಣ ಸರ್ಕಾರವೂ ಹಾಗೆ ಮಾಡುವುದನ್ನು ಬಿಟ್ಟು ಕೇಂದ್ರದ ಒಡಂಬಡಿಕೆಗೆ ಕಣ್ಣುಮುಚ್ಚಿ ಸಹಿ ಹಾಕಿತು.**

ಭಾರತದಲ್ಲಿ ವಿದ್ಯುತ್ ಸುಧಾರಣೆಗಳಿಗಾಗಿ ಭಾರಿ ಮೊತ್ತದ ಸಾಲವನ್ನು ನೀಡಲು ವಿಶ್ವಬ್ಯಾಂಕ್ ಮುಂದಾಗಿದೆ. ಆಂಧ್ರಪ್ರದೇಶ, ಕರ್ನಾಟಕ, ಹರಿಯಾಣ, ಒರಿಸ್ಸಾ, ರಾಜಸ್ತಾನ ಮತ್ತು ಉತ್ತರ ಪ್ರದೇಶ ರಾಜ್ಯಗಳಿಗೆ ಈಗಾಗಲೇ ಸಾವಿರಾರು ಕೋಟಿ ರೂಪಾಯಿಗಳು ಹರಿದುಬಂದಿವೆ. ಕರ್ನಾಟಕಕ್ಕೆ 6000 ಕೋಟಿ ರೂಪಾಯಿಗಳು ಮಂಜೂರಾಗಿವೆ. ಈ ಹಣಕ್ಕಾಗಿ ವಿಶ್ವಬ್ಯಾಂಕ್ ವಿಧಿಸುವ ಷರತ್ತುಗಳ ಪ್ರಕಾರ (1)ನಿಗದಿತ ಕಾಲಮಿತಿಯೊಳಗೆ ರಾಜ್ಯ ವಿದ್ಯುತ್ ಮಂಡಳಿಗಳನ್ನು ವಿಸರ್ಜಿಸಬೇಕು; (2) ರಾಜ್ಯ ವಿದ್ಯುತ್ ನಿಯಂತ್ರಣಾ ಆಯೋಗಗಳನ್ನು ರಚಿಸಬೇಕು; (3)ವಿದ್ಯುತ್ ವಿತರಣೆಯನ್ನು ಖಾಸಗೀಕರಣಗೊಳಿಸಬೇಕು ಮತ್ತು ವಿದ್ಯುತ್ ದರಗಳನ್ನು ತರ್ಕಸಮ್ಮತ (rationalise) ವಾಗಿಸಬೇಕು.

ವಿಶ್ವಬ್ಯಾಂಕಿನ ಷರತ್ತುಗಳಿಗೆ ಅನುಗುಣವಾಗಿ ಈಗಾಗಲೇ ಕರ್ನಾಟಕ ಸರ್ಕಾರವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ (ಕೆ.ಇ.ಬಿ.) ಯನ್ನು ವಿಸರ್ಜಿಸಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ(ಕೆಪಿಟಿಸಿಎಲ್) ವನ್ನು ರಚಿಸಿಕೊಂಡಿದೆ. ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗ(ಕೆ.ಇ.ಆರ್.ಸಿ) ಸ್ಥಾಪನೆಯಾಗಿದೆ. ಕೆಪಿಟಿಸಿಎಲ್ ಎರಡನೆಯ ಸುತ್ತಿನ ದರ ಏರಿಕೆಯ ಪ್ರಸ್ತಾವವನ್ನು ಮಂಜೂರಾತಿಗಾಗಿ ಕೆ.ಇ.ಆರ್.ಸಿ. ಮುಂದೆ ಮಂಡಿಸಿದೆ. ದರ ಏರಿಕೆಯ ಈ ಪ್ರಸ್ತಾವದ ವಿರುದ್ಧ ರಾಜ್ಯದ ವಿವಿಧೆಡೆಗಳಿಂದ 8000 ಕ್ಕೂ ಹೆಚ್ಚು ಆಕ್ಷೇಪಣಾ ಪ್ರಮಾಣ ಪತ್ರಗಳು ಕೆಇಆರ್‌ಸಿಗೆ ತಲುಪಿವೆ. ಈ ಆಕ್ಷೇಪಣಾ ಪತ್ರಗಳ ಪರಿಶೀಲನೆಗೆ ಹಾಗೂ ಆಯೋಗದ ಮುಂದೆ ಹಾಜರಾಗಿ ನಮ್ಮ ವಾದವನ್ನು ಮಂಡಿಸಲು ಅವಕಾಶ ನೀಡಲಾಗಿದ್ದರೂ ಅದೊಂದು ಕಣ್ಣೊರೆಸುವ ತಂತ್ರ ಮಾತ್ರ. ರಾಜ್ಯದಲ್ಲಿ ವಿದ್ಯುತ್ ಬಳಕೆದಾರರ ಪ್ರಬಲವಾದ ಪ್ರತಿರೋಧದಿಂದ ಮಾತ್ರ ಬರಲಿರುವ ಈ ಧಾಳಿಯನ್ನು ತಡೆಗಟ್ಟಬಹುದು.

ಒಪ್ಪಲಾಗದ ದರ ಏರಿಕೆಯ ಪ್ರಸ್ತಾವ:

2000 ನೇ ಸಾಲಿನಲ್ಲಿ ಸರಾಸರಿ ಶೇ 17 ರಷ್ಟು ದರ ಏರಿಕೆ ಮಾಡಲಾಗಿತ್ತು. ಈಗ ಸರಾಸರಿ ಶೇ. 30.15 ರಷ್ಟು ದರ ಏರಿಕೆಗೆ ಅನುಮತಿ ಕೋರಲಾಗಿದೆ. ವಿವಿಧ ವರ್ಗಗಳ ಬಳಕೆದಾರರಿಗೆ ವಿವಿಧ ಪ್ರಮಾಣದ ದರ ಹೆಚ್ಚಳವನ್ನು ಪ್ರಸ್ತಾಪಿಸಲಾಗಿದ್ದು ಬಳಸುವ ಯೂನಿಟ್‌ಗಳು ಹೆಚ್ಚಾದಂತೆ ದರಗಳನ್ನು ಏರಿಸುವ ಸೂಚನೆಯಿದೆ. ಭಾಗ್ಯಜ್ಯೋತಿ / ಕುಟೀರ ಜ್ಯೋತಿ ಸಂಪರ್ಕಗಳಿಗೆ ಈಗ ಇರುವ ನಿಗದಿತ ಮಾಸಿಕ ಶುಲ್ಕವನ್ನು ರೂ. 10 ರಿಂದ ರೂ. 30 ಕ್ಕೆ ಏರಿಸಲು ಉದ್ದೇಶಿಸಲಾಗಿದೆ. ಗೃಹಬಳಕೆಗೆ ಶೇ 88 ರಿಂದ 98 ರಷ್ಟು ಮತ್ತು ಸರ್ವ ವಿದ್ಯುತ್ ಗೃಹಗಳಿಗೆ ಶೇ 29 ರಿಂದ 50 ರಷ್ಟು ಹೆಚ್ಚಳವನ್ನು ಸೂಚಿಸಲಾಗಿದೆ. ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಪ್ರತಿ ಹೆಚ್.ಪಿ.ಗೆ ಈಗ ಇರುವ 300 ರೂ. ವಾರ್ಷಿಕ ಕನಿಷ್ಟ ಶುಲ್ಕವನ್ನು 900 ರೂ.ಗೆ ಹೆಚ್ಚಿಸಲು ಉದ್ದೇಶಿಸಲಾಗಿದ್ದು ರೈತನ ಮನೆಯಲ್ಲಿ ವರಮಾನ ತೆರಿಗೆ ಕೊಡುವ ನೌಕರಸ್ಥನಿದ್ದರೆ ಆ ಮನೆಯ ಪ್ರತಿ ಹೆಚ್.ಪಿ.ಗೆ 2400 ರೂ. ನಿಗದಿಪಡಿಸುವ ಪ್ರಸ್ತಾಪವಿದೆ. ರಾಜ್ಯದಲ್ಲಿ ಶೇಕಡಾ 8 ರಷ್ಟು ಅಂದರೆ ಸುಮಾರು 1450 ಮೆಗಾವಾಟ್‌ರಷ್ಟು ವಿದ್ಯುತ್ತನ್ನು ಬಳಸುವ ಸಣ್ಣ ಕೈಗಾರಿಕೆ ಗಳಿಗೂ ತುಂಬಾ ಹೊರೆಯಾಗುವ ದರಗಳನ್ನು ಪ್ರಸ್ತಾವಿಸಲಾಗಿದೆ.

ಇಷ್ಟೊಂದು ಪ್ರಮಾಣದ ದರ ಏರಿಕೆಗೆ ನೀಡಲಾದ ಯಾವ ಕಾರಣವೂ ಸಮರ್ಥನೀಯವಾಗಿಲ್ಲ. ಸರಬರಾಜು ವೆಚ್ಚ ಆದಾಯಕ್ಕಿಂತ ಹೆಚ್ಚು ಆಗುತ್ತಿದ್ದು ಪ್ರತಿ ಯೂನಿಟಿಗೆ ರೂ. 1.62 ನಷ್ಟವಾಗುತ್ತಿರುವುದನ್ನು ಸರಿದೂಗಿಸಲು ಈ ದರ ಏರಿಕೆ ಅನಿವಾರ್ಯವಾಗಿದೆ ಎಂದು ಹೇಳಲಾಗುತ್ತಿದೆ. ಈ ಅಂಕಿ ಅಂಶಗಳನ್ನು ತೀವ್ರ ಪರಿಶೀಲನೆಗೆ ಒಳಪಡಿಸದೆ ಸ್ವೀಕರಿಸಲು ಸಾಧ್ಯವಿಲ್ಲ. ವಿದ್ಯುತ್ ಪ್ರಸರಣ ಮತ್ತು ವಿತರಣೆಯಲ್ಲಾಗುವ ವಿದ್ಯುತ್ ಸೋರಿಕೆ, ಕಳ್ಳತನ, ನಿಗಮದ ಅಸಂಬದ್ಧ ಖರ್ಚುವೆಚ್ಚಗಳು ಎಲ್ಲವನ್ನೂ ಬಳಕೆದಾರರ ಮೇಲೆ ಹೇರುವ ಕುತಂತ್ರ ಇದಾಗಿದೆ. ಪ್ರಸರಣಾ ಮತ್ತು ವಿತರಣಾ ಜಾಲವನ್ನು ಬಲಪಡಿಸಲು ಪ್ರತಿವರ್ಷ ಕೋಟಿಗಟ್ಟಲೆ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತಿದ್ದರೂ ಆಗುತ್ತಿರುವ ತಾಂತ್ರಿಕ ನಷ್ಟವನ್ನು ತಡೆಗಟ್ಟಲು ಸಾಧ್ಯವಾಗಿಲ್ಲ. 2000 ಸಾಲಿನ ಶೇ 38 ನಷ್ಟವನ್ನು ಈಗ ಶೇ 35.5 ಕ್ಕೆ ಇಳಿಸಲಾಗಿದೆ ಎಂದು ಹೇಳಲಾಗುತ್ತಿದೆ. ಈ ಅಂಕಿಅಂಶಗಳನ್ನು ಒಪ್ಪಿಕೊಂಡರೂ ನಷ್ಟದ ಇಳಿಕೆ ತೀರಾ ನಗಣ್ಯ. **ವಿದ್ಯುತ್ ನಷ್ಟದಲ್ಲಿ ವಾಣಿಜ್ಯ ನಷ್ಟ ಎಂಬುದು ವಿದ್ಯುತ್ ಕಳ್ಳತನಕ್ಕೆ ನೀಡಲಾದ ಇನ್ನೊಂದು ಹೆಸರು!** ಅನಧಿಕೃತ ಪಂಪ್‌ಸೆಟ್‌ಗಳು, ಭಾಗ್ಯಜ್ಯೋತಿ/ ಕುಟೀರ ಜ್ಯೋತಿ ಸಂಪರ್ಕಗಳು, ಕೊಳಚೆ ಪ್ರದೇಶದ ಅನಧಿಕೃತ ಸಂಪರ್ಕಗಳಿಂದಾಗಿ ವಾಣಿಜ್ಯ ನಷ್ಟವನ್ನು ನಿಯಂತ್ರಿಸಲಿಕ್ಕಾಗುವುದಿಲ್ಲ ಎಂದು ಹೇಳಲಾಗುತ್ತಿದೆ. ಆದರೆ ವಾಸ್ತವಿಕವಾಗಿ ಭ್ರಷ್ಟ ಅಧಿಕಾರಿಗಳ ನಿರಂತರ ಸಹಕಾರದೊಂದಿಗೆ ಹೈಟೆನ್ಶನ್ ಬಳಕೆದಾರ ಉದ್ಯಮಿಗಳು ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಕದಿಯುತ್ತಿರುವುದನ್ನು ಮುಚ್ಚಿಹಾಕಲು ವಿದ್ಯುತ್ ಕಳ್ಳತನದ ಆರೋಪವನ್ನು ಪಂಪ್‌ಸೆಟ್ ರೈತರ ಮೇಲೆ, ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಫಲಾನುಭವಿಗಳ ಮೇಲೆ ಹೊರಿಸಲಾಗುತ್ತಿದೆ. ಹೈಟೆನ್ಷನ್ ಬಳಕೆದಾರರ ಕಳ್ಳತನಕ್ಕೆ ಹೋಲಿಸಿದರೆ ರೈತರ ಪಂಪ್‌ಸೆಟ್‌ಗಳಿಂದ ಮತ್ತು ಭಾಗ್ಯಜ್ಯೋತಿ/ ಕುಟೀರ ಜ್ಯೋತಿ ಸಂಪರ್ಕಗಳಿಂದ ಆಗುತ್ತಿರುವ ಅನಧಿಕೃತ ವಿದ್ಯುತ್ ಬಳಕೆಯ ಪ್ರಮಾಣ ತೀರಾ ಕಡಿಮೆ. ಪುಣೆಯ ಇಂಧನ ಅಧ್ಯಯನ ಸಂಸ್ಥೆಯು ನಡೆಸಿದ ಅಧ್ಯಯನ ಪ್ರಕಾರ ಕರ್ನಾಟಕವೂ ಸೇರಿದಂತೆ ಹಲವು ರಾಜ್ಯಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಕೊಳಚೆ ಪ್ರದೇಶಗಳಲ್ಲಿ ಆಗುವ ವಿದ್ಯುತ್ ಕಳ್ಳತನಕ್ಕಿಂತ ಹೈಟೆನ್ಶನ್ (HT) ಮತ್ತು ಅಧಿಕ ಹೈಟೆನ್ಶನ್ (EHT) ಬಳಕೆದಾರರಿಂದ ಆಗುವ ವಿದ್ಯುತ್ ಕಳ್ಳತನವೇ ಹೆಚ್ಚು.

ವಿದ್ಯುತ್ ಕಳ್ಳತನವನ್ನು ತಡೆಯಲು ಹೊಸ ಕಾನೂನು ತರಲಾಗಿದೆ ಎಂದು ಹೇಳಲಾಗುತ್ತಿದೆ. ಇಂತಹ ಕಾನೂನುಗಳು ದುರಪಯೋಗವಾಗುವುದೇ ಹೆಚ್ಚು. ದೊಡ್ಡ ದೊಡ್ಡ ಕಳ್ಳತನಗಳು ಬೆಳಕಿಗೆ ಬರಲಾರವು. ಸಾಮಾನ್ಯ ಬಳಕೆದಾರರೇ ಕಿರುಕುಳ ಅನುಭವಿಸುವಂತಾಗುವುದು. ಸಾವಿರಾರು ರೂ. ಬಂಡವಾಳ ಹಾಕಿ, ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ ಹಾಕಿಕೊಂಡು ವರ್ಷಗಟ್ಟಲೆ ಕಾದರೂ ವಿದ್ಯುತ್ ಸಂಪರ್ಕ ದೊರಕದಿದ್ದಾಗ ಅನಿವಾರ್ಯವಾಗಿ ಅನಧಿಕೃತ ವಿದ್ಯುತ್ ಸಂಪರ್ಕ ಪಡೆದುಕೊಂಡ ರೈತನನ್ನು ಕಳ್ಳನೆಂದು ತೀರ್ಮಾನಿಸುವುದು



...ಾರಣೆ ...ಮೋಸ



ಅನ್ಯಾಯ. ದೊಡ್ಡ ಪ್ರಮಾಣದಲ್ಲಿ ವಿದ್ಯುತ್ ಕದಿಯುತ್ತಿರುವ ಹೈಟೆನ್ಶನ್ ಬಳಕೆದಾರರನ್ನು ಬಯಲಿಗೆಳೆಯಲು ದೃಢವಾದ ಕ್ರಮಗಳು ಅಗತ್ಯ.

ದುಬಾರಿ ಶಾಖೋತ್ಪನ್ನ ವಿದ್ಯುತ್ ಖರೀದಿಯ ಹೊರೆ:

ಮುಂಗಾರಿನ ವಿಫಲತೆಯಿಂದಾಗಿ ಜಲವಿದ್ಯುತ್ ಲಭ್ಯತೆಯಲ್ಲಿ ಇಳಿತವಾಗಿ ಜಲವಿದ್ಯುತ್ತಿಗಿಂತ ದುಬಾರಿಯಾದ ಶಾಖೋತ್ಪನ್ನ ವಿದ್ಯುತ್ತಿನ ಖರೀದಿಯಲ್ಲಿ ಹೆಚ್ಚಳವಾಗಿದೆ ಎಂದು ದರ ಏರಿಕೆಯ ಪ್ರಸ್ತಾವವನ್ನು ಸಮರ್ಥಿಸಲಾಗುತ್ತಿದೆ. ಆದರೆ ಜಲ ವಿದ್ಯುತ್ ಮೂಲಗಳಿಂದ ಅಗ್ಗದ ವಿದ್ಯುಚ್ಛಕ್ತಿ ಉತ್ಪಾದನೆಗೆ ಆದ್ಯತೆ ನೀಡುವಲ್ಲಿ ಕರ್ನಾಟಕ ಸರ್ಕಾರ ವಿಫಲವಾಗಿದೆ ಎಂಬುದನ್ನು ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿದೆ. ಮಳೆಗಾಲದಲ್ಲಿ ಸಣ್ಣ ಸಣ್ಣ ಹಳ್ಳಕೊಳ್ಳಗಳಲ್ಲಿ ಹರಿಯುವ ನೀರನ್ನು ಚಿಕ್ಕ ಚಿಕ್ಕ ಜಲವಿದ್ಯುತ್ ಯೋಜನೆಗಳಲ್ಲಿ ಬಳಸಿಕೊಂಡು 7000 ಕ್ಕೂ ಹೆಚ್ಚು ಮೆಗಾವಾಟ್‌ನಷ್ಟು ಅಗ್ಗದ ಜಲವಿದ್ಯುತ್ ಉತ್ಪಾದನೆ ಸಾಧ್ಯವಿದೆ. ಈಗ ರಾಜ್ಯದಲ್ಲಿ ಕೇವಲ 3000 ಮೆಗಾವಾಟ್‌ನಷ್ಟು ಜಲ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಪ್ರಸಕ್ತ ವರ್ಷದಲ್ಲಿ 290 ಮೆಗಾವಾಟ್ ಸಾಮರ್ಥ್ಯ ಹೊಂದಿರುವ ಆಲಮಟ್ಟಿ ಅಣೆಕಟ್ಟು ವಿದ್ಯುದ್ಗಾರವನ್ನು ಆರಂಭಿಸಿರುವುದು ಸ್ವಾಗತಾರ್ಹವಾದರೂ ಅಗ್ಗದ ಜಲವಿದ್ಯುತ್ ಬದಲು ದುಬಾರಿಯಾದ ಶಾಖೋತ್ಪನ್ನ ವಿದ್ಯುತ್ತನ್ನು ಖರೀದಿ ಮಾಡಿ

ದರ ಏರಿಕೆ,

...ಾಸಗೀಕರಣ,

...ಕರಣವನ್ನು ವಿರೋಧಿಸಿ

...ಂದೋಲನವನ್ನು

...ಟಿಸುತ್ತಿದೆ.

...ಪ್ರಚಾರಾಂದೋಲನ

...ಪ್ರತಿಭಟನಾ ಪ್ರದರ್ಶನಗಳು

ಬಳಕೆದಾರರ ಮೇಲೆ ದರ ಏರಿಕೆಯ ಹೊರೆ ಹೇರುವುದನ್ನು ಒಪ್ಪಲಾಗದು. ಈ ಹೊರೆಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು.

ನೈಸರ್ಗಿಕ ಏರುಪೇರು : ಆವರ್ತ ನಿಧಿ ಅಗತ್ಯ

ಮುಂಗಾರಿನ ವಿಫಲತೆ ನಮ್ಮ ರಾಜ್ಯಕ್ಕೆ ಹೊಸ ವಿಷಯವಲ್ಲ. ಮಳೆಯ ಲಭ್ಯತೆಯನ್ನು ಮೊದಲೇ ಅಂದಾಜು ಮಾಡಲು ಸಾಧ್ಯವಿದೆ. ಹೆಚ್ಚು ಮಳೆ ಬಂದಾಗ ಸಿಗುವ ಹೆಚ್ಚುವರಿ ವಿದ್ಯುಚ್ಛಕ್ತಿಯಿಂದ ಬರುವ ಆದಾಯವನ್ನು 'ಆವರ್ತ ನಿಧಿ'ಯಾಗಿ ತೆಗೆದಿಟ್ಟು, ನೀರಿನ ಕೊರತೆ ಉಂಟಾದಾಗ ಬಳಕೆದಾರರ ಮೇಲೆ ದರ ಏರಿಕೆಯ ಹೊರೆ ಹೇರುವ ಬದಲು ತೆಗೆದಿಟ್ಟ **'ಆವರ್ತನಿಧಿ'** ಯನ್ನು ಬಳಕೆಮಾಡಲು ಸಾಧ್ಯವಿದೆ. ಮಳೆ ಕೈಕೊಟ್ಟು ಬರಗಾಲ ತಲೆದೋರಿದಾಗ ಇತರ ಬರಗಾಲ ಪರಿಹಾರ ಕಾರ್ಯಕ್ರಮಗಳಿಗೆ ನೀಡುವಂತೆ ವಿದ್ಯುತ್ ಕ್ಷೇತ್ರಕ್ಕೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಹಾರವನ್ನು ಒದಗಿಸಬೇಕು. ಬರಗಾಲದಿಂದ ತತ್ತರಿಸುವ ಜನಗಳ ಮೇಲೆ ವಿದ್ಯುತ್ ದರ ಏರಿಕೆಯ ಬರೆ ಎಳೆಯುವ ಬದಲು ವಿದ್ಯುತ್ ದರಗಳನ್ನು ಇನ್ನಷ್ಟು ಇಳಿಸಿ ಪರಿಹಾರ ಒದಗಿಸಲು ಸಾಧ್ಯವಾಗಬೇಕು.

ಮುಂಗಾರು ವಿಫಲತೆಯ ನೆಪಮಾಡಿಕೊಂಡು ಕೆಪಿಟಿಸಿಎಲ್ ಖಾಸಗೀ ಉತ್ಪಾದಕರಿಂದ ದುಬಾರಿ ಬೆಲೆಯ ಶಾಖೋತ್ಪನ್ನ ವಿದ್ಯುತ್‌ನ್ನು ಖರೀದಿ ಮಾಡಿ ಅವರ ಜೇಬು ತುಂಬಿಸಲು ಹೊರಟಿರುವುದು ಖಂಡನೀಯ. 2002-03 ರ ಸಾಲಿನಲ್ಲಿ ಕೆಪಿಟಿಸಿಎಲ್ 1103.8 ಕೋಟಿ ರೂಗಳ ವೆಚ್ಚದಲ್ಲಿ 3026 ದ.ಲ.ಯೂನಿಟ್ ವಿದ್ಯುತ್ತನ್ನು ಸ್ವತಂತ್ರ ವಿದ್ಯುತ್ ಉತ್ಪಾದಕ (IPPs) ರಿಂದ ಖರೀದಿಸುವ ನಿರೀಕ್ಷೆ ಇಟ್ಟುಕೊಂಡಿದೆ. 2000-01 ರ ಸಾಲಿನಲ್ಲಿ 299.2 ಕೋಟಿ ರೂ.ಗಳ ವೆಚ್ಚದಲ್ಲಿ 1230.85 ದಶಲಕ್ಷ ಯುನಿಟ್ ವಿದ್ಯುತ್ತನ್ನು ಖರೀದಿಸಲಾಗಿತ್ತು. ಕೆ.ಪಿ.ಟಿ.ಸಿ.ಎಲ್. ವ್ಯವಹಾರಗಳು ಸಾಕಷ್ಟು ಪಾರದರ್ಶಕವಾಗಿರದೇ ಇರುವುದರಿಂದ ರಾಯಲ್‌ಸೀಮಾ, ಜಿಂದಾಲ್, ತಣ್ಣೀರ್ ಬಾವಿ, ಟಾಟಾ ಮೊದಲಾದ ಸ್ವತಂತ್ರ ವಿದ್ಯುತ್ ಉತ್ಪಾದಕ ಕಂಪನಿಗಳೊಂದಿಗೆ ಮಾಡಿಕೊಳ್ಳಲಾದ ವಿದ್ಯುತ್ ಖರೀದಿ ಒಪ್ಪಂದ (PPAs) ಗಳು ಬಹಳಷ್ಟು ಸಂಶಯ, ಸಂದೇಹಗಳಿಗೆ ಎಡೆಮಾಡಿಕೊಟ್ಟಿವೆ. ಈ ಸ್ವತಂತ್ರ ವಿದ್ಯುತ್ ಉತ್ಪಾದಕರ ದರ ಏರಿಕೆಯು ಅತಾರ್ಕಿಕವಾಗಿದೆ ಮಾತ್ರವಲ್ಲ ಅವರ ದರಗಳ ನಡುವೆ ಯಾವ ಹೋಲಿಕೆಯೂ ಇಲ್ಲ.

ಕಂಪನಿ	ಪ್ರತಿ ಯೂನಿಟ್‌ನ ದರ
ತಣ್ಣೀರ್ ಬಾವಿ(ಖಾಸಗಿ)	4.81 ರೂ.
ರಾಯಲ್‌ಸೀಮಾ(ಖಾಸಗಿ)	4.07 ರೂ.
ಟಾಟಾ(ಖಾಸಗಿ)	4.33 ರೂ.
ರಾಯಚೂರು ವಿದ್ಯುದ್ಗಾರ ಸಾರ್ವಜನಿಕರಂಗ	2.52 ರೂ.

ಮೇಲಾಗಿ ತಮ್ಮ ಕೈಗಾರಿಕೆಗಳಿಗೆ ಅಗತ್ಯವಾದ ವಿದ್ಯುತ್ ಉತ್ಪಾದಿಸಿಕೊಳ್ಳುವ ಈ ಕೈಗಾರಿಕೆಗಳಿಗೆ ತಗಲುವ ಉತ್ಪಾದನಾ ವೆಚ್ಚ ಕಡಿಮೆಯಾಗಿದ್ದು, ಮಾರುವಾಗ ಮಾತ್ರ ಏಕೆ ಈ ಹೆಚ್ಚಳ?

ಸಾರ್ವಜನಿಕ ರಂಗದಲ್ಲಿರುವ ರಾಯಚೂರು ಶಾಖೋತ್ಪನ್ನ ಕೇಂದ್ರದ 6ನೇ ಮತ್ತು 7 ಘಟಕಗಳಿಂದ ಉತ್ಪಾದನೆಯಾದ ವಿದ್ಯುತ್ತು ಯೂನಿಟ್ ಒಂದಕ್ಕೆ ರೂ. 2.52 ರ ದರದಲ್ಲಿ ಸಿಗುತ್ತಿರುವಾಗ ಸ್ವತಂತ್ರ ವಿದ್ಯುತ್ ಉತ್ಪಾದಕರ ದರಗಳು ಅಷ್ಟೇಕೆ ಹೆಚ್ಚು? ಹಾಗಾದರೆ ರಾಯಚೂರು ಶಾಖೋತ್ಪನ್ನ ಕೇಂದ್ರದ ವಿವಿಧ ಘಟಕಗಳು ಮೇಲಿಂದ ಮೇಲೆ ಕೆಡುತ್ತಿರುವುದರ ಗುಟ್ಟೇನು? ಸಾರ್ವಜನಿಕ ರಂಗದ ವಿದ್ಯುದ್ಗಾರಗಳನ್ನು ಸರಿಯಾಗಿ ನಡೆಸುವಂತಾದರೆ ಯಾರಿಗೆ ಲಾಭ? ಯಾರಿಗೆ ನಷ್ಟ?

ಸ್ವತಂತ್ರ ವಿದ್ಯುತ್ ಉತ್ಪಾದಕರೊಂದಿಗೆ ಮಾಡಿಕೊಳ್ಳುವ ಒಪ್ಪಂದಗಳು ಪಾರದರ್ಶಕವಾಗಿರುವಂತೆ ಕೆ.ಇ.ಆರ್.ಸಿ. ನೋಡಿಕೊಳ್ಳಬೇಕು. ಇಂತಹ ಖರೀದಿ ಒಪ್ಪಂದಗಳಿಗೆ ಮಂಜೂರಾತಿ ನೀಡುವ ಮೊದಲೇ ಅವುಗಳ ಎಲ್ಲಾ ವಿವರಗಳನ್ನು ಸಾರ್ವಜನಿಕರ ಎದುರು ಇಟ್ಟು ಸಾರ್ವಜನಿಕ ಆಕ್ಷೇಪಣೆಗಳನ್ನು ಆಹ್ವಾನಿಸಬೇಕು. ಆಯೋಗದ ಮಂಜೂರಾತಿ ಆಜ್ಞೆಗಳೂ ಸಹ ಸಾರ್ವಜನಿಕರಿಗೆ ಲಭ್ಯವಾಗಬೇಕು.

ಜನರ ಆಸ್ತಿ ಹರಾಜಿಗೆ, ಖಾಸಗೀಕರಣದ ಧಾಳಿಯನ್ನು ತಡೆಯಲೇಬೇಕು

ಇಂದು ನಿಗಮವಾಗಿ ಪರಿವರ್ತನೆಯಾಗಿರುವ ಕೆ.ಇ.ಬಿ. ಒಂದು ಸಾರ್ವಜನಿಕ ಆಸ್ತಿ.

ಪುಟ 10 ಕ್ಕೆ

ಕೆ.ಪಿ.ಟಿ.ಸಿ.ಎಲ್. ವಾದ: ದುಡಿಯುವ ಜನತೆಗೆ ಎಸಗುತ್ತಿರುವ ಅಪರಾಧ

ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣಾ ನಿಗಮವು ಆಯೋಗದ ಮುಂದೆ ವಿದ್ಯುತ್ ದರವನ್ನು ಪರಿಷ್ಕರಿಸಲು 23.2.2002ರಂದು ಸಲ್ಲಿಸಿದ ಅರ್ಜಿಯ ಬಗ್ಗೆ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯಸಮಿತಿಯ ಪರವಾಗಿ ಕರ್ನಾಟಕದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಸಲ್ಲಿಸಲಾದ ಆಕ್ಷೇಪಗಳ ಪತ್ರದಿಂದ ಆಯ್ದ ಕೆಲ ಅಂಶಗಳು:

ಪ್ರಸರಣ ಮತ್ತು ವಿತರಣಾ ನಷ್ಟ:

● ಕೆ.ಪಿ.ಟಿ.ಸಿ.ಎಲ್ 1999-2000 ವರ್ಷದಲ್ಲಿ ಶೇ 38ರಷ್ಟು ವಿದ್ಯುಚ್ಛಕ್ತಿ ನಷ್ಟವಾಗಲು ಅವಕಾಶ ಮಾಡಿಕೊಟ್ಟಿತ್ತು. ಅದನ್ನು ಆಯೋಗವು ದೀರ್ಘ ವಿಶ್ಲೇಷಣೆಗೆ ಗುರಿಪಡಿಸಿ 2000-01ರ ವರ್ಷದಲ್ಲಿ ಈ ನಷ್ಟವನ್ನು ಶೇ 31ಕ್ಕೆ 2001-2002ರಲ್ಲಿ ಶೇ 24ಕ್ಕೆ ಇಳಿಸುವುದು ಕಾರ್ಯಸಾಧ್ಯ ಎಂಬುದನ್ನು ನಿರೂಪಿಸಿತು ಮತ್ತು ಅದರಂತೆ ಆದೇಶ ನೀಡಿತ್ತು. ಅಂದರೆ ಈ ಅರ್ಜಿಯನ್ನು ಸಲ್ಲಿಸುವ ವೇಳೆಗೆ ಶೇ 14ರಷ್ಟು ವಿದ್ಯುತ್ ನಷ್ಟವನ್ನು ಕಡಿತಗೊಳಿಸಬೇಕಾಗಿತ್ತು. ನಷ್ಟದ ಈ ಕಡಿತದಿಂದಲೇ ಸುಮಾರು ಒಂದು ಸಾವಿರ ಕೋಟಿ ರೂನಷ್ಟು ಉಳಿತಾಯವಾಗ ಬೇಕಾಗಿತ್ತು.

● ಜೊತೆಗೆ ಅತ್ಯಂತ ಹೆಚ್ಚು ಸಂಪರ್ಕಗಳು ವಿಸ್ತಾರ ಪ್ರದೇಶ ಗಳಿರುವ ಎಲ್‌ಟಿ ಸಂಪರ್ಕಗಳಿಗಿಂತಲೂ ಎಚ್.ಟಿ ಸಂಪರ್ಕದಲ್ಲಿಯೇ ಹೆಚ್ಚು ನಷ್ಟವಿದೆ ಎಂಬ ಸಂಗತಿಯೂ ಇದಕ್ಕೆ ಪೂರಕವಾಗಿದೆ. ದೊಡ್ಡ ಪ್ರಮಾಣದಲ್ಲಿ ಕೈಗಾರಿಕಾ ಉದ್ಯಮಿಗಳು ಮಾಡುವ ಈ ಕಳ್ಳತನವನ್ನು ಮುಚ್ಚಿಕೊಂಡು ಅದನ್ನು ಪಂಪ್‌ಸೆಟ್ ಮತ್ತಿತರ ಬಡ ಬಳಕೆದಾರರ ಮೇಲೆ ಹೇರಲು ಮಾಡುತ್ತಿರುವ ಕೆಪಿಟಿಸಿಎಲ್‌ನ ವಾದ ಕರ್ನಾಟಕದ ದುಡಿಯುವ ಜನತೆಗೆ ಎಸಗುತ್ತಿರುವ ಅಪರಾಧ.

ವಂಚಕರ ಈ ಧಾಳಿ ಹಿಮ್ಮೆಟ್ಟಿಸಲು ಪ್ರಬಲ ಚಳುವಳಿ ಹೂಡಿ ಜನತೆಗೆ ಸಿಪಿಐ(ಎಂ) ಕರೆ

● ವಿದ್ಯುತ್ ನಷ್ಟದ ವಿಭಾಗವಾರು, ಲೈನ್‌ವಾರು ವಿವರಗಳನ್ನು ವಾಣಿಜ್ಯ ನಷ್ಟದ ಮೂಲಗಳ ವಿವರಗಳನ್ನು ಬಹಿರಂಗವಾಗಿ ಕರ್ನಾಟಕದ ಜನತೆಗೆ ಒಪ್ಪಿಸಬೇಕೆಂದು ಆಯೋಗ ಕೆ.ಪಿ.ಟಿ.ಸಿ.ಎಲ್‌ಗೆ ನಿರ್ದೇಶಿಸಬೇಕು.

ಇದೇ ಸಂದರ್ಭದಲ್ಲಿ ಇತರ ದೇಶಗಳ ಉದಾಹರಣೆ ನೀಡುವುದಂತೂ ಹೊಣೆಗೇಡಿತನದ ಪ್ರದರ್ಶನವೇ ಆಗಿದೆ. ಆಯಾದೇಶಗಳಲ್ಲಿ ಒಟ್ಟು ವಿದ್ಯುತ್ ನಷ್ಟ ಎಷ್ಟು ಮತ್ತು ಅದರ ಭಾಗವಾಗಿ ಎಷ್ಟು ವಿದ್ಯುತ್ ನಷ್ಟವನ್ನು ಅವರು ಕಡಿತಗೊಳಿಸಿದ್ದಾರೆ ಎಂಬುದನ್ನು ವಿಶ್ಲೇಷಣೆಗೆ ಗುರಿಪಡಿಸಬೇಕು. ಆದರೆ ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡದೆ ಕೇವಲ ಆಯ್ದ ಮಾಹಿತಿ ನೀಡುವ ಮೂಲಕ ಕೆ.ಪಿ.ಟಿ.ಸಿ.ಎಲ್ ಜನತೆಯನ್ನು ತಪ್ಪು ದಾರಿಗೆಳೆಯಬಯಸುತ್ತದೆ.

ಇಂತಹ ಅಪಾರ ನಷ್ಟವನ್ನು ಕಡಿತಗೊಳಿಸಲಾಗದ ಕೆಪಿಟಿಸಿಎಲ್‌ನ ಅದಕ್ಷತೆಯ ಹಾಗೂ ಕ.ವಿ.ನಿ ಆಯೋಗದ ನಿರ್ದೇಶನಗಳ ಉಲ್ಲಂಘನೆಯ ಹಿನ್ನೆಲೆಯಲ್ಲಿ ವಿದ್ಯುತ್ ದರ ಪರಿಷ್ಕರಣೆ ಅರ್ಜಿಯನ್ನು ವಜಾ ಮಾಡಬೇಕು.

ಅದೇ ಸಂದರ್ಭದಲ್ಲಿ ಇತರ ರಾಜ್ಯಗಳ ಉದಾಹರಣೆಯೂ ಕೂಡಾ ತನ್ನ ಅದಕ್ಷತೆಯನ್ನು ಮುಚ್ಚಿಕೊಳ್ಳುವ ಕುಂಟು ನೆಪ ಮಾತ್ರ.

● ವರ್ಷದಿಂದ ವರ್ಷಕ್ಕೆ ಜಲವಿದ್ಯುತ್‌ನ ಉತ್ಪಾದನೆಯನ್ನು ಈ ವಿದ್ಯುತ್‌ನ ಖರೀದಿಯನ್ನು ಕಡಿಮೆ ಮಾಡುತ್ತಿರುವುದು ಖಾಸಗಿ ಬಂಡವಾಳಗಾರರಿಗೆ ಲಾಭ ಮಾಡಿಕೊಡುವ ದುರುದ್ದೇಶದಿಂದಲೇ ಮತ್ತು ರಾಯಚೂರು ಥರ್ಮಲ್ ವಿದ್ಯುತ್‌ದಾಗರಗಳು ಆಗಾಗ ಕೆಡುತ್ತಿರುವುದು ಇಂತಹ ಕಾರಣದಿಂದಲೇ ಎಂಬ ಅನುಮಾನಕ್ಕೆ ಎಡೆ ಮಾಡಿದೆ.

● ಈ ಹಿನ್ನೆಲೆಯಲ್ಲಿ ಪ್ರತಿ ಸಾರ್ವಜನಿಕ ವಿದ್ಯುತ್ ತಯಾರಿಕಾ ಸ್ಥಾವರ/ಕೇಂದ್ರಗಳಿಗೂ ಸಾರ್ವಜನಿಕರ ಹಾಗೂ ಪ್ರಜಾಸತ್ತಾತ್ಮಕ ಸಂಘ ಸಂಸ್ಥೆಗಳ ಪ್ರತಿನಿಧಿಗಳಿರುವ ಮೇಲ್ವಿಚಾರಕ ಸಮಿತಿಯನ್ನು ಆಯೋಗ ನೇಮಿಸಬೇಕು ಎಂಬುದು ಸಿಪಿಐ(ಎಂ) ಪಕ್ಷದ ಆಗ್ರಹ.

ಈ ಖಾಸಗೀ ಐಪಿಪಿ ಗಳ ಉತ್ಪಾದನಾ ವೆಚ್ಚವನ್ನು ಖಾಸಗೀ ಕೈಗಾರಿಕೆಗಳು ಇತ್ತೀಚಿನ ವರ್ಷಗಳಲ್ಲಿ ನಿರ್ಮಾಣ ಮಾಡಿದ ಕ್ಯಾಪ್ಟಿವ್ ವಿದ್ಯುತ್ ಉತ್ಪಾದನಾ ಕೇಂದ್ರಗಳ ಉತ್ಪಾದನಾ ವೆಚ್ಚದೊಂದಿಗೆ ತುಲನೆ ಮಾಡುವ ಹಾಗೂ ಅದೇ ಸಮಯದಲ್ಲಿ ನಿರ್ಮಾಣವಾದ ಸಾರ್ವಜನಿಕ ವಿದ್ಯುದಾಗಾರಗಳ ಜೊತೆ ತುಲನೆ ಮಾಡಲು ತಜ್ಞರ ಹಾಗೂ ಸಾರ್ವಜನಿಕರ ಆಯೋಗವೊಂದನ್ನು ನೇಮಿಸಬೇಕು.

● ಐ.ಪಿ.ಪಿ.ಗಳ ವಿದ್ಯುತ್ ಖರೀದಿ ಒಪ್ಪಂದಗಳಿಗೆ ಆಯೋಗ ಮಂಜೂರಾತಿ ನೀಡುವಾಗ ಉತ್ಪಾದನಾ ವೆಚ್ಚದ ವಿವರಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ ಸಾರ್ವಜನಿಕರ ಆಕ್ಷೇಪಗಳಿಗೆ ಅವಕಾಶ ನೀಡಬೇಕು ಮತ್ತು ಆಯೋಗದ ಮಂಜೂರಾತಿ ಆಜ್ಞೆಗಳು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಬೇಕು.

● ಬರಗಾಲದಿಂದಾಗಿ ಅತ್ಯಂತ ಹೆಚ್ಚು ಹಾನಿಗೆ ಒಳಗಾದವರು ರೈತರು, ಕೃಷಿಕೂಲಿಕಾರರು, ಕೃಷಿ ಪಂಪ್ ಸೆಟ್‌ಗಳು ದೊಡ್ಡ ಪ್ರಮಾಣದಲ್ಲಿರುವುದೇ ಬರಗಾಲ ಪ್ರದೇಶಗಳಲ್ಲಿ ಮತ್ತು ಬೋರ್‌ವೆಲ್‌ಗಳಲ್ಲಿ ನೀರಿನ ಪ್ರಮಾಣ ತೀವ್ರವಾಗಿ ಕುಸಿದಿದೆ. ಗಾಯದ ಮೇಲೆ ಬರೆ ಎಳೆದಂತೆ ಹಾನಿಗೊಳಗಾಗಿ ಕಷ್ಟದಲ್ಲಿರುವ ಎರಡು ಹೊತ್ತಿನ ಊಟಕ್ಕೂ ದಾರಿಯಿಲ್ಲದೆ ದೊಡ್ಡ ಸಂಕಟವನ್ನು ಎದುರಿಸುತ್ತಿರುವಾಗ ಭಾಗ್ಯಜ್ಯೋತಿ, ಗೃಹಬಳಕೆ ಹಾಗೂ ಕೃಷಿ ಪಂಪ್‌ಸೆಟ್ ದರಗಳ ಏರಿಕೆ ಸೂಚನೆಯನ್ನು ಆಯೋಗ ಪೂರ್ಣವಾಗಿ ನಿರಾಕರಿಸಬೇಕು.

● ಬರಗಾಲವು ಆಗಾಗ್ಗೆ ಕೆಲವು ವರ್ಷ ಹೆಚ್ಚು ಮಳೆ, ಕೆಲವು ವರ್ಷ ಸರಾಸರಿ ಮಳೆ, ಕೆಲವು ವರ್ಷ ಕಡಿಮೆ ಮಳೆ ಹೀಗೆ ಒಂದು ಚಕ್ರದ ಭಾಗವಾಗಿ ಬರುವಂತಹುದು. ಈ ಬಗ್ಗೆ ಜಲವಿದ್ಯುತ್ ಕೇಂದ್ರಗಳಲ್ಲಿ ದೀರ್ಘಕಾಲೀನ ಮಾಹಿತಿ ಲಭ್ಯವಿದೆ. ಈ ಮಾಹಿತಿಯು ಆಧಾರದಲ್ಲಿ ಹೆಚ್ಚು ಜಲವಿದ್ಯುತ್ ಉತ್ಪಾದನೆಯಾದ ವರ್ಷಗಳಿಂದ ಬರುವ ಪ್ರಯೋಜನವನ್ನು ಬರಗಾಲದ ವರ್ಷಕ್ಕೆ ವರ್ಗಾಯಿಸುವ ಆವೃತ್ತನಿಧಿಯಂತಹ ಒಂದು ಮೆಕಾನಿಸಂನ್ನು ಸ್ಥಾಪಿಸಬೇಕು. ಬರಗಾಲದ ವರ್ಷಗಳಲ್ಲಿ ವಿದ್ಯುತ್ ದರವನ್ನು ವಿಪರೀತ ಹೆಚ್ಚಿಸುವ ಕ್ರಮಗಳನ್ನು ನಿರಾಕರಿಸಬೇಕು.

● ಕರ್ನಾಟಕದ ಅಗಾಧವಾದ ಪ್ರಾದೇಶಿಕ ಅಸಮಾನತೆಗಳು ಇಂದು ಸಾರ್ವಜನಿಕ ಚರ್ಚೆಯಲ್ಲಿದೆ. ಒಂದು ಪ್ರಮುಖ ಅಭಿವೃದ್ಧಿ ಚಾಲಕ ಶಕ್ತಿ ಹಾಗೂ ಸೂಚಕವಾದ ವಿದ್ಯುತ್ ಬಳಕೆಯಲ್ಲಿಯೂ ವಿವಿಧ ಪ್ರದೇಶಗಳ ನಡುವೆ ಒಂದು ಕಂದರವೇ ಇದೆ. ಬೆಂಗಳೂರು, ಮಂಗಳೂರು, ಹೈದರಾಬಾದ್ ಕರ್ನಾಟಕಗಳ ನಡುವೆ - ಗೃಹಬಳಕೆ, ಕೃಷಿ ಬಳಕೆ, ವಾಣಿಜ್ಯ ಬಳಕೆ, ಕೈಗಾರಿಕಾ ಬಳಕೆಗಳಲ್ಲಿ ಈ ವ್ಯತ್ಯಾಸ ಎದ್ದು ಕಾಣುತ್ತದೆ. ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಬಂಡವಾಳ ಹೂಡಿಕೆಯನ್ನು ಹೆಚ್ಚಿಸುವುದಕ್ಕೆ ಹಾಗೂ ದರಗಳ ವಿಷಯದಲ್ಲಿ ಪ್ರದೇಶಗಳ ನಡುವೆ ಕ್ರಾಸ್ ಸಬ್ಸಿಡಿಯ ವಿಶೇಷ ಅವಕಾಶ

ಪುಟ10 ಕ್ಕೆ

ಖ್ಯಾತ ಪತ್ರಕರ್ತ ಕುಲದೀಪ ನಯ್ಯರ್‌ರವರು ದಶಕಗಳ ಕಾಲ ಸಂಶೋಧನೆ ನಡೆಸಿ ರಚಿಸಿದ 'ದಿ ಮಾರ್ಟಿರ್' ಕೃತಿಯಿಂದ ಆಯ್ದ ಅಧ್ಯಾಯವೊಂದನ್ನು ಕಳೆದ ಸಂಚಿಕೆಯಲ್ಲಿ ಓದುಗರಿಗೆ ಪರಿಚಯ ಮಾಡಿಸಲೆಂದು ಪ್ರಕಟಿಸಲಾಗಿತ್ತು. ಅದರ ಉಳಿದ ಭಾಗ ಈ ಸಂಚಿಕೆಯಲ್ಲಿದೆ. ಕನ್ನಡಕ್ಕೆ ತಂದವರು ಪತ್ರಕರ್ತ ಜೆ.ಪಿ.ಬಸವರಾಜ್

ನಿದ್ರಿಸುತ್ತಿರುವ ಸಿಂಹ, ತನ್ನ ನಿದ್ರೆಯಿಂದ ಎಚ್ಚೆತ್ತಿತೆಂದರೆ, ನಮ್ಮ ನಾಯಕರು ಗುರಿಯನ್ನು ತಲುಪಿದ ನಂತರವೂ ಅದನ್ನು ತಡೆಯಲು ಸಾಧ್ಯವಾಗುವುದಿಲ್ಲ'.

'ಈ ಪ್ರಕರಣವನ್ನು ಅತ್ಯಂತ ಸರಳವಾದ ರೀತಿಯಲ್ಲಿ ಹೇಳಲು ಅವಕಾಶ ಕೊಡಿ. 'ಕ್ರಾಂತಿ ಚಿರಾಯುವಾಗಲಿ' ಎಂದು ಕೂಗಿ, ಈ ಘೋಷಣೆಯ ಅರ್ಥವನ್ನು ನೀವು ತಿಳಿದುಕೊಂಡಿದ್ದೀರೆಂದು ಭಾವಿಸುತ್ತೇನೆ. ಇದರ ಪರಿಭಾಷೆಯನ್ನು ನಾವು ಈಗಾಗಲೇ ಅಸೆಂಬ್ಲಿ ಬಾಂಬ್ ಪ್ರಕರಣದಲ್ಲಿ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದೇವೆ. ಕ್ರಾಂತಿಯೆಂದರೆ ಇರುವ ಸಾಮಾಜಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕಿತ್ತೆಸೆಯುವುದು; ಅದರ ಜಾಗದಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ತರುವುದು..... ಈ ಉದ್ದೇಶಕ್ಕಾಗಿ, ಸರ್ಕಾರ ಆಡಳಿತ ಯಂತ್ರವನ್ನು ನಿಯಂತ್ರಿಸಲು ನಾವು ಹೋರಾಡುತ್ತಿದ್ದೇವೆ.

ಇದರ ಜೊತೆಗೇ, ಸಮುದಾಯಕ್ಕೆ ಈ ಸೂಕ್ತ ವಾತಾವರಣವನ್ನು ಸೃಷ್ಟಿಸುವುದಕ್ಕಾಗಿ ಈ ಶಿಕ್ಷಣ ಅಗತ್ಯ. ಹೋರಾಟದಲ್ಲಿ ನಾವು ಅವರಿಗೆ ಅತ್ಯುತ್ತಮ ಶಿಕ್ಷಣ ಮತ್ತು ತರಬೇತಿಯನ್ನು ಕೊಡಬಹುದು'.


ಮೊದಲು ನಿಮ್ಮ ವೈಯಕ್ತಿಕತೆಯನ್ನು ನುಚ್ಚುನೂರು ಮಾಡಿ, ವೈಯಕ್ತಿಕ ಸುಖದ ಕನಸನ್ನು ಭಗ್ನಗೊಳಿಸಿ, ನಂತರ ಕೆಲಸ ಮಾಡಲು ತೊಡಗಿ. ನೀವು ಒಂದೊಂದೇ ಅಂಗುಲ ಮುಂದಕ್ಕೆ ಸಾಗಬೇಕು. ಅದಕ್ಕೆ ಧೈರ್ಯಬೇಕು; ದೃಢ ನಿರ್ಧಾರ ಬೇಕು; ನಿರಂತರ ಪರಿಶ್ರಮ ಬೇಕು. ಯಾವ ಕಷ್ಟ ಕಾರ್ಪಣ್ಯಗಳೂ ನಿರಾಶೆಗೊಳಿಸುವುದಿಲ್ಲ. ಯಾವ ವೈಫಲ್ಯಗಳೂ, ನಿಮ್ಮನ್ನು ಕಂಗೆಡಿಸುವುದಿಲ್ಲ. ತ್ಯಾಗ ಮತ್ತು ನರಳಾಟಗಳ ಅಗ್ನಿದಿವ್ಯವನ್ನು ಹಾದು ನೀವು ವಿಜಯಶಾಲಿಗಳಾಗುತ್ತೀರಿ. ಈ ವೈಯಕ್ತಿಕ ಗೆಲುವುಗಳು ಕ್ರಾಂತಿಯ ಬಹುದೊಡ್ಡ ಆಸ್ತಿ...'

ಗಲ್ಲಿನ ಅಟ್ಟ ಹಳೆಯದಾಗಿತ್ತು; ಆದರೆ ಗಲ್ಲಿಗೇರಿಸುವವರಲ್ಲ. ಮೂವರು ಬೇರೆಬೇರೆಯ ಹಲಗೆಗಳ ಮೇಲೆ ನಿಂತರು. ಅದರ ಅಡಿಯಲ್ಲಿ ಆಳ ಕಂದಕವಿತ್ತು. ಭಗತ್‌ಸಿಂಗ್ ಮಧ್ಯದಲ್ಲಿದ್ದ. ಪ್ರತಿಯೊಬ್ಬರ ಕತ್ತಿನ ಸುತ್ತಲೂ ಹಗ್ಗವನ್ನು ಬಿಗಿಯಲಾಯಿತು. ಅವರು ಹಗ್ಗಕ್ಕೆ ಮುತ್ತಿಟ್ಟರು. ಅವರ ಕೈಗಳನ್ನು ಮತ್ತು ಕಾಲುಗಳನ್ನು ಕಟ್ಟಲಾಯಿತು. ನೇಣು ಹಾಕುವವರು ಹಗ್ಗವನ್ನು ಎಳೆದರು: ಕಾಲಿನ ಅಡಿಯಲ್ಲಿದ್ದ ಹಲಗೆಗಳನ್ನು ತೆಗೆಯಲಾಯಿತು. ಅದು ಒರಟಾದ ವಿಧಾನ.

ನೇತಾಡುತ್ತಿದ್ದ ಅವರ ದೇಹಗಳನ್ನು ಬಹಳ ಹೊತ್ತಿನವರೆಗೆ ಹಾಗೆಯೇ ಬಿಡಲಾಯಿತು. ನಂತರ ಅವುಗಳನ್ನು ಕೆಳಗಿಳಿಸಲಾಯಿತು. ವೈದ್ಯರು ಪರಿಕ್ಷಿಸಿದರು. ಮೂವರು ಸತ್ತಿರುವುದನ್ನು ಅವರು ಖಚಿತ ಪಡಿಸಿದರು. ಒಬ್ಬ ಜೈಲು ಅಧಿಕಾರಿ ಈ ಮೂವರ ಧೈರ್ಯವನ್ನು ಕಂಡು ಭಾವುಕನಾದ. ಸತ್ತರವನ್ನು ಗುರುತಿಸುವಂತೆ ತನಗೆ ನೀಡಿದ ಆಜ್ಞೆಯನ್ನು ಈ ಅಧಿಕಾರಿ ಪಾಲಿಸದೆ ಧಿಕ್ಕರಿಸಿದ. ಆಗಲೇ ಅಲ್ಲಿಯೇ ಅವನನ್ನು ಸಸ್ಪೆಂಡ್ ಮಾಡಲಾಯಿತು. ಕಿರಿಯ ಅಧಿಕಾರಿಯೊಬ್ಬನಿಂದ ಈ ಕಾರ್ಯವನ್ನು ಮಾಡಿಸಲಾಯಿತು. ಜೈಲಿನ ಸೂಪರಿಂಟೆಂಡೆಂಟ್ ಸೇರಿದಂತೆ ಇಬ್ಬರು ಬ್ರಿಟೀಷ್ ಅಧಿಕಾರಿಗಳು ಗಲ್ಲು ಶಿಕ್ಷೆಯ ಉಸ್ತುವಾರಿಯನ್ನು ನೋಡಿಕೊಂಡರು: ಸಾವನ್ನು ದೃಢೀಕರಿಸಿದರು.

ಸಂಜೆಯ ನಸುಬೆಳಕಲ್ಲಿ, ಸೆಲ್‌ಗಳಲ್ಲಿದ್ದ ಕೈದಿಗಳು ತಮ್ಮ ಸೆಲ್‌ಗಳ ಎದುರಿಗಿದ್ದ ದಾರಿಯಿಂದ ಕೇಳಬರಬಹುದಾದ ಹೆಜ್ಜೆ ಸಪ್ಪಳಕ್ಕಾಗಿ ಕಾದಿದ್ದರು. ಎರಡು ಗಂಟೆಗಳ ಕಾಲ ಯಾರೊಬ್ಬರೂ ಈ ದಾರಿಯಲ್ಲಿ ನಡೆದು ಬರಲಿಲ್ಲ, ಬೀಗ ಹಾಕಿರುವುದನ್ನು ವಾರ್ಡನ್ ಕೂಡಾ ಇವತ್ತು ಇತ್ತ ತಲೆ ಹಾಕಲಿಲ್ಲ.

ಜೈಲಿನ ಗಂಟೆ ಆರು ಬಾರಿಸಿದಾಗ ಅವರು ದೂರದಲ್ಲಿ ಮೇಲು ದನಿಯಲ್ಲಿ ಕೇಳಿದರು; ಭಾರವಾದ ಬೂಟುಗಳ ಸದ್ದು, ಪರಿಚಿತ ಹಾಡುಗಳ ಪಲ್ಲವಿಗಳೂ ಅವರಿಗೆ ಕೇಳಿಸಿದವು: ಸರ್ಫ್‌ರೋಷಿ ಕಿ ತಮನ್ನಾ ಅಬ್ ಹಮಾರೆ ದಿಲ್ ಮೆ ಹೈ. ಅವರು



ಹುತಾತ್ಮ ಭಗತ್ ಸಿಂಗ್

ಮೂಲ : ಕುಲದೀಪ ನಯ್ಯರ್
ಕನ್ನಡಕ್ಕೆ : ಜಿ.ಪಿ.ಬಸವರಾಜು
ಪ್ರಕಾಶಕರು : ಲೋಹಿಯಾ ಪ್ರಕಾಶನ
ಕ್ಷಿತಿಜ, ಕಪ್ಪಗಲ್ಲು ರಸ್ತೆ,
ಗಾಂಧಿನಗರ, ಬಳ್ಳಾರಿ-09
ಬೆಲೆ : 60 ರೂ.

ಐಕ್ಯರಂಗ ಓದುಗರಿಗೆ 45 ರೂ.

ಬೇರೊಂದು ಹಾಡನ್ನು ಆರಂಭಿಸಿದರು- 'ಮಾಯ್, ರಂಗ್ ದೆ ಮೇರಾ ಬಸಂತಿ ಚೊಲೊ' (ತಾಯೆ, ಹುತಾತ್ಮನ ಬಟ್ಟೆಗಳನ್ನು ಸಿದ್ಧಪಡಿಸು). ಆದರೆ ಈ ಶಬ್ದಗಳೂ ಸಂಜೆಯ ನಿಶ್ಯಬ್ದದಲ್ಲಿ ಕರಗಿಹೋದವು. ನಂತರ ಅಲ್ಲಿಂದ 'ಇನ್‌ಕ್ವಿಲಾಬ್ ಜಿಂದಾಬಾದ್' 'ಹಿಂದೂಸ್ತಾನ್ ಆಜಾದ್ ಹೋ' ಘೋಷಣೆಗಳು ಕೇಳಿದವು. ಕೈದಿಗಳು ಘೋಷಣೆಯನ್ನು ಕೂಗಿದರು. ಅವರ ಪ್ರತಿಕ್ರಿಯೆ ಎಷ್ಟು ಜೋರಾಗಿತ್ತೆಂದರೆ ಅವರು ಭಗತ್‌ಸಿಂಗ್ ಭಾಷಣದ ಒಂದು ಭಾಗವನ್ನು ಕಳೆದುಕೊಂಡರು.

ಈಗ ಎಲ್ಲವೂ ಶಾಂತ. ಗಲ್ಲಿಗೇರಿಸಿದ ಬಹು ಹೊತ್ತಿನ ನಂತರ ಚರತ್‌ಸಿಂಗ್ ಬಂದ. ಬಂದವನೇ ಜೋರಾಗಿ ಅಳತೊಡಗಿದ. ತನ್ನ 30 ವರ್ಷಗಳ ಸೇವೆಯಲ್ಲಿ ಆತ ಅನೇಕ ಮರಣದಂಡನೆಗಳನ್ನು ನೋಡಿದ್ದ. ಆದರೆ ಯಾರೊಬ್ಬರೂ ಈ ಮೂವರು ಯುವಕರಂತೆ ಗಲ್ಲುಗಂಬವನ್ನು ಇಷ್ಟು ಧೈರ್ಯವಾಗಿ, ನಗುನಗುತ ಏರಿರಲಿಲ್ಲ ಎಂದು ಚರತ್‌ಸಿಂಗ್ ಹೇಳಿದ. ರಾಷ್ಟ್ರದ ಈ ಮೂರು ಹೂಗಳನ್ನು ಕಿತ್ತು ಹೊಸಕಿಹಾಕಲಾಯಿತು. ಈ ಮೂವರ ಧೈರ್ಯದ ಸಾಹಸಗಾಥೆ ಬ್ರಿಟಿಷ್ ಆಳ್ವಿಕೆಯ ಸಮಾಧಿಗಲ್ಲಿನ ಮೇಲೆ ಬರೆದ ಬರಹವಾಗಿತ್ತು ಎಂಬುದು ಕೈದಿಗಳಿಗೆ ಎಷ್ಟರ ಮಟ್ಟಿಗೆ ಅರ್ಥವಾಯಿತೋ!

1947ರ ಆಗಸ್ಟ್ 15ರಂದು, ಸುಮಾರು 16 ವರ್ಷಗಳ ನಂತರ ಕೊನೆಯ ಇಂಗ್ಲಿಷ್ ಸೈನಿಕ ಭಾರತದ ಕಡಲ ತೀರವನ್ನು ತೊರೆದ. ಭಗತ್‌ಸಿಂಗ್ ನುಡಿದಿದ್ದ ಭವಿಷ್ಯದಂತೆ, ಸದುದ್ದೇಶ ಒಂದಲ್ಲ ಒಂದುದಿನ ಜಯಗಳಿಸುತ್ತದೆ. ಸ್ವಾತಂತ್ರ್ಯದ ಪಂಜು ಉರಿಯಬೇಕಾದರೆ ಹಲವಾರು ಪ್ರಾಣ ತ್ಯಾಗಮಾಡಬೇಕಾದದ್ದು ಅನಿವಾರ್ಯ.

ಮೇಲಿನ ಮೂರು ದೇಹಗಳು ಮಾತ್ರ: ವಿಲೇವಾರಿಗಾಗಿ ಕಾಯುತ್ತಿರುವ ದೇಹಗಳು. ಜೈಲಿನ ಭಾರೀ ಗೋಡೆಗಳ ಆಚೆಗೆ ನಿರಂತರ ಎಚ್ಚರವನ್ನು ಇಟ್ಟುಕೊಂಡು ಕಾಯುತ್ತಿರುವ ನೂರಾರು ಜನ. ಈ ಶವಗಳನ್ನು ಹೊರಗೆ ಸಾಗಿಸುವುದು ಹೇಗೆ ಎಂಬ ತಲೆನೋವು ಅಧಿಕಾರಿಗಳಿಗೆ. ಜೈಲಿನ ಒಳಗೆ ಬೆಂಕಿ ಮತ್ತು ಹೊಗೆಯನ್ನು ಕಂಡರೆ ಹೊರಗಿನ ಗುಂಪು ಜೈಲಿನ ಮೇಲೆ ದಾಳಿಮಾಡುವುದೆಂಬ ಭೀತಿಯಿಂದಾಗಿ ಜೈಲಿನ ಒಳಗೆ ಅಂತ್ಯ ಸಂಸ್ಕಾರ ಮಾಡುವ ವಿಚಾರವನ್ನು ಅಧಿಕಾರಿಗಳು ಕೈಬಿಟ್ಟರು.

ಜೈಲಿನ ಹಿಂಭಾಗದ ಗೋಡೆಯ ಒಂದು ಭಾಗವನ್ನು ಕೆಡವಲಾಯಿತು. ಕತ್ತಲು ದಟ್ಟವಾದಾಗ, ಒಂದು ಟ್ರಕ್ಕನ್ನು ಒಳಕ್ಕೆ ತಂದು, ಲಗೇಜನ್ನು ತುಂಬುವಂತೆ ದೇಹಗಳನ್ನು ತುಂಬಲಾಯಿತು. ಮೊದಲಿಗೆ ಈ ದೇಹಗಳನ್ನು ರಾವಿನದಿಯ ದಂಡೆಯ ಮೇಲೆ ಸುಡುವುದೆಂದಾಗಿತ್ತು. ಆದರೆ ನದಿಯಲ್ಲಿ ಹೆಚ್ಚು ನೀರಿರಲಿಲ್ಲವಾದ ಕಾರಣ ಸಟ್ಲೆಜ್ ತೀರಕ್ಕೆ ಹೋಗುವುದೆಂದು ತೀರ್ಮಾನಿಸಲಾಯಿತು. ಟ್ರಕ್ಕಿನ ಬೆಂಗಾವಲಿಗೆ ಸೈನಿಕರಿದ್ದರು; ಟ್ರಕ್ ಫಿರೋಜ್ ಪುರಕ್ಕೆ ಹೊರಟಿತು. ಆದರೆ ಯೋಜನೆ ಕೈಕೊಟ್ಟಿತು.

ಶವಗಳನ್ನು ಸರಿಯಾದ ರೀತಿಯಲ್ಲಿ ಸುಡಲಾಗಲಿಲ್ಲ. ಬೆಂಕಿ ಉರಿಯುತ್ತ ಜ್ವಾಲೆಗಳು ಎದ್ದಾಗ ಅದನ್ನು ಹಳ್ಳಿಯ ಜನ ನೋಡಿದರು. ಅನೇಕರು ತಕ್ಷಣ ಈ ಸ್ಥಳಕ್ಕೆ ಓಡಿಬಂದರು. ಉರಿಯುತ್ತಿದ್ದ ಶವಗಳನ್ನು ಹಾಗೆಯೇ ಬಿಟ್ಟು ಸೈನಿಕರು ತಮ್ಮ ವಾಹನಗಳಿಗೆ ಓಡಿದರು. ವಾಹನಗಳು ಲಾಹೋರಿಗೆ ಧಾವಿಸಿದವು. ಹಳ್ಳಿಯ ಜನ ಪೂಜ್ಯಭಾವದಿಂದ ಉಳಿಕೆಗಳನ್ನು ಸಂಗ್ರಹಿಸಿದರು.

ಈ ಮೂವರು ತರುಣರನ್ನು ಗಲ್ಲಿಗೇರಿಸಿದ ಸುದ್ದಿ ಲಾಹೋರ್ ಮತ್ತು ಪಂಜಾಬ್‌ನ ಇತರ ನಗರಗಳಿಗೆ ಕಾಳ್ಗಿಚ್ಚಿನಂತೆ ಹಬ್ಬಿತು. ಯುವಕರು 'ಇಂಕ್ವಿಲಾಬ್ ಜಿಂದಾಬಾದ್' 'ಭಗತ್ ಸಿಂಗ್ ಜಿಂದಾಬಾದ್' ಘೋಷಣೆಗಳನ್ನು ಕೂಗುತ್ತ ಇಡೀ ರಾತ್ರಿ ಮೆರವಣಿಗೆ ಮಾಡಿದರು. ಮತ್ತೊಮ್ಮೆ ನಗರದಲ್ಲಿ ಹರತಾಳ ಆಚರಿಸಲಾಯಿತು. ಹಣ್ಣಿನ ಅಂಗಡಿಗಳು, ಸಬ್ಜಿ ಮಂಡಿಗಳು ಸಹಾ ಮುಚ್ಚಿದವು. ಸರ್ಕಾರಿ ಕಾಲೇಜುಗಳನ್ನು ಹೊರತುಪಡಿಸಿ ಎಲ್ಲ ಶಾಲೆ-ಕಾಲೇಜುಗಳನ್ನು ಮುಚ್ಚಲಾಯಿತು. ಸರ್ಕಾರಿ ಕಟ್ಟಡಗಳು ಮತ್ತು ಅಧಿಕಾರಿಗಳು ವಾಸವಾಗಿದ್ದ ಸ್ಥಳಗಳಿಗೆ ಪೋಲೀಸ್ ಕಾವಲನ್ನು ಹಾಕಲಾಯಿತು.

ಮಧ್ಯಾಹ್ನದ ಹೊತ್ತಿಗೆ ಲಾಹೋರಿನ ವಿವಿಧ ಭಾಗಗಳಲ್ಲಿ ಭಿತ್ತಿ ಪತ್ರಗಳು ಕಾಣಿಸಿಕೊಂಡವು. ಜಿಲ್ಲಾ ಮ್ಯಾಜಿಸ್ಟ್ರೇಟರು ಈ ಭಿತ್ತಿಪತ್ರಗಳಿಗೆ ಸಹಿ ಹಾಕಿದ್ದರು. ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ್ ಅವರ ಅಂತ್ಯ ಸಂಸ್ಕಾರವನ್ನು ಸಿಖ್ ಮತ್ತು ಹಿಂದೂ ವಿಧಿಗಳಿಗೆ ಅನುಗುಣವಾಗಿ ಸಟ್ಲೆಜ್ ನದಿಯ ದಂಡೆಯಲ್ಲಿ ಮಾಡಲಾಯಿತು ಎಂದು ಈ ಭಿತ್ತಿಪತ್ರಗಳಲ್ಲಿ ಪ್ರಕಟಿಸಲಾಗಿತ್ತು. ಇದನ್ನು ಪ್ರಶ್ನಿಸಿ ಅನೇಕ ಸಭೆಗಳು ನಡೆದವು; ಅಂತ್ಯ ಸಂಸ್ಕಾರವನ್ನು ಸರಿಯಾದ ರೀತಿಯಲ್ಲಿ ಮಾಡಿಲ್ಲ ಎಂದು ಈ ಸಭೆಗಳಲ್ಲಿ ಹೇಳಲಾಯಿತು. ಇದನ್ನು ಅಲ್ಲಗಳೆದು ಮ್ಯಾಜಿಸ್ಟ್ರೇಟರು ಹೇಳಿಕೆ ನೀಡಿದರು. ಆದರೆ ಯಾರೂ ಅದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ.

ಆ ಹೊತ್ತಿಗೆ ಅವಶೇಷಗಳು ಲಾಹೋರ್ ತಲುಪಿದವು. ಸಾಂಡರ್ಸ್‌ನನ್ನು ಗುಂಡಿಕ್ಕಿ ಕೊಂದ ಜಾಗಕ್ಕೆ ತೀರ ಹತ್ತಿರದಲ್ಲಿದ್ದ ನೀಲಗೊಂಬಾದ್‌ನಿಂದ ಸಂತಾಪ ಸೂಚಕ ಮೆರವಣಿಗೆ ಹೊರಟಿತು. ಮೂರು ಮೈಲಿಗೂ ಹೆಚ್ಚು ಉದ್ದವಿದ್ದ ಮೆರವಣಿಗೆ, ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಅನೇಕರು ಕಪ್ಪು ಪಟ್ಟಿಯನ್ನು ಧರಿಸಿದ್ದರು. ಮಹಿಳೆಯರು ಕಪ್ಪು ಸೀರೆಗಳನ್ನು ಉಟ್ಟಿದ್ದರು. 'ಇಂಕ್ವಿಲಾಬ್ ಜಿಂದಾಬಾದ್' 'ಭಗತ್‌ಸಿಂಗ್ ಜಿಂದಾಬಾದ್' ಎಂಬ ಘೋಷಣೆಗಳನ್ನು ಮೆರವಣಿಗೆಕಾರರು ಕೂಗಿದರು. ಕಪ್ಪು ಧ್ವಜಗಳು ಹಾರಾಡಿದವು. ಮೆರವಣಿಗೆ ಅನಾರ್ಕಲಿ ಬಜಾರಿನ ಮಧ್ಯಕ್ಕೆ ಬಂದು ನಿಂತಿತು. ಮೂವರು ಹುತಾತ್ಮರ ಚಿತಾಭಸ್ಮವನ್ನು ಹೊತ್ತು ಫಿರೋಜ್‌ಪುರದಿಂದ ಹೊರಟ ಭಗತ್‌ಸಿಂಗ್‌ನ ಸೋದರಿಯರು ನಗರವನ್ನು ತಲುಪಿದ್ದಾರೆಂಬ ಸುದ್ದಿಯನ್ನು ಪ್ರಕಟಿಸುತ್ತಿದ್ದಂತೆ ಗುಂಪು ಮೌನ ತಾಳಿತು. ಮೂರು ಗಂಟೆಗಳ ನಂತರ, ಪುಷ್ಪಾಲಂಕೃತವಾದ ಮೂರು ಶವ ಪೆಟ್ಟಿಗೆಗಳು ಈ ಮೆರವಣಿಗೆಯನ್ನು ಸೇರಿಕೊಂಡವು. ಭಗತ್‌ಸಿಂಗ್‌ನ ತಂದೆ ತಾಯಿ ಈ ಪೆಟ್ಟಿಗೆಗಳ ಹಿಂದೆ ಹೆಜ್ಜೆ ಹಾಕುತ್ತಿದ್ದರು. ಜೋರಾದ ಅಳು ಮುಗಿಲನ್ನು ತುಂಬಿತು. ಜನ ಗಟ್ಟಿಯಾಗಿ ಅತ್ತರು.

ವಿಪರ್ಯಾಸವೆನ್ನುವಂತೆ ಮೆರವಣಿಗೆ ರಾವಿ ದಂಡೆಯನ್ನು ತಲುಪಿತು. 24 ಗಂಟೆಗಳ ಮೊದಲು ಅಧಿಕಾರಿಗಳು ಇದೇ ಜಾಗದಲ್ಲಿ ಈ ಮೂವರ ಅಂತ್ಯಸಂಸ್ಕಾರವನ್ನು ಮಾಡಲು ಬಯಸಿ ದ್ದರು. ಲಾಹೋರನಲ್ಲಿ ಬೃಹತ್ ಸಭೆಯೊಂದು ನಡೆಯಿತು; ಮರಣ ದಂಡನೆ ಕಾನೂನು ಬಾಹಿರವೆಂದು ಖಂಡಿಸಲಾಯಿತು. ಅಧಿಕಾರಿಗಳು ಶವಗಳನ್ನು ವಿಲೇವಾರಿ ಮಾಡಿದ ಕ್ರಮದ ಬಗ್ಗೆ ಕ್ರೋಧ ವ್ಯಕ್ತವಾಯಿತು. ಉರ್ದು ದಿನಪತ್ರಿಕೆಯ ಪ್ರಸಿದ್ಧ ಸಂಪಾದಕ ಮೌಲಾನ ಜಫರ್ ಆಲಿಖಾನ್ ಅವರು, ಹೇಗೆ ತೆರೆದ ಆಕಾಶದ ಕೆಳಗೆ ಕರಕಲಾದ ಶವಗಳನ್ನು ಬಿಟ್ಟುಹೋಗಲಾಗಿತ್ತು ಎಂಬುದರ ಬಗ್ಗೆ ಪದ್ಯ ಓದಿದರು.

ಮರಣದಂಡನೆಯ ಸುದ್ದಿ ಹಬ್ಬಿದಂತೆ, ರಾಷ್ಟ್ರ ಶೋಕಸಾಗರದಲ್ಲಿ ಮುಳುಗಿತು. ಸಂತಾಪ ಸೂಚಿಸಲು ಜನ ಮೆರವಣಿಗೆಗಳನ್ನು ತೆಗೆದರು; ವಾಣಿಜ್ಯೋದ್ಯಮಿಗಳು ತಮ್ಮ ಮನೆಗಳಲ್ಲಿಯೇ ಉಳಿದರು. ಶ್ರದ್ಧಾಂಜಲಿ ಅರ್ಪಿಸಿದವರಲ್ಲಿ ನೆಹರೂ ಮೊದಲಿಗರು, 'ಭಗತ್ ಸಿಂಗ್ ವೈರಿಯನ್ನು ಮುಕ್ತಕಣದಲ್ಲಿ ಎದುರಿಸಿದ ಸ್ವಚ್ಛ ಹೋರಾಟಗಾರ' ಎಂದು ನೆಹರೂ ಬಣ್ಣಿಸಿದರು. ಆತ ರಾಷ್ಟ್ರಕ್ಕಾಗಿ ಜ್ವಲಂತ ಹಂಬಲವನ್ನು ತುಂಬಿಕೊಂಡ ಯುವಕ. ಅತ್ಯಲ್ಪ ಅವಧಿಯಲ್ಲಿಯೇ ಜ್ವಾಲೆಯಾಗಿ ಮಾರ್ಪಟ್ಟ ಕಿಡಿ ಭಗತ್ ಸಿಂಗ್. ಈ ಕಿಡಿ ರಾಷ್ಟ್ರದ ಒಂದು ನಗರದಿಂದ ಇನ್ನೊಂದಕ್ಕೆ ಹಬ್ಬಿತ್ತು; ಎಲ್ಲೆಲ್ಲೂ ಹರಡಿದ್ದ ಕತ್ತಲೆಯನ್ನು ಈ ಕಿಡಿ ದೂರ ಓಡಿಸಿತು ಎಂದು ನೆಹರೂ ನುಡಿದರು.

ಮರಣದಂಡನೆಗೊಳಗಾದವರ ಧೈರ್ಯವನ್ನು ಗಾಂಧಿ ಮುಕ್ತಕಂಠದಿಂದ ಹೊಗಳಿದರು. 'ಭಗತ್ ಸಿಂಗ್ ಮತ್ತು ಅವರ ಸಂಗಾತಿಗಳನ್ನು ಗಲ್ಲಿಗೇರಿಸಲಾಗಿದೆ. ಅವರು ಹುತಾತ್ಮರಾಗಿದ್ದಾರೆ. ಅವರ ಸಾವು ಅನೇಕರಿಗೆ ವೈಯಕ್ತಿಕ ನಷ್ಟದಂತೆ ಕಾಣಿಸುತ್ತಿದೆ. ಈ ಯುವಕರ ನೆನಪಿಗಾಗಿ ಶ್ರದ್ಧಾಂಜಲಿ ಸಲ್ಲಿಸುವ ಕಾರ್ಯದಲ್ಲಿ ನಾನೂ ಭಾಗಿಯಾಗಿದ್ದೇನೆ. ಭಗತ್ ಸಿಂಗ್ ಮತ್ತು ಅವರ ಇಬ್ಬರು ಸಂಗಾತಿಗಳನ್ನು ಗಲ್ಲಿಗೇರಿಸಲಾಗಿದೆ. ಅವರ ಜೀವಗಳನ್ನು ಉಳಿಸಲು ಹಲವಾರು ಪ್ರಯತ್ನಗಳು ನಡೆದವು; ಆಸೆಗಳೂ ಚಿಗುರಿದ್ದವು. ಆದರೆ ಎಲ್ಲಾ ವ್ಯರ್ಥವಾಯಿತು. ಭಗತ್ ಸಿಂಗ್ ಬದುಕುವ ಅಪೇಕ್ಷೆಯನ್ನೂ ತೋರಲಿಲ್ಲ. ಕ್ಷಮಾಪಣೆ ಕೋರಲು ಭಗತ್ ಸಿಂಗ್ ನಿರಾಕರಿಸಿದರು; ಅರ್ಜಿ ಸಲ್ಲಿಸಲು ಒಪ್ಪದೇ ಹೋದರು. ಅವರೊಂದು ವೇಳೆ ಬದುಕಲು ಒಪ್ಪಿದ್ದರೆ, ಇತರಿಗಾಗಿ ಅವರು ಹಾಗೆ ಮಾಡುತ್ತಿದ್ದರು. ಅದಕ್ಕವರು ಒಪ್ಪಿದ್ದರೆ..' ಎಂದು ಗಾಂಧಿ ಹೇಳಿದರು.

ಈ ಮೂವರ ಪ್ರಾಣಗಳನ್ನು ಉಳಿಸಲು ಗಾಂಧಿ ಏನೂ ಮಾಡಲಿಲ್ಲ ಎಂಬ ಕೋಪದಲ್ಲಿದ್ದ ಅನೇಕರಿಗೆ ಗಾಂಧಿಯ ಈ ಮಾತುಗಳು ಕೇಳಿಸಲಿಲ್ಲ.

ವಿದ್ಯುತ್ ಬಳಕೆದಾರರ ಹೋರಾಟ-ಒಂದು ಅನುಭವ

ಪುಟ 3 ರಿಂದ

ಸಮಿತಿ ಹೆಸರಲ್ಲಿ ಹೋರಾಟ ಮಾಡಿದ್ದರೆ--- ಸಮಾವೇಶಕ್ಕೆ ಬಂದ ಹಾಗೆ ಇದಕ್ಕೂ ಬರುತ್ತಿದ್ದರೂ ಸಾರ್----" ಎಂಬ ಮಾತನ್ನು ಗುಂಗರಮೆಳೆ ಮತ್ತು ನಲ್ಲಿಕೆರೆಯ ಯುವ ರೈತರು ಆಡುತ್ತಿದ್ದರು.

ಮೇಲಿನ ಅನುಭವ ಆದದ್ದು, ಮಾರ್ಚ್ 27'ರ ಸಾವಿರಕ್ಕೂ ಹೆಚ್ಚು ರೈತರನ್ನೊಳಗೊಂಡ ನೊಣವಿನಕೆರೆ ಸಮಾವೇಶದ ನಂತರ, ಏಪ್ರಿಲ್ ಒಂದರಿಂದ ತಿಪಟೂರು kptcl ಕಛೇರಿಗೆ ಮುತ್ತಿಗೆ ಹಾಕಬೇಕೆಂದು, ತಿಪಟೂರಿಗೆ ಹೋಗಿದ್ದಾಗ. ನೊಣವಿನಕೆರೆಯ ಸಬ್ ಸೆಕ್ಷನ್ ವ್ಯಾಪ್ತಿಯಲ್ಲಿ ಮೀಟರ್ ಅಳವಡಿಕೆ-ಜೇವಿಯರ್ ಕಂಪನಿ ಒಪ್ಪಂದದ ವಿರುದ್ಧ ಸಾವಿರಾರು ಸಂಖ್ಯೆಯ ರೈತರು ತಾವಾಗೆ ಸ್ವಯಂ ಸ್ಫೂರ್ತಿಯಿಂದ ಒಂದು ಸಮಾವೇಶ ನಡೆಸಿ, ಹೋಬಳಿ ವ್ಯಾಪ್ತಿಯ "ನೀರಾವರಿ ಪಂಪ್‌ಸೆಟ್ ವಿಧ್ಯುತ್ ಬಳಕೆದಾರರ ಹೋರಾಟ ಸಮಿತಿ" ರಚಿಸಿಕೊಂಡು 5000 ಕರ ಪತ್ರ ಹಾಕಿ, ಹಂಚಿ, ಏಪ್ರಿಲ್ ಒಂದು ಮುತ್ತಿಗೆಗೆ ತಯಾರಿ ನಡೆಸಿದರು. ಆದರೆ ಇದ್ದಕ್ಕಿದ್ದ ಹಾಗೆ ಹಿಂದಿನ ದಿನ ಜನತಾದಳ (S) ಮತ್ತು (U)'ನ ಕಾರ್ಯಕರ್ತರು ---- ಹಂಚಿದ ಜನತಾ ಪರಿವಾರದ ಕರಪತ್ರ, ಮುಖಂಡರು ಇಡೀ ಹೋರಾಟವನ್ನು ಜನತಾ ಪರಿವಾರದ ಹೋರಾಟವೆಂದು ಮಾರ್ಪಡಿಸಲು ಹೊರಟ ಕಾರಣ, ರೈತರ ಸಂಖ್ಯೆ ಕ್ಷೀಣಿಸಿತು, ಮಾತ್ರವಲ್ಲ ಇಡೀ ಹೋರಾಟ ನೀಡಬೇಕಾಗಿದ್ದ ಪ್ರತಿರೋಧ ಮೂಡಿಬರಲಿಲ್ಲ ಮಾತ್ರವಲ್ಲ, ಈ ಪರಿವಾರದ ನಾಯಕರ ವಿರುದ್ಧ ಸಾಮಾನ್ಯ ರೈತರಲ್ಲಿ ಅಸಮಾದಾನ ಮೂಡಿಸಿತು. ಹೋರಾಟ ಸಮಿತಿ ಒಳಗಿನ ಕೆಲವು ಜನತಾ ಪರಿವಾರದ ಸದಸ್ಯರು ಹಾಗೂ ಪದಾಧಿಕಾರಿಗಳ ಕಣ್ಣನ್ನು ಸಹಾ ಈ ತಿಪಟೂರು ಅನುಭವ ತೆರೆಸಬೇಕಿದೆ.

ವಿದ್ಯುತ್ ವಲಯವನ್ನು ಖಾಸಗೀಕರಿಸುವ ದೂರಗಾಮಿ ನೀತಿಯ ಭಾಗವಾಗಿ kptcl ಮಾಡಿಕೊಂಡಿರುವ ಜೇವಿಯರ್ ಕಂಪನಿಯೊಂದಿಗಿನ ಒಪ್ಪಂದದ ವಿರುದ್ಧ, ಬೂದಿಗೆರೆ, ನೊಣವಿನಕೆರೆ, ಹಾಗೂ ಕೈವಾರ ಮೂರು ಸಬ್ ಸೆಕ್ಷನ್ ವ್ಯಾಪ್ತಿಯ ರೈತರು ಸಮರ್ಪಕವಾಗಿ ಐಕ್ಯ ಸಮಾವೇಶ ನಡೆಸಿ, ರೈತರ ಪ್ರತಿರೋಧ ಒಡ್ಡಿದ್ದಾರೆ. ಸಮಾವೇಶದ ಪಕ್ಷಾತೀತ ಹಾಗೂ ಐಕ್ಯ ಚಳುವಳಿಯ ನೆಲೆಯನ್ನು ಸ್ಫೂರ್ತಿಯನ್ನು ಉಳಿಸಿಕೊಂಡು ಮುನ್ನಡೆಸಿದ ಬೂದಿಗೆರೆಯಲ್ಲಿ ಸಾವಿರಾರು ಜನರ ಹೋರಾಟ, ಏಪ್ರಿಲ್ 1ರಿಂದ ಪ್ರಾರಂಭವಾದ ಒಂದು ವಾರ ಕಾಲ KPTCL ಕಛೇರಿ ಮುತ್ತಿಗೆ ಚಳುವಳಿಯ ಭಾಗವಾಗಿ ಯಶಸ್ವಿಯಾಗಿ ನಡೆದಿದೆ. ಇದೇ ಸಮಯದಲ್ಲಿ ತಿಪಟೂರಿನ ಹೋರಾಟ-ನೊಣವಿ ನಕೆರೆ ಸಮಾವೇಶದ ಸ್ಫೂರ್ತಿಯನ್ನಾಗಲೀ ನೆಲೆಯನ್ನಾಗಲಿ ಪ್ರತಿಫಲಿಸಲಿಲ್ಲ. ಕೈವಾರದ ಅನುಭವ ಮತ್ತೊಂದು ರೀತಿಯ ಅಂಶವನ್ನೇ ಸಾರುತ್ತದೆ.



ರಾಜ್ಯದ 31 ತಾಲ್ಲೂಕುಗಳಲ್ಲಿ ಏಪ್ರಿಲ್ ಒಂದರೊಂದು ಧರಣಿ ಮುತ್ತಿಗೆಯನ್ನು ಕರ್ನಾಟಕ ಪ್ರಾಂತ ರೈತ ಸಂಘ (kprs) ಹಾಗೂ ನೀರಾವರಿ ಪಂಪ್‌ಸೆಟ್ ವಿಧ್ಯುತ್ ಬಳಕೆದಾರರ ಹೋರಾಟ ಸಮಿತಿಯ ಕರೆಯ ಮೇರೆಗೆ ನಡೆಸಲಾಗಿದೆ. ಬೆಂಗಳೂರಿನ ಹೊಸಕೋಟೆಯಿಂದ ಆರಂಭವಾಗಿ ಬೆಳಗಾವಿಯ ರಾಮದುರ್ಗಾ, ಚಿತ್ರದುರ್ಗಾದ ರಾಂಪುರ, ಮಂಡ್ಯದ ಮಳವಳ್ಳಿ, ಬೆಂಗಳೂರಿನ ದಕ್ಷಿಣ ತಾಲ್ಲೂಕು, ದೊಡ್ಡಬಳ್ಳಾಪುರ, ಆನೇಕಲ್, ಬಳ್ಳಾರಿಯ ಹೊಸಪೇಟೆ ಮುಂತಾದೆಡೆ ಸಾವಿರಾರು ರೈತರು ಉತ್ತಮವಾಗಿ ಸ್ಪಂದಿಸಿ ಹೋರಾಟದಲ್ಲಿ ಭಾಗವಹಿಸಿದ್ದಾರೆ. ಗುಲ್ಬರ್ಗಾದ ಅಫ್‌ಜಲ್‌ಪುರ, ಆಳಂದ, ಕೊಪ್ಪಳ ಜಿಲ್ಲೆಯ ಕುಷ್ಟಗಿ, ಗಂಗಾವತಿ, ಕನಕಗಿರಿಯಲ್ಲೂ ಹೋರಾಟಗಳು ನಡೆದಿವೆ.



ಏಪ್ರಿಲ್ ಒಂದರಿಂದ ನಡೆದ ಒಂದು ವಾರದ KPTCL ಕಛೇರಿ ಮುತ್ತಿಗೆಯ ಕರೆಯ ಮೇರೆಗೆ ನಡೆದ ರಾಜ್ಯವ್ಯಾಪಿ ಹೋರಾಟ, ರಾಜ್ಯದಲ್ಲಿ ವಿದ್ಯುತ್ ಸಮಸ್ಯೆಯ ವಿರುದ್ಧ ನಿರಂತರ, ಸಮರಶೀಲ ಹೋರಾಟ ನಡೆಸುತ್ತಿರುವ ಸಂಘಟನೆ ಪ್ರಾಂತ ರೈತ ಸಂಘ ಎಂಬ ಜನಪ್ರಿಯತೆ ತಂದಿದೆ. ಜೊತೆಗೆ KPRS'ನ ಪಕ್ಷಾತೀತ ಹೋರಾಟ - ಚಳುವಳಿ ನಡೆಸಬೇಕೆಂಬ ತೀರ್ಮಾನಕ್ಕೆ ಪುಷ್ಟಿ ನೀಡುವ ಅನುಭವಗಳನ್ನು ಹೋರಾಟ ತಂದುಕೊಟ್ಟಿದೆ. ಅದೇ ಸಮಯದಲ್ಲಿ, ರೈತರ ಉತ್ತಮ ಪ್ರತಿಕ್ರಿಯೆಯನ್ನು ಕಂಡು ಹೋರಾಟದಲ್ಲಿ ಭಾಗವಹಿಸುತ್ತಿರುವ ಹಲವು ಬಂಡವಾಳಶಾಹಿ ರಾಜಕೀಯ ಪಕ್ಷಗಳ ಮುಖಂಡರು, ಈ ಚಳುವಳಿಯನ್ನು ದಾರಿ ತಪ್ಪಿಸಲು, ರಾಜಕೀಯ ಲಾಭಗಳಿಸಲು ಸಂಕುಚಿತ ಪ್ರಯತ್ನ ನಡೆಸಿದ -ಅದರಿಂದ ಉಂಟಾದ ಪರಿಸ್ಥಿತಿ-ಪರಿಣಾಮದ ಅನುಭವವನ್ನು ರೈತರಿಗೆ ಹಾಗೂ ನಮಗೂ ತಂದುಕೊಟ್ಟಿದೆ.

KPTCL ನ ಮುಂದಿನ ದಿನಗಳ ದರ ಹೆಚ್ಚಳ, ಮೀಟರ್ ಅಳವಡಿಕೆ ಇತ್ಯಾದಿ ವಿಷಯಗಳ ಸಮಸ್ಯೆ ಮೇಲಿನ ಹೋರಾಟ-ಚಳುವಳಿಗೆ, ಈ ಚಳುವಳಿಯಿಂದ ಅರಿಯಬೇಕಾದ ಅಂಶವೆಂದರೆ ನೀರಾವರಿ ಪಂಪ್‌ಸೆಟ್ ರೈತರ ಚಳುವಳಿ ಯಶಸ್ವಿಯಾಗಬೇಕಾದರೆ ವಿಶಾಲ-ಐಕ್ಯ ರೈತರ ಹೋರಾಟವೇ ದಾರಿ ಎಂಬುದಾಗಿದೆ.

....ದೇಶವ್ಯಾಪಿ ಪ್ರತಿಭಟನೆ

ಪುಟ 5 ರಿಂದ

ಶೌಕತ್ ಅಲಿ ಅಲೂರು ವಹಿಸಿದ್ದರು.

ತುಮಕೂರಿನಲ್ಲಿ ಮೋದಿ ಪ್ರತಿಕೃತಿ ದಹನ


ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ರಾಜಿನಾಮೆಗೆ ಒತ್ತಾಯಿಸಿ ಜನತಾರಂಗದ ಜನತಾದಳ (ಎಸ್) ಸಿ.ಪಿ.ಐ(ಎಂ) ಸಿ.ಪಿ.ಐ ಪಕ್ಷದ ವತಿಯಿಂದ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿ.ಪಿ.ಐನ ಕಾರ್ಯದರ್ಶಿ ಎನ್.ಶಿವಣ್ಣನವರು ಮಾತನಾಡಿ ಗುಜರಾತ್ ಸರ್ಕಾರ ತನ್ನ ಅಧಿಕಾರವನ್ನು ಜನರ ಅಭ್ಯುದಯಕ್ಕೆ ಉಪಯೋಗಿಸದೇ ನರಹತ್ಯೆಗೆ ಮುಂದಾಗಿರುವುದು ಖಂಡನೀಯ ಎಂದರು.

ಜಾತ್ಯಾತೀತ ಜನತಾದಳದ ಮಾಜಿಶಾಸಕರಾದ ಗಂಗ ಹನುಮಯ್ಯನವರು ಮಾತನಾಡಿ ಅರಾಜಕತೆಗೆ ಕಾರಣವಾದ ನರೇಂದ್ರ ಮೋದಿ ಸರ್ಕಾರ ವಜಾ ಮಾಡಬೇಕು. ತಪ್ಪಿತಸ್ಥರನ್ನು ಕೂಡಲೇ ಬಂಧಿಸಿ ಕೋಮುದಳ್ಳುರಿ ತಡೆಯಬೇಕು. ಅಭದ್ರತೆಯಲ್ಲಿರುವ ಅಲ್ಪಸಂಖ್ಯಾತರನ್ನು ರಕ್ಷಿಸಲು ರಾಷ್ಟ್ರಪತಿಗಳು ಮುಂದಾಗಬೇಕೆಂದರು.


ಸಿ.ಪಿ.ಐ(ಎಂ) ಮುಖಂಡ ಮಹಮದ್ ದಸ್ತಗೀರ್‌ರವರು ಮಾತನಾಡಿ ದೇಶದಲ್ಲಿ ಆರ್ಥಿಕ ಹಿಂಜರಿಕೆ, ಭ್ರಷ್ಟಾಚಾರ, ನಿರುದ್ಯೋಗ ಬಡತನ ಹೆಚ್ಚಾಗುತ್ತಿರುವಾಗ ಒಂದು ಕೋಮಿನ ಜನರ ವಿರುದ್ಧ ಇನ್ನೊಂದು ಕೋಮನ್ನು ಎತ್ತಿ ಕಟ್ಟುವುದು ಸರಿಯಲ್ಲ. ತಪ್ಪು ಮಾಡಿದ ಯಾವುದೇ ಕೋಮಿಗೆ ಸೇರಿದವನೇ ಆಗಲಿ ಅವನಿಗೆ ಕಾನೂನಾತ್ಮಕ ಶಿಕ್ಷೆ ನೀಡಬೇಕೆಂದರು.

ಮಾಜಿ ಸಂಸದ ಜೆ.ಡಿ(ಎಸ್)ನ ಮುಖಂಡ ಸಿ.ಎಸ್.ಭಾಸ್ಕರಪ್ಪನವರು ಮಾತನಾಡಿ ಸಂವಿಧಾನಿಕ ಕರ್ತವ್ಯ ನಿರ್ವಹಣೆಯಲ್ಲಿ ಸೋತಿರುವ ಮೋದಿ ಸರ್ಕಾರ ಈ ಕೂಡಲೇ ತೊಲಗಬೇಕೆಂದು ಆಗ್ರಹಿಸಿದರು.



ದೆಹಲಿಯ ಪ್ರತಿಭಟನೆಯಲ್ಲಿ ಖ್ಯಾತ ನಟಿ ನಂದಿತಾ ದಾಸ್, ಮಾಜಿ ಭಾರತ ಸುಂದರಿ ನಫೀಸಾ ಅಲಿ

ಸಿ.ಪಿ.ಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಸೈಯದ್ ಮುಜೀಬ್ ಮಾತನಾಡಿ ಗುಜರಾತಿನ ಜನತೆ ಶಾಂತಿ ಸುವ್ಯವಸ್ಥೆ ಮತ್ತು ಸೌಹಾರ್ಧತೆಗಾಗಿ ಪರಿತಪಿಸುವಾಗ ಚುನಾವಣೆ ನಡೆಸಲು ಹೊರಟಿರುವ ಬಿ.ಜೆ.ಪಿ ಸರ್ಕಾರವ ಕ್ರಮವನ್ನು ಉಗ್ರವಾಗಿ ಖಂಡಿಸಿದರು. ಪಿಪಲ್ಸ್ ಫ್ರಂಟ್ ಪರವಾಗಿ ಜಿಲ್ಲಾಧಿಕಾರಿಗಳ ಮೂಲಕ ಮನವಿ ಪತ್ರವನ್ನು ಜನತಾದಳದ ಗಂಗರಾಜು ವಾಚಿಸಿದರು. ಪ್ರತಿಭಟನೆಯ ನೇತೃತ್ವವನ್ನು ಜೆ.ಡಿ(ಎಸ್)ನ ಅಂಕೂರಯ್ಯ, ಮೆಹತಾಬ್ ಪರಸೀಯಪ್ಪ, ಎ.ಕೋದಂಡರಾಮು, ಬಿ.ಎನ್.ಪ್ರೇಮ, ಅಪ್ಸರ್ ಮತ್ತು ನಾಗರಾಜು, ಸಿ.ಪಿ.ಐ ಪಕ್ಷದ ಕಂಬೇಗೌಡ ಮತ್ತಿತರರು ವಹಿಸಿದ್ದರು.



"ಕೋಮುವಾದಿ ನರಹಂತಕ ಗುಜರಾತಿನ ನರೇಂದ್ರಮೋದಿ ಸರ್ಕಾರ ತೊಲಗಲಿ, ಮಾನವೀಯತೆ ಉಳಿಯಲಿ ಕೋಮುವಾದ ಅಳಿಯಲಿ ಬಾವೈಕ್ಯತೆ ಉಳಿಯಲಿ ಎಂಬ ಘೋಷಣೆಗಳೊಂದಿಗೆ ನಗರದ ಟೌನ್‌ಹಾಲ್ ಮುಂಬಾಗದಿಂದ ಮೆರವಣಿಗೆಯಲ್ಲಿ ತೆರಳಿ ಬಸ್ ನಿಲ್ದಾಣದ ಎದುರು ನರೇಂದ್ರಮೋದಿಯವರು ಪ್ರತಿಕೃತ ದಹನ ಮಾಡಲಾಯಿತು.

ವಿದ್ಯುತ್ ಸುಧಾರಣೆ ಎಂಬ ಮಹಾಮೋಸ

ಪುಟ 7 ರಿಂದ

ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಈ ಆಸ್ತಿಯನ್ನು ಮೂರು ಕಾಸಿಗೆ ಮಾರಾಟ ಮಾಡಿ ಸ್ವಂತಕ್ಕೆ ಲಾಭ ಗಿಟ್ಟಿಸಿಕೊಳ್ಳಲು ಯಾರ್ಯಾರು ಬಾಯ್ತೆರೆದು ಕುಳಿತಿದ್ದಾರೋ ಹೇಳಲಾಗದು.

ಈಗಾಗಲೇ ಖಾಸಗೀ ಉತ್ಪಾದಕರ ವಿದ್ಯುತ್ ದರಗಳು ಬಳಕೆದಾರರಿಗೆ ಹೊರಲಾಗದ ಹೊರೆಗಳಾಗಿವೆ. ಮುಂದೆ ವಿದ್ಯುತ್ತಿನ ಉತ್ಪಾದನೆ, ಅದರ ಸಾಗಾಣಿಕೆ ಮತ್ತು ವಿತರಣೆಗಳೆಲ್ಲವನ್ನೂ ಖಾಸಗೀ ಕಂಪನಿಗಳು ವಹಿಸಿಕೊಂಡರೆ ಬಳಕೆದಾರರ ಗತಿ ಏನಾಗಬಹುದು? ವಿದ್ಯುತ್ ಕ್ಷೇತ್ರದ ಖಾಸಗೀಕರಣದಿಂದ ಕೈಸುಟ್ಟುಕೊಂಡಿರುವ ಒರಿಸ್ಸಾ, ಮಹಾರಾಷ್ಟ್ರ ಮೊದಲಾದ ರಾಜ್ಯಗಳ ಕಹಿ ಅನುಭವಗಳಿಂದ ಕರ್ನಾಟಕ ಸರ್ಕಾರ ಪಾಠ ಕಲಿಯುತ್ತಿಲ್ಲ. ನಾಲ್ಕು ವಿತರಣಾ ಕಂಪನಿಗಳನ್ನು ರಚಿಸಿಕೊಂಡು ಅವುಗಳನ್ನು ಖಾಸಗೀಕರಣಗೊಳಿಸಿದ ಮೊದಲ ರಾಜ್ಯ ಒರಿಸ್ಸಾ. ಅವುಗಳಲ್ಲಿ ಅಮೆರಿಕದ AES ಕಂಪನಿ ಕೈಕೊಟ್ಟು ಓಡಿ ಹೋಯಿತು. ಸರ್ಕಾರದ ಮೇಲೆ ಸಾವಿರಾರು ಕೋಟಿ ರೂ. ಹೊರೆ ಹೇರಿದ ಉಳಿದ ಖಾಸಗಿ ಕಂಪನಿಗಳಿಂದಲೂ ಜವಾಬ್ದಾರಿ ನಿರ್ವಹಿಸಲಾಗಲಿಲ್ಲ. ಮಹಾರಾಷ್ಟ್ರ ಸರ್ಕಾರ ಬಹುರಾಷ್ಟ್ರೀಯ ಕಂಪನಿ ಎನ್ರಾನ್‌ದೊಂದಿಗೆ ಒಪ್ಪಂದವನ್ನು ಮಾಡಿಕೊಂಡಿತ್ತು. ಮಹಾರಾಷ್ಟ್ರ ವಿದ್ಯುತ್ ಮಂಡಳಿಯು ಎನ್ರಾನ್ ಕಂಪನಿಗೆ ಹಣ ಪಾವತಿ ಮಾಡುವುದರಲ್ಲಿಯೇ ದಿವಾಳಿಯಾಯಿತು. ಮಹಾರಾಷ್ಟ್ರ ಸರ್ಕಾರವೇ ದಿವಾಳಿಯಾಗುವ ಪರಿಸ್ಥಿತಿ ಉಂಟಾಯಿತು. ಕೊಜೆಂಟ್ರಿಕ್ಸ್ ಎಂಬ ಕಂಪನಿಯು ಕರ್ನಾಟಕವನ್ನು ಇದೇ ರೀತಿ ಅನಾಹುತಕ್ಕೀಡು ಮಾಡಲು ಹೊರಟಿತ್ತು. ಜನತೆಯ ತೀವ್ರ ಪ್ರತಿರೋಧದ ಕಾರಣದಿಂದಾಗಿ ಅದು ಹೇಳಹೆಸರಿಲ್ಲದೆ ನಾಪತ್ತೆಯಾಯಿತು. ಮಂಗಳೂರಿನ ತಣ್ಣೀರ್ ಬಾವಿ ವಿದ್ಯುತ್ ಕಂಪನಿಯೊಂದಿಗೆ ಈಗಾಗಲೇ ಹುಟ್ಟಿಕೊಂಡಿರುವ ವಿವಾದವು ಮುಂದೆ ಬರಬಹುದಾದ ಗಂಡಾಂತರದ ಮುನ್ಸೂಚನೆಯಾಗಿದೆ. ಒಪ್ಪಂದದಲ್ಲಿ ಅಂಗೀಕರಿಸಲಾದ ನಿಗದಿತ ವೆಚ್ಚಕ್ಕಿಂತಲೂ 1040 ಕೋಟಿ ರೂ.ಗಳನ್ನು ಅದು ಹೆಚ್ಚಿಗೆ ಡಿಮಾಂಡ್ ಮಾಡಿರುವುದನ್ನು ಕೆ.ಪಿ.ಟಿ.ಸಿ.ಎಲ್. ಕೊಡಲು ನಿರಾಕರಿಸಿದಾಗ ಕರ್ನಾಟಕ ಸರ್ಕಾರವೇ ಮಧ್ಯ ಪ್ರವೇಶ ಮಾಡಿ ಕಂಪನಿಗೆ ಹೆಚ್ಚುವರಿ ಹಣವನ್ನು ನೀಡಲು ಆದೇಶಿಸುವ ಮೂಲಕ ಕೆ.ಇ.ಆರ್.ಸಿ.ಗೆ ಮುಜುಗರವನ್ನುಂಟುಮಾಡಿದೆ. ಒಟ್ಟಾರೆಯಾಗಿ ವಿದ್ಯುಚ್ಛಕ್ತಿಯಂತಹ ಆಯಕಟ್ಟಿನ ಕ್ಷೇತ್ರವನ್ನು ಲಾಭಕೋರ ಖಾಸಗಿ ಕಂಪನಿಗಳಿಗೆ ಒಪ್ಪಿಸುವುದು ಜನತೆಯ ಹಿತದೃಷ್ಟಿಯಿಂದ ಅತ್ಯಂತ ಅಪಾಯಕಾರಿಯಾಗಿದೆ.

ಸಾರ್ವತ್ರಿಕ ಮೀಟರೀಕರಣವನ್ನು ವಿರೋಧಿಸಬೇಕು ಯಾಕೆ?

ನೂರಕ್ಕೆ ನೂರು ಸಂಪರ್ಕಗಳಿಗೆ ಮೀಟರ್ ಅಳವಡಿಸುವ ಮೂಲಕ ವಿದ್ಯುತ್ ಕಳ್ಳತನವನ್ನು ತಡೆಗಟ್ಟಲು ಉದ್ದೇಶಿಸಲಾಗಿದೆ ಎಂದು ಕೇಂದ್ರ ವಿದ್ಯುತ್ ಮಂತ್ರಿ ಸುರೇಶ್ ಪ್ರಭು ಹೇಳುತ್ತಾರೆ. ಸರಿಸುಮಾರು ಎಲ್ಲಾ ಸಂಪರ್ಕಗಳಿಗೂ ಮೀಟರ್ ಇರುವಂತಹ ಬೆಂಗಳೂರಿನಂತಹ ನಗರ ಪ್ರದೇಶಗಳಲ್ಲಿ ವಿದ್ಯುತ್ ಕಳ್ಳತನ ನಡೆಯುತ್ತಲೇ ಇದೆ. ದೊಡ್ಡ ಪ್ರಮಾಣದ ವಿದ್ಯುತ್ ಕಳ್ಳತನ ನಡೆಯುತ್ತಿರುವುದು HT ಮತ್ತು EHT ಸಂಪರ್ಕಗಳ ಮೂಲಕ ಎಂಬುದನ್ನು ಗಮನಿಸಿ ವಿದ್ಯುತ್ ಕಳ್ಳತನವನ್ನು ತಡೆಗಟ್ಟಲು ಮಾನ್ಯ ಮಂತ್ರಿಗಳು ಕಟ್ಟುನಿಟ್ಟಾದ ಕ್ರಮ ಕೈಗೊಂಡರೆ ಒಳ್ಳೆಯದಾಗುವುದು.

ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ, ಭಾಗ್ಯಜ್ಯೋತಿ/ ಕುಟೀರ ಜ್ಯೋತಿ ಮೊದಲಾದ ಎಲ್ಲಾ ಸಂಪರ್ಕಗಳಿಗೆ ಮೀಟರ್ ಅಳವಡಿಸಲು ಹೊರಟಿರುವುದಕ್ಕೆ ವಿದ್ಯುತ್ ಕಳ್ಳತನ ತಡೆಯುವ ಉದ್ದೇಶಕ್ಕಿಂತಲೂ ಹೆಚ್ಚಾಗಿ ವಿದ್ಯುತ್ ವಿತರಣೆಯನ್ನು ತುರ್ತಾಗಿ ಖಾಸಗೀಕರಣ ಮಾಡುವ ಉದ್ದೇಶವಿದೆ. ಲಾಭದಾಸೆಯಿಂದ ಈ ಕ್ಷೇತ್ರಕ್ಕೆ ನುಗ್ಗಲಾರಂಭಿಸಿರುವ ಖಾಸಗಿ ಕಂಪನಿಗಳು ತಮ್ಮ ಲಾಭವನ್ನು ಖಚಿತಪಡಿಸಿಕೊಳ್ಳಲು, ಕಾಲಕಾಲಕ್ಕೆ ಯೂನಿಟ್ ಆಧಾರದಲ್ಲಿ ದರಗಳನ್ನು ಏರಿಸುತ್ತಾ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುವಂತೆ ಎಲ್ಲಾ ಸಂಪರ್ಕಗಳಿಗೂ ಮೀಟರ್ ಅಳವಡಿಸಬೇಕು ಎಂದು ಒತ್ತಾಯಿಸುತ್ತಿವೆ. ಆದ್ದರಿಂದ ಸಾರ್ವತ್ರಿಕ ಮೀಟರ್ ಅಳವಡಿಕೆಯನ್ನು ತಡೆಗಟ್ಟಲೇಬೇಕು.

ಕರ್ನಾಟಕದ ರೈತರು ಉಚಿತ ವಿದ್ಯುತ್ತನ್ನು ಕೇಳುತ್ತಿಲ್ಲ. ರೈತರ ಇಂದಿನ ಸ್ಥಿತಿಗತಿಗಳ ಆಧಾರದಲ್ಲಿ ಅವರಿಗೆ ಇನ್ನೂ ಕೆಲಕಾಲ ರಿಯಾಯ್ತಿ ದರಗಳಲ್ಲಿಯೇ ವಿದ್ಯುತ್ ಪೂರೈಕೆ ಮುಂದುವರೆಸುವುದು ಅಗತ್ಯವಾಗಿದೆ. ಅತಿವೃಷ್ಟಿ ಅನಾವೃಷ್ಟಿಯಿಂದ ರೈತರು ಬೆಳೆ ಹಾನಿ ಅನುಭವಿಸುತ್ತಿದ್ದಾರೆ. ಸಮಗ್ರವಾದ ಬೆಳೆ ವಿಮಾ ಯೋಜನೆ ಜಾರಿಯಲ್ಲಿಲ್ಲ. ಕಷ್ಟಪಟ್ಟು ಬೆಳೆದ ಫಸಲಿಗೆ ನ್ಯಾಯವಾದ ಬೆಲೆ ಇಲ್ಲ. ಸಾಲ ಕೊಟ್ಟವರ ಕಾಟ ತಾಳಲಾರದೆ ರೈತರು ಇಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರಾಜ್ಯದ ಕೃಷಿಕರನ್ನು ಮತ್ತು ಕೃಷಿಯನ್ನು ಉಳಿಸಲು ಸರ್ಕಾರಕ್ಕೇನಾದರೂ ಆಸಕ್ತಿಯಿದ್ದರೆ ರೈತರ ಪಂಪ್‌ಸೆಟ್‌ಗಳಿಗೆ ಮೀಟರ್ ಅಳವಡಿಸುವುದನ್ನು ಬಿಟ್ಟು ರೈತರಿಗೆ ಉತ್ತಮ ಗುಣಮಟ್ಟದ ವಿದ್ಯುತ್ತನ್ನು ದಿನಕ್ಕೆ 12 ಗಂಟೆಗಳವರೆಗೆ ಪೂರೈಸಲು ಕ್ರಮಕೈಗೊಳ್ಳಬೇಕು. ರೈತರ ಕೃಷಿ ಆದಾಯವನ್ನು ವೈಜ್ಞಾನಿಕವಾಗಿ ಲೆಕ್ಕಹಾಕಿ ವಿದ್ಯುತ್ ದರಗಳನ್ನು ನಿಗದಿಪಡಿಸಬೇಕು. ಅಲ್ಲಿಯವರೆಗೆ ಪ್ರಸಕ್ತ ದರ (ಹೆಚ್.ಪಿ. ಗೆ 300 ರೂ.) ವನ್ನು ಮುಂದುವರಿಸಬೇಕು. ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸುವ ಅವಧಿಯನ್ನು ವಿಸ್ತರಿಸಬೇಕು. ಈ ಸಂದರ್ಭದಲ್ಲಿ ವಿಧಿಸುವ ದಂಡದ ಪ್ರಮಾಣವನ್ನು ಗಣನೀಯವಾಗಿ ಇಳಿಸಬೇಕು. **ರೈತರು ಸಹ ಗ್ರಾಮ ಗ್ರಾಮಗಳಲ್ಲಿ ಸಂಘಟಿತರಾಗಿ ಬಲವಂತದ ಮೀಟರ್ ಅಳವಡಿಕೆಯನ್ನು ತಡೆಯಲು, ದುಬಾರಿ ದರ ಏರಿಕೆಯನ್ನು ವಿರೋಧಿಸಲು ಸಜ್ಜಾಗಬೇಕು.**

ಭಾಗ್ಯಜ್ಯೋತಿ/ಕುಟೀರ ಜ್ಯೋತಿ ಸಂಪರ್ಕಗಳಿಗೆ ಮೀಟರ್ ಅಳವಡಿಸುವುದನ್ನು ಕೈಬಿಟ್ಟು ದುರ್ಬಲ ವರ್ಗದ ಜನಗಳಿಗೆ ಕನಿಷ್ಠ ಎರಡು ದೀಪಗಳನ್ನು ಉರಿಸಲು ಪ್ರಸಕ್ತ ರಿಯಾಯ್ತಿ ದರಗಳಲ್ಲಿಯೇ ವಿದ್ಯುತ್ತನ್ನು ಪೂರೈಸಬೇಕು. ಅದರಂತೆಯೇ ಗೃಹ ಬಳಕೆ ಹಾಗೂ ಸರ್ವ ವಿದ್ಯುತ್ ಗೃಹಗಳಿಗೆ ಪ್ರಸ್ತಾವಿಸಲಾದ ದರಗಳು ತುಂಬಾ ದುಬಾರಿಯಾಗಿವೆ. ಇಷ್ಟೊಂದು ದರ ಏರಿಕೆ ಜಾರಿಗೆ ಬಂದರೆ ಮನೆ ಬೆಳಗಲು ಸಹ ವಿದ್ಯುತ್ ಬಳಕೆ ಅಸಾಧ್ಯವಾಗುವುದು. ಸರ್ವ ವಿದ್ಯುತ್ ಗೃಹಗಳನ್ನು ಹೊಂದಿರುವ ಮಧ್ಯಮ ವರ್ಗದ ಜನಗಳ ನಿಯಮಿತ ಆದಾಯ ಹಲವು ದಿಕ್ಕುಗಳಿಂದ ಕಡಿತವಾಗುತ್ತಿದ್ದು ಆ ವಿಭಾಗದ ಜನತೆ ಹೇಳಿಕೊಳ್ಳಲಾಗದ ಸಂಕಷ್ಟಕ್ಕೆ ಒಳಗಾಗಿದೆ. **ನಗರ ಪ್ರದೇಶದ ವಿದ್ಯುತ್ ಬಳಕೆದಾರರು ಸಹ ಸಂಘಟಿತರಾಗಿ ಈ ದಾಳಿಯ ವಿರುದ್ಧ ಬೀದಿಗಿಳಿಯಲು ಮುಂದಾಗಬೇಕು.**

ಲಕ್ಷಾಂತರ ದುಡಿಯುವ ಕೈಗಳಿಗೆ ಉದ್ಯೋಗವನ್ನು ಒದಗಿಸುತ್ತಿರುವ ಸಣ್ಣ ಕೈಗಾರಿಕೆಗಳಿಗೆ ಈ ವಿದ್ಯುತ್ ದರ ಏರಿಕೆ ಬಲವಾದ ಏಟು ಕೊಡಲಿದೆ. ಈಗಾಗಲೇ ಕೇಂದ್ರ ಸರ್ಕಾರದ ಮುಕ್ತ ಆಮದು ನೀತಿಯಿಂದ ಸಣ್ಣ ಪ್ರಮಾಣದ ಉತ್ಪಾದಕರು ದಿವಾಳಿಯಾಗುತ್ತಿದ್ದಾರೆ. ಈ ಕ್ಷೇತ್ರಕ್ಕೆ ಸರ್ಕಾರದ ಪ್ರೋತ್ಸಾಹ ಮುಂದುವರೆಯುವುದು ಅತಿ ಅಗತ್ಯವಾಗಿರುವುದರಿಂದ ಅವುಗಳಿಗೆ ಅನ್ವಯವಾಗುವ ಉದ್ದೇಶಿತ ದರ ಏರಿಕೆಯನ್ನು ಕೈಬಿಡಬೇಕು. **ಸಣ್ಣ ಕೈಗಾರಿಕೆಗಳ ಮಾಲೀಕರು ಸಹ ಈ ಜನಪರ ಚಳುವಳಿಯನ್ನು ಪ್ರೋತ್ಸಾಹಿಸಿ ಬಲಪಡಿಸಲು ಮುಂದಾಗಬೇಕಾಗಿದೆ.**

ಕೊನೆಯದಾಗಿ, ವಿದ್ಯುತ್ ಕ್ಷೇತ್ರದ ಸುಧಾರಣೆಗಳ ಹೆಸರಿನಲ್ಲಿ ಕರ್ನಾಟಕ ಸರ್ಕಾರವು ಜಾರಿಗೆ ತರಲು ಹೊರಟಿರುವ ವಿಶ್ವಬ್ಯಾಂಕ್ ನಿರ್ದೇಶಿತ ವಿದ್ಯುತ್ ನೀತಿಯ ಎಲ್ಲಾ ಬಹಿರಂಗದ ಹಾಗೂ ಅಂತರಂಗದ ವಿಚಾರಗಳನ್ನು ವಿದ್ಯುತ್ ಬಳಕೆದಾರರು ಹಾಗೂ ನಾಡಿನ ಜನತೆ ಅರ್ಥಮಾಡಿಕೊಳ್ಳಲು ಸಾಧ್ಯವಾಗಬೇಕು. ಹಾಗೂ ಬಲವಾದ ಜನ ಚಳುವಳಿಯ ಮೂಲಕ ಈ ದಾಳಿಯನ್ನು ಪರಿಣಾಮಕಾರಿಯಾಗಿ ಹಿಮ್ಮೆಟ್ಟಿಸಲು ಸಾಧ್ಯವಿದೆ ಎಂಬ ದೃಢ ವಿಶ್ವಾಸವ ಅನುಭವದಿಂದ

........ದುಡಿಯುವ ಜನತೆಗೆ ಎಸಗುತ್ತಿರುವ ಅಪರಾಧ

ಪುಟ 7 ರಿಂದ

ನೀಡುವುದಕ್ಕೆ ಕೆಪಿಟಿಸಿಎಲ್ ವಿಭಜನೆ ಹಾನಿ ಮಾಡುತ್ತದೆ. ಇಡೀ ರಾಜ್ಯದ ಸಮಗ್ರ ಅಭಿವೃದ್ಧಿಯ ಯೋಜನೆಗೆ ಹಾನಿ ಮಾಡುತ್ತದೆ.

ರಾಜ್ಯ ಸರ್ಕಾರ ನೀಡುತ್ತಿರುವ ಸಬ್ಸಿಡಿ 2339 ಕೋಟಿ ಇಂದು ದುರುಪಯೋಗಕ್ಕೊಳಗಾಗಿದೆ. ಅದರ ಪ್ರಯೋಜನ ಪಡೆಯಬೇಕಾದ ದುರ್ಬಲ ವರ್ಗಗಳಿಗೆ ರೈತರಿಗೆ ಸಹಾಯಧನದ ಪ್ರಯೋಜನ ಸಿಕ್ಕುತ್ತಿಲ್ಲ. ಅದಕ್ಕೆ ಬದಲಾಗಿ ಈಗಾಗಲೇ ಹೇಳಿದಂತೆ ವಿದ್ಯುತ್ ಕಳ್ಳರಿಗೆ ಸಾವಿರ ಕೋಟಿ ರೂ., ಖಾಸಗೀ ವಿದ್ಯುತ್ ತಯಾರಿಕೆಗಾರರಿಗೆ ಸುಮಾರು 1030 ಕೋಟಿ ರೂ., ಕೆಪಿಟಿಸಿಎಲ್ ಮತ್ತು ಕೆಪಿಟಿಸಿಎಲ್‌ನಲ್ಲಿಯೂ ಇರುವ ಭ್ರಷ್ಟಾಚಾರಗಳಿಗೆ, ಕೀಳದರ್ಜೆಯ ವಸ್ತುಗಳ ಖರೀದಿಗಳಿಗೆ ಈ ಸಹಾಯಧನದ ದುರುಪಯೋಗವಾಗುತ್ತಿದೆ.

ವಿದ್ಯುತ್ ಏರಿಕೆಯ ಹಿಂದೆ, ಕೆಪಿಟಿಸಿಎಲ್ ವಿಭಜನೆಯ ಹಿಂದೆ ಅಡಗಿರುವ ಮುಖ್ಯ ಕಾರಣ ಖಾಸಗೀಕರಣದ ನೀತಿ. ಅತೀ ಲಾಭದ ಬೆನ್ನು ಹತ್ತುವ ದೇಶಿ, ವಿದೇಶಿ ಖಾಸಗೀ ಬಂಡವಾಳಗಾರರ ಪ್ರವೃತ್ತಿ ಈಗ ಜಗಜ್ಜಾಹೀರಾಗಿದೆ. ಅಮೇರಿಕದ ಕ್ಯಾಲಿಫೋರ್ನಿಯಾ ಹಾಗೂ ಎನ್ರಾನ್ ಅನುಭವ ನಮ್ಮ ದೇಶದ ಮಹಾರಾಷ್ಟ್ರ,ಒರಿಸ್ಸಾ ರಾಜ್ಯಗಳ ಅನುಭವದಿಂದ ಕರ್ನಾಟಕ ಪಾಠ ಕಲಿಯಬೇಕು. ಅದೇ ಸಮಯದಲ್ಲಿ ಕರ್ನಾಟಕದಲ್ಲಿಯೇ ಕೊಜೆಂಟ್ರಿಕ್ಸ್ 4300 ಕೋಟಿ ಅಂದಾಜು ವೆಚ್ಚವನ್ನು ಸಾರ್ವಜನಿಕ ಪ್ರತಿರೋಧದ ನಡುವೆ 3200 ಕೋಟಿ ರೂಗೆ ಇಳಿಸಿದ್ದು, ನಂತರ ಹೇಳ ಹೆಸರಿಲ್ಲದಂತೆ ನಾಪತ್ತೆಯಾಗಿರುವುದು, ಆಲಮಟ್ಟಿ ಜಲವಿದ್ಯುತ್ ಯೋಜನೆಯನ್ನು ವಿದೇಶ ಕಂಪನಿಗಳಿಗೆ ನಿರಾಕರಿಸಿ ಕೆಪಿಟಿಸಿಎಲ್‌ಗೆ ಒಪ್ಪಿಸಬೇಕಾದದ್ದು ಹಾಗೆಯೇ ಬಳ್ಳಾರಿಯ ನಿಯೋಜನೆಯ ಅನುಭವ ನಮಗೆ ಪಾಠ ಕಲಿಸಬೇಕು.

ಖಾಸಗೀ ಬಂಡವಾಳಗಾರರು ತಯಾರಿಸುವ ದುಬಾರಿ ವಿದ್ಯುತ್ತನ್ನು ಕೊಳ್ಳುವ ಸಲುವಾಗಿ ವಿದ್ಯುತ್ ದರ ಏರಿಸುವುದು, ಕೆಪಿಟಿಸಿಎಲ್ ಅನ್ನು ವಿಭಜಿಸುವುದು ಮೊದಲಾದ ಪ್ರಕ್ರಿಯೆ ನಡೆದಿದೆ. ರಾಜ್ಯಸರ್ಕಾರ ವಿದ್ಯುತ್ ತಯಾರಿಕೆಗೆ 92ರಿಂದ 98ರವರೆಗೆ ಸರಿಯಾದ ಪ್ರಮಾಣದಲ್ಲಿ ಹಣ ಹೂಡದಿರುವುದು ಕೂಡ ಖಾಸಗೀ ವಿದ್ಯುತ್ ಉತ್ಪಾದಕರ ಜೊತೆ ಮಾಡಿಕೊಂಡ ಹಲವು ಎಂ.ಓ.ಯುಗಳ ಹಿನ್ನೆಲೆಯಲ್ಲಿ, ಇದೇ ಇಂದಿನ ವಿದ್ಯುತ್ ಕ್ಷಾಮಕ್ಕೆ ಮುಖ್ಯ ಕಾರಣ.

ಒಂದು ಪಾಯಿಂಟ್ ವಿದ್ಯುತ್ ದ್ವೀಪಕ್ಕೆ 18 ಯೂನಿಟ್‌ಗಾಗಿ ಇರುವ ಈ ಸಮಾಜ ಕಲ್ಯಾಣ ಕಾರ್ಯಕ್ರಮಕ್ಕೆ 10 ರೂನಿಂದ 30 ರೂಗೆ ಏರಿಸುವುದು ಇಂದು ಈ ಕಲ್ಯಾಣಕಾರಿ ಉದ್ದೇಶವನ್ನು ಕೈಬಿಟ್ಟಂತಾಗಿದೆ. ಅಷ್ಟೇ ಅಲ್ಲ ಎಲ್‌ಟಿ1(f)ಯ ಮೊದಲ ಸ್ಲಾಬ್‌ಗಿಂತ ಹೆಚ್ಚು ದರವನ್ನು ಈ ದುರ್ಬಲರ ಮೇಲೆ ವಿಧಿಸಿದಂತಾಗಿದೆ. ಈ ಏರಿಕೆಯನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳಬೇಕು.

● ಗೃಹಬಳಕೆ

ಅತ್ಯಂತ ತೀವ್ರ ದರ ಏರಿಕೆಗೆ ತುತ್ತಾಗಿರುವ ವಿಭಾಗಗಳಲ್ಲಿ ಇದೂ ಒಂದು. ಆಯೋಗವು ತನ್ನ ಟ್ಯಾರಿಫ್ ಆರ್ಡರ್‌ನಲ್ಲಿ ರೂಪಿಸಿರುವ ಲೈಫ್ ಲೈನ್ ಪರಿಕಲ್ಪನೆಯನ್ನು ಕೈಬಿಟ್ಟಂತಾಗಿದೆ. ಕೇವಲ 30 ಯೂನಿಟ್‌ಗಳಿಗಿಂತ ಕಡಿಮೆ ವಿದ್ಯುತ್ ಬಳಸುವ ಬಳಕೆದಾರರು ವಿದ್ಯುತ್ ಬಳಕೆಯಿಂದಲೇ ಹಿಂದೆಗೆಯುವಂತಹ ಪರಿಸ್ಥಿತಿ ಇದೆ.

ಗೃಹಬಳಕೆದಾರರ ಒಂದು ದೊಡ್ಡ ವಿಭಾಗ ಇಂದಿನ ದರಗಳನ್ನು ಕೊಡಲಾಗದ ಸ್ಥಿತಿಯಲ್ಲಿದ್ದಾರೆ. ಅದರಿಂದಾಗಿ ಕರ್ನಾಟಕದಲ್ಲಿ ವಿದ್ಯುದೀಕರಣಗೊಂಡ ಮನೆಗಳ ಸಂಖ್ಯೆ ಕೇವಲ ಶೇ. 52.47. ಗ್ರಾಮಾಂತರ ಭಾಗಗಳಲ್ಲಿ ಕೇವಲ 41.75 ನಗರಗಳಲ್ಲಿ ಕೂಡ ಶೇ 76.27. ಬೆಂಗಳೂರು ನಗರದಲ್ಲಿಯೂ ಶೇ 20 ಭಾಗ ವಿದ್ಯುತ್ ಬಳಸಲಾಗದ ಜನ ಇದ್ದಾರೆ.

ಈ ಜಿಲ್ಲೆಗಳ ಗೃಹಬಳಕೆ ಪ್ರಮಾಣ ಶೋಚನೀಯ ಸ್ಥಿತಿಯಲ್ಲಿದೆ.

ಜಿಲ್ಲೆ	ಒಟ್ಟು	ಗ್ರಾಮೀಣ	ನಗರ
ರಾಯಚೂರು	32.5	26.47	55.48
ಗುಲ್ಬರ್ಗಾ	35.91	25.85	70.64
ಕೊಡಗು	36.28	29.08	76.04
ಬೀದರ	39.32	33.65	71.04
ಬಳ್ಳಾರಿ	41.23	32.69	60.90
ಬಿಜಾಪುರ	41.19	32.96	68.70

ಆದುದರಿಂದ ಗೃಹ ಬಳಕೆದಾರರಿಗೆ ಸೂಚಿಸಿದ ಏರಿಕೆಯನ್ನು ಹಿಂತೆಗೆಯಬೇಕು.

● ಎ.ಇ.ಎಚ್, ವಾಣಿಜ್ಯ ಬಳಕೆ

ಇವುಗಳಲ್ಲಿ ಸ್ಲಾಬ್‌ಗಳನ್ನು ಕಡಿಮೆ ಮಾಡಿರುವುದು ಈ ವರ್ಗಗಳಲ್ಲಿರುವ ಕಡಿಮೆ ಆದಾಯದವರಿಗೆ ಹಾನಿಕಾರಕವಾಗಿದೆ. ಹಿಂದಿನ ವರ್ಷದ ಸ್ಲಾಬ್‌ಗಳ ವರ್ಗೀಕರಣವನ್ನು ಉಳಿಸಿಕೊಳ್ಳಬೇಕು. ಕೆಳ ಸ್ಲಾಬ್‌ಗಳಿಗೆ ಹಿಂದಿನ

ಈಗಾಗಲೇ ಬರಗಾಲಕ್ಕೆ ಸಂಬಂಧಿಸಿ ಹೇಳಿದಂತೆ ಬರಗಾಲದ ಪರಿಣಾಮಕ್ಕೆ ಒಣ ಬೇಸಾಯ ಪ್ರದೇಶಗಳು ತೀವ್ರವಾಗಿ ತುತ್ತಾಗಿರುವ ಸಂದರ್ಭದಲ್ಲಿ ಹಾಗೂ ಅಂತ ಅಂತರ್ಜಲದ ಮಟ್ಟ ಕುಸಿದು ನೀರಾವರಿ ಪ್ರದೇಶ ಕುಗ್ಗಿರುವ ಸಂದರ್ಭದಲ್ಲಿ ಕೃಷಿ ಉತ್ಪಾದನಾ ವೆಚ್ಚ ಬಹಳವಾಗಿ ಏರಿದೆ. ಅದೇ ಸಮಯದಲ್ಲಿ ಜಾಗತೀಕರಣ ನೀತಿಗಳಿಂದಾಗಿ ಉತ್ಪನ್ನಗಳ ಬೆಲೆ ಕುಸಿದು ಮತ್ತಷ್ಟು ನಷ್ಟಕ್ಕೆ ಗುರಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಕೃಷಿ ಪಂಪ್‌ಸೆಟ್‌ಗಳ ದರ ಏರಿಕೆಯನ್ನು ತಡೆಹಿಡಿಯಬೇಕು. ಅದೇ ಸಮಯದಲ್ಲಿ ಆದಾಯ ತೆರಿಗೆಯನ್ನು ವೃತ್ತಿತೆರಿಗೆಯ ಜೊತೆ ತಳುಕಿ ಹಾಕಿರುವುದು ಅಪಾಯಕಾರಿಯಾಗಿದೆ. ಒಬ್ಬ ರೈತನ ಮನೆಯಲಿ ಸರ್ಕಾರದ, ಸಾರ್ವಜನಿಕ ಉದ್ಯಮಗಳ ಉದ್ಯೋಗಿಗಳಿದ್ದರೆ ಅವರು ಒಂದು ಹೆಚ್‌ಪಿ ಗೆ 300 ಇದ್ದ ಒಂದೇ ಬಾರಿಗೆ 2400 ರೂ. ನೀಡುವ 8 ಪಟ್ಟು ದರಏರಿಕೆಗೆ ಒಳಪಡಿಸುವುದು ತೀವ್ರ ಅನ್ಯಾಯ. ಅನೇಕ ದುರ್ಬಲ ವರ್ಗಗಳ ಮನೆಯಲ್ಲಿ ಕೆಳದರ್ಜೆಯ ನೌಕರರಿದ್ದರೆ, ಅವರ ಮೇಲೂ ಹಾನಿಕರ ಪರಿಣಾಮ ಬೀರುತ್ತದೆ ಎಂಬುದನ್ನು ಗಮನಿಸಿ ಈ ವಿಭಜನೆಯ ವಿಧಾನವನ್ನು ಹಿಂತೆಗೆಯಬೇಕು.

2000 ದ ಟ್ಯಾರಿಫ್ ಆರ್ಡರ್‌ನಲ್ಲಿ ಕೃಷಿ ಪಂಪ್‌ಸೆಟ್ ರೈತರ ಆರ್ಥಿಕ ಸ್ಥಿತಿಯನ್ನು ಅಧ್ಯಯನ ಮಾಡಬೇಕು ಎಂದು ಆಯೋಗ ನೀಡಿದ ನಿರ್ದೇಶನವನ್ನು ಕೆಪಿಟಿಸಿಎಲ್ ಇನ್ನೂ ಕಾರ್ಯಗತ ಮಾಡಿಲ್ಲ. ಈ ಅಧ್ಯಯನದ ನಂತರವೇ ಪಂಪ್‌ಸೆಟ್ ಬಳಕೆದಾರರ ನಡುವೆ ವೈಜ್ಞಾನಿಕ ವರ್ಗೀಕರಣ ಮಾಡಬೇಕು.

● ಸಾಮಾಜಿಕ ದುಷ್ಪರಿಣಾಮಗಳು

ಈ ಮೇಲೆ ವಿವರಿಸಿದಂತೆ ಕೆಪಿಟಿಸಿಎಲ್ ಸಲ್ಲಿಸಿರುವ ವಿದ್ಯುತ್ ದರ ಏರಿಕೆ ಅರ್ಜಿಯಲ್ಲಿ ದುರ್ಬಲವರ್ಗಗಳ, ಕೆಳ ವರ್ಗಗಳ ವಿದ್ಯುತ್ ಬಳಕೆಯ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತದೆ. ಅದೇ ಸಮಯದಲ್ಲಿ ಮೇಲು ವರ್ಗಗಳಿಗೆ ಹೆಚ್ಚು ವಿನಾಯತಿಗಳು, ಕಡಿಮೆ ದರ ಏರಿಕೆ ಇಡೀ ಸಾಮಾಜಿಕ ಪರಿಸರವನ್ನು ಮತ್ತಷ್ಟು ವಿಷಮಗೊಳಿಸುತ್ತದೆ. ಈ ರೀತಿಯ ವಿದ್ಯುತ್ ದರಗಳ ಏರಿಕೆಗೆ ಕ.ವಿ.ನಿ ಆಯೋಗ ಅಂಗೀಕಾರ ನೀಡಿದರೆ ಸಾಮಾಜಿಕ ಕ್ಷೋಭೆಗಳಿಗೆ ಎಡೆ ಮಾಡಿಕೊಡುವ ಸಂಭವ ಇದೆ. ಆದ್ದರಿಂದ ಆಯೋಗ ಈ ರೀತಿಯ ಏರಿಕೆಯ ಪ್ರಸ್ತಾವವನ್ನು ಮಾರ್ಪಡಿಸಿ ಸಾಮಾಜಿಕ ನ್ಯಾಯಕ್ಕೆ ಒತ್ತು ನೀಡಿದ

ವೆನೆಜುವೆಲಾದ ಮಿಲಿಟರಿ ಕ್ಷಿಪ್ರಕ್ರಾಂತಿಗೆ ಕ್ಷಿಪ್ರ ಸೋಲು?

ವೆನೆಜುವಾಲಾದ ಚುನಾಯಿತ ಅಧ್ಯಕ್ಷ ಹ್ಯುಗೋ ಚವೇಝುರನ್ನ ಅಮೆರಿಕಾದ ಕುಮ್ಮಕ್ಕಿನ ಮೇಲೆ ಅಲ್ಲಿನ ಸೈನ್ಯದ ಕೆಲವು ಹಿರಿಯ ಅಧಿಕಾರಿಗಳು ಪದಚ್ಯುತಿಗೊಳಿಸಿ ಬಂಧಿಸಿದರು. ಆದರೆ ಸೈನ್ಯದ್ದೇ ಮತ್ತು ಜನತೆಯ ಪ್ರಚಂಡ ಬೆಂಬಲದಿಂದ ಮಿಲಿಟರಿ ಕ್ಷಿಪ್ರ ಕ್ರಾಂತಿಗೆ ಅಷ್ಟೇ ಕ್ಷಿಪ್ರವಾಗಿ (ಕೇವಲ ಎರಡೇ ದಿನಗಳಲ್ಲಿ) ಸೋಲೂ ಆಯಿತು. ಎಲ್ಲಾ ದೇಶಗಳು 'ಮಿಲಿಟರಿ ಕ್ಷಿಪ್ರಕ್ರಾಂತಿಯನ್ನು ಖಂಡಿಸಿದರೆ, ಅಮೇರಿಕ ಮಾತ್ರ ಇದನ್ನು ಸ್ವಾಗತಿಸಿತು. ಈಗ ಅಮೆರಿಕಕ್ಕೆ ಕ್ಷಿಪ್ರ ಮುಖಭಂಗವಾಗಿದೆ. ಇದು ಅಮೆರಿಕನ್ ಸಾಮ್ರಾಜ್ಯಶಾಹಿಯ ಹಿರಿಯಣ್ಣನ ನೀತಿಗಳಿಗೆ ವಿರೋಧಿಯಾದ ಸ್ವತಂತ್ರ ಪ್ರಗತಿಪರ ಜನಶಕ್ತಿಗೆ ವಿಜಯವೇ? ಅಥವಾ ಇದು 1973ರಲ್ಲಿ ಚಿಲಿಯ ಕುಖ್ಯಾತ ಜನರಲ್ ಪಿನೋಶೆ ಮಾದರಿಯ ಮಿಲಿಟರಿ ಸರ್ವಾಧಿಕಾರ ಡ್ರೆಸ್ ರಿಹರ್ಸಲ್? ಇದರ ಉತ್ತರಕ್ಕೆ ಕಾದು ನೋಡಬೇಕು.

ನಡೆದದ್ದೇನು?

ವೆನಿಜುವಾಲಾದ ಜನಪ್ರಿಯ ಅಧ್ಯಕ್ಷ ಹ್ಯುಗೋ ಚವೇಝುರನ್ನು ಸೈನ್ಯದ ಕೆಲವು ಅಧಿಕಾರಿಗಳು ಅಧಿಕಾರದಿಂದ ಉರುಳಿಸಲು ನಡೆಸಿದ ಪ್ರಯತ್ನ ವಿಫಲವಾಗಿದೆ. ಅಧ್ಯಕ್ಷ ಚವೇಝುರನ್ನು ಬಾಧಿಸಿದ ಮಧ್ಯಂತರ ಸರ್ಕಾರ ಎರಡೇ ದಿನದಲ್ಲಿ ಜನತೆಯ ಮತ್ತು ಸೈನ್ಯದ ದೊಡ್ಡ ವಿಭಾಗದ ಕಟು ವಿರೋಧದಿಂದ ಕುಸಿದುಬಿತ್ತು. ವೆಸಿಜುವೆಲಾದ ಹಿರಿಯ ಉದ್ಯಮಿಗಳ ಸಂಘಟನೆಯ ಮುಖ್ಯಸ್ಥ ಪೆಟ್ರೋ ಎಸ್ಟಾಂಗಾ 'ಎರಡು ದಿನಗಳ' ಅಧ್ಯಕ್ಷನಾಗಿದ್ದವ, ದೇಶದ ಚರಿತ್ರೆಯಲ್ಲೇ ಅತ್ಯಂತ ಬಾರಿ ಬಹುಮತದಿಂದ ಗೆದ್ದ ಅಧ್ಯಕ್ಷ ಚವೇಝುರನ್ನು ಈ ರೀತಿ ಕಾನೂನುಬಾಹಿರವಾಗಿ ಗದ್ದುಗೆಯಿಂದ ಇಳಿಸಿದ್ದನ್ನು ಲ್ಯಾಟಿನ್ ಅಮೆರಿಕಾದ ದೇಶಗಳು ಮಾತ್ರವಲ್ಲ, ಅಮೆರಿಕಾ ಬಿಟ್ಟು ಎಲ್ಲಾ ದೇಶಗಳೂ ಖಂಡಿಸಿದ್ದವು. ಅಮೇರಿಕ ಈ ಮಿಲಿಟರಿ ದಂಗೆಯನ್ನು ಖಂಡಿಸಲಿಲ್ಲ ಮಾತ್ರವಲ್ಲ, ಸ್ವಾಗತಿಸಿತು! ಅದೂ' ವೆನಿಜುವೆಲಾದ ಪ್ರಜಾಸತ್ತೆಗೆ ಸರ್ವಾಧಿಕಾರ' ದಿಂದ ಇದ್ದ ಅಪಾಯ ತೊಲಗಿತು' ಅಂತ!

ದಂಗೆಗೆ ನೆಪ!

ಅಧ್ಯಕ್ಷ ಚವೇಝುರನ್ನು ಪದಚ್ಯುತಗೊಳಿಸಿದ ಈ ಮಿಲಿಟರಿ ದಂಗೆಗೆ 'ಸಿತ' ಸರ್ಕಾರದ ವಿರುದ್ಧ ನಡೆದ ಒಂದು ಪ್ರತಿಭಟನೆಯ ಪ್ರದರ್ಶನದ ಮೇಲೆ ಗೋಳಿಬಾರು, ಚವೇಝು ಸರ್ಕಾರ ಸಾರ್ವಜನಿಕ ಕ್ಷೇತ್ರದ ತೈಲ ಕಂಪನಿಯ ಡೈರೆಕ್ಟರುಗಳಲ್ಲಿ ಕೆಲವರನ್ನು ಬದಲಾಯಿಸುವುದರ ವಿರುದ್ಧ ಈ ಪ್ರತಿಭಟನೆ ಯಾಗಿತ್ತು. ಅಮೆರಿಕಾದ ದಿಗ್ಬಂಧನ ಧಿಕ್ಕರಿಸಿ ಕ್ಯೂಬಾಕ್ಕೆ ತೈಲ ಸರಬರಾಜು ಮಾಡುವ ಸರ್ಕಾರದ ನಿರ್ಧಾರವನ್ನೂ ಈ ಕೆಲ ಡೈರೆಕ್ಟರುಗಳು ಧಿಕ್ಕರಿಸಿ, ಜಾರಿ ಮಾಡುವುದಿಲ್ಲ ಎಂದು ಅಧ್ಯಕ್ಷರನ್ನು ಬಹಿರಂಗವಾಗಿ ಟೀಕಿಸಿದ್ದರು. ಈ ಪ್ರತಿಭಟನೆಯಲ್ಲಿ ವೆನಿಜುವೆಲಾದ ಉದ್ಯಮಿಗಳ ಸಂಘಟನೆ ಮತ್ತು ತೈಲ ಉದ್ಯಮದ ಮ್ಯಾನೇಜ್‌ಮೆಂಟ್ ಪರ ಯೂನಿಯನ್‌ವೊಂದು ಭಾಗವಹಿಸಿತ್ತು. ವೆನೆಜುವೆಲಾದ ರಾಜಧಾನಿ ಕಾರಕಾಸ್‌ನ ಶ್ರೀಮಂತ ಪ್ರದೇಶಗಳಲ್ಲಿ ಸಣ್ಣ ಪ್ರಮಾಣದಲ್ಲಿ ಆರಂಭವಾದ ಮೆರವಣಿಗೆ ಅಧ್ಯಕ್ಷೀಯ ಭವನದ ಕಡೆಗೆ ಸಾಗುತ್ತಿದ್ದಂತೆ ಬೆಳೆಯುತ್ತಾ ಹೆಚ್ಚು ಹಿಂಸಾತ್ಮಕ ವಾಗುತ್ತಾ ಹೋಯಿತು. ಈ ಪ್ರತಿಭಟನೆಗೆ ಪ್ರತಿಯಾಗಿ ಅಧ್ಯಕ್ಷರ ಬೆಂಬಲಿಗರ ದೊಡ್ಡ ಗುಂಪೊಂದುಪ್ರತಿಭಟನೆ ನಡೆಸಿತು. ಇವೆರಡು ಗುಂಪುಗಳ ನಡುವಿನ ಗಲಭೆ ಮತ್ತು ಗೋಳಿಬಾರು ಸಾವು-ನೋವು ಕೆಲವು ಮಿಲಿಟರಿ ಅಧಿಕಾರಿಗಳಿಗೆ ಸರ್ಕಾರದ ವಿರುದ್ಧ ದಂಗೆಯೆದ್ದು ಅಧ್ಯಕ್ಷರನ್ನು ಬಂಧಿಸಲು 'ನೆಪ' ಸಾಕಾಯ್ತು. ಜನತೆಯ ಮೇಲೆ ಗೋಳಿಬಾರು ಮಾಡಿದ ಸರ್ಕಾರದ ಬಗ್ಗ ಮಿಲಿಟರಿ ದಂಗೆಕೋರರು ಭಾರಿ 'ಕೋಪ' ವ್ಯಕ್ತಪಡಿಸಿದರು ದಂಗೆಗೆ ಇದೇ ಕಾರಣ ಎಂದರು. ಆದರೆ ದಂಗೆಯ ದಿನದ ಘಟನೆಗಳು ಈ 'ಟೆಂಪರರಿ ಸರ್ಕಾರ'ದ ನೇಕಾರರು ಹೇಳಿದಕ್ಕೆ ತಾಳೆ ಆಗುತ್ತಿರಲಿಲ್ಲ. ಗಲಭೆಗಳಲ್ಲಿ ತೀವ್ರವಾಗಿ ಗಾಯಗೊಂಡವರು, ಮಡಿದವರು ಅಧ್ಯಕ್ಷಿಯ ಸದನ ಕಾಯುತ್ತಿದ್ದ ಮಿಲಿಟರಿ ತುಕಡಿಯ ಸೈನಿಕರು, ಪೋಲೀಸರು ಮತ್ತು ಅಧ್ಯಕ್ಷರ ಬೆಂಬಲಾರ್ಥ ಪ್ರದರ್ಶನ ನಡೆಸಿದ ಬಡಜನರೇ, ಅಧ್ಯಕ್ಷರನ್ನು ವಿರೋಧಿಸಿದ ಗುಂಪೇ ಹಿಂಸಾಚಾರದಲ್ಲಿ ತೊಡಗಿತು. ಅಧ್ಯಕ್ಷೀಯ ಸದನದ ಪಡೆಗಳು ಅವರ ಆಕ್ರಮಣಕ್ಕೆ ಉತ್ತರ ಕೊಟ್ಟವಷ್ಟೆ! ಉಪಾಧ್ಯಕ್ಷ, ಡ್ರೈವರ್ ಸಹ ಮಡಿದಿದ್ದ.

ಟೆಂಪರರಿ ಸರ್ಕಾರದ ಸ್ವರೂಪ

ಅಧ್ಯಕ್ಷ ಚವೇಝುರನ್ನು ಬಂಧಿಸಿದಾಗ, ಅದನ್ನು ಪ್ರತಿಭಟಿಸಿ ಇನ್ನಷ್ಟು ದೊಡ್ಡ ಮೆರವಣಿಗೆ


ಹ್ಯುಗೋ ಚವೇಝ್

ಅಧ್ಯಕ್ಷೀಯ ಸದನದತ್ತ ನಡೆಯಿತು ಜನತೆಯ ಮೇಲೆ 'ಗೋಲಿಬಾರಿ'ಗೆ 'ಕೋಪ' ವ್ಯಕ್ತಪಡಿಸಿದ್ದ 'ಟೆಂಪರರಿ ಸರ್ಕಾರ'ದ ಮಿಲಿಟರಿ ನಾಯಕರು ಈಗ ಮಾತ್ರ ಅತ್ಯಂತ ಬರ್ಬರ ರೀತಿಯಲ್ಲಿ ಪ್ರತಿಭಟನೆಯನ್ನು ಹತ್ತಿಕ್ಕಲು ಪ್ರಯತ್ನಿಸಿದರು. ದಂಗೆಗೆ 'ನೆಪ'ವಾದ ಸಾವು- ನೋವಿಗಿಂತ ಇದು ಹೆಚ್ಚಾಗಿತ್ತು. ಆದರೂ ಪ್ರತಿಭಟನೆ ನಿಲ್ಲಲೇ ಇಲ್ಲ. ಒಂದು ಕಡೆ ಜನತೆಯ ಪ್ರತಿಭಟನೆ ನಿಲ್ಲದಿದ್ದರೆ,

ಮಿಲಿಟರಿ ದಂಗೆಗೆ ಅಮೆರಿಕಾದ ಆಶೀರ್ವಾದ?

ಇನ್ನೊಂದು ಕಡೆ ಮಿಲಿಟರಿ ತುಕಡಿಗಳು 'ಟೆಂಪರರಿ ಸರ್ಕಾರ'ದ ಆಜ್ಞೆಯನ್ನು ಪಾಲಿಸಲು ನಿರಾಕರಿಸಿದವು. ಎರಡೇ ದಿನಗಳೊಳಗೆ ಅಧ್ಯಕ್ಷ ಚವೇಝು ಜನತೆಯ ಭಾರಿ ಸ್ವಾಗತದೊಂದಿಗೆ ಅಧ್ಯಕ್ಷೀಯ ಸದನಕ್ಕೆ ಮರಳಿದರು.

ಆದರೆ ಅದರೊಳಗೆ ನಲ್ವತ್ತೆಂಟು ಗಂಟೆಗಳಲ್ಲೇ ತನ್ನ 'ಸ್ವರೂಪ' ಪ್ರದರ್ಶಿಸಿತು. ಟೆಂಪರರಿ ಸರ್ಕಾರ. 1998ರಿಂದ ಚವೇಝು ಸರ್ಕಾರ ಜಾರಿಗೆ ತಂದಿದ್ದ ಎಲ್ಲಾ ಜನಪರ ಕ್ರಮಗಳನ್ನು ರದ್ದು ಮಾಡಿತು. ಸರ್ಕಾರ ತಂದಿದ್ದ ಭೂಸುಧಾರಣೆ, ಶಿಕ್ಷಣ, ವೈದ್ಯಕೀಯ ಸೇವೆ ಮತ್ತಿತರ ಸಮಾಜಿಕ ಕಲ್ಯಾಣ ಕ್ರಮಗಳನ್ನು ಒಂದೇ ಏಟಿನಲ್ಲಿ ರದ್ದು ಮಾಡಿತು. ಅಧ್ಯಕ್ಷ ಚವೇಝು ಅಮಾನತುಗೊಳಿಸಿದ ತೈಲ ಕಂಪನಿಯ ಡೈರೆಕ್ಟರುಗಳನ್ನು ಪುನಃ ನೇಮಿಸಿತು. ದೇಸದ ಚುನಾಯಿತ ಪಾರ್ಲಿಮೆಂಟನ್ನು ವಿಸರ್ಜಿಸಿತು. ಸುಪ್ರೀಮ್ ಕೋರ್ಟ್ ಮತ್ತು ಸಂವಿಧಾನವನ್ನೇ ರದ್ದು ಮಾಡಿತು. ಟೆಂಪರರಿ ಸರ್ಕಾರದ ಆಜ್ಞೆ ಧಿಕ್ಕರಿಸುವ ಎಲ್ಲಾ ರಾಜ್ಯದ ಗವರ್ನರುಗಳು, ನಗರಗಳ ಮೇಯರ್‌ಗಳನ್ನು ವಜಾ ಮಾಡುವುದಾಗಿ ಟೆಂಪರರಿ ಅಧ್ಯಕ್ಷ ಘೋಷಿಸಿದರು.

ಈ ಮಿಲಿಟರಿ ದಂಗೆ 70ರ ದಶಕದಿಂದಲೂ ಕಂಡು ಬಂದ 'ಮೇಡ್ ಇನ್ ಯುಎಸ್‌ಎ' ಮಿಲಿಟರಿ ದಂಗೆಗಳ ಮಾಡೆಲ್‌ನಲ್ಲೇ ಇತ್ತು. ದಂಗೆಯ ಮೊದಲು, ದಂಗೆಯ ದಿನಗಳಲ್ಲಿ ಮತ್ತು ಆ ಮೇಲೆ ಅಮೆರಿಕಾದ ಸರ್ಕಾರ ಮತ್ತು ಅದರ ಬಾಲಬಡುಕ ಸುದ್ದಿ ಮಾಧ್ಯಮಗಳ ಪ್ರತಿಕ್ರಿಯೆ ಯಿಂದ ಇದು ಸ್ಪಷ್ಟವಾಗುತ್ತದೆ. (ವಿವರಗಳಿಗೆ 'ಮೇಡ್ ಇನ್ ಯುಎಸ್‌ಎ' ಮಿಲಿಟರಿ ದಂಗೆ" ಬಾಕ್ಸ್ ನೋಡಿ).ಹಲವು ರಾಜಕೀಯ ವೀಕ್ಷಕರು ಈ ಅಮೆರಿಕಾದಿಂದ ರಫ್ತಾಗುವ ದಂಗೆ ಬಗ್ಗೆ ಭವಿಷ್ಯ ನುಡಿದಿದ್ದರು. ಇದಕ್ಕೆ ಕಾರಣ ವೆನೆಜುವೆಲಾದ ಜನಪ್ರಿಯ ಅಧ್ಯಕ್ಷ ಚವೇಝು ಅಮೆರಿಕಾದ ವಿರುದ್ಧ ಎಸಗುತ್ತಿದ್ದ 'ಅಪರಾಧಗಳ ಪಟ್ಟಿ ಕಾರಣ. [illegible] ನೋಡಿ) ದೇಶದ ಬಹುಸಂಖ್ಯಾತ ಜನತೆಯ ಮತ್ತು ದೇಶದ ಹಿತಾಸಕ್ತಿಗಳಿಗೆ ಅನುಗುಣವಾಗಿ ರಾಷ್ಟ್ರೀಯ ನೀತಿ ರೂಪಿಸುವುದು, ಮತ್ತು ಅಮೆರಿಕಾದ ಆರ್ಥಿಕ ಮಿಲಿಟರಿ ಹಿತಾಸಕ್ತಿಗೆ' ಧಕ್ಕೆ ಆಗುವಂತೆ ಮಾಡುವುದು ಅಮೆರಿಕಾದ ಆಳುವವರ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧಗಳು! ಇತ್ತೀಚಿನ ಅಮೆರಿಕನ್ ಸರ್ಕಾರದ ಆಳುವವರ ಉದ್ಘಾಟನೆ ಗೊತ್ತಿದ್ದವರಿಗೂ ವೆನಿಜುವೆಲಾದ ಮಿಲಿಟರಿ ದಂಗೆಗೆ ಅದರ ಪ್ರತಿಕ್ರಿಯೆ ದಂಗು ಬಡಿಸಿತ್ತು.

ಮುಂದೇನು?

'ಮೇಡ್ ಇನ್ ಯು.ಎಸ್.ಎ' ಮಿಲಿಟರಿ ದಂಗೆ ವಿಫಲವಾಗಿದೆ ಎಂದು ಘಂಟಾಘೋಷವಾಗಿ ಹೇಳಿಕೊಳ್ಳಲು ಬಹುಶಃ ಇನ್ನೂ ಸಾಧ್ಯವಿಲ್ಲ.

ಈ ಸುತ್ತಿನ ಕದನ ಜನ ಗೆದ್ದಿದ್ದರೂ, ಅಮೆರಿಕದಿಂದ ಬೆಂಬಲಿತ ವೆನೆಜುಲಾ ಆಳುವವರ್ಗ ಸೋತಿದೆ ಎಂದು ಹೇಳಲು ಸಾಧ್ಯವಿಲ್ಲ. ಲ್ಯಾಟಿನ್ ಅಮೆರಿಕದಲ್ಲಿ ಮಿಲಿಟರಿ ಕ್ಷಿಪ್ರಕ್ರಾಂತಿಗಳ ಚರಿತ್ರೆ ಈ ಬಗ್ಗೆ ಎಚ್ಚರಿಕೆ ಇರಬೇಕು ಎನ್ನುತ್ತದೆ. 1973 ರಲ್ಲಿ ಅಧಿಕಾರಕ್ಕೆ ಬಂದು ಕುಖ್ಯಾತ ಮಿಲಿಟರಿ ಸರ್ವಾಧಿಕಾರಿ ಪಿನೋಶಿಯ 'ಸಫಲತೆ'ಯ ಮೊದಲು ಒಂದು ಕ್ಷಿಪ್ರ ದಂಗೆ ಇದೇ ರೀತಿ ವಿಫಲವಾಗಿತ್ತು. ಅದರಿಂದ ಮಿಲಿಟರಿ ಯಾವ ತುಕಡಿಗಳನ್ನು ಅಧಿಕಾರಿಗಳನ್ನು ನಂಬ ಬಹುದು ಮತ್ತು ಜನಸಂಘಟನೆಗಳ ಬಲಾ ಬಲವೇನು ಎಂದು ತಿಳಿದು ಎರಡನೇ ಸುತ್ತಿನಲ್ಲಿ ವ್ಯವಸ್ಥಿತವಾಗಿ ಗೆದ್ದಿದ್ದರು.

ಇದಲ್ಲದೆ ವೆನೆಜುಲಾದ ಜನಸಂಘಟನೆಗಳ ಒಟ್ಟು ಬಲಾಬಲ ಅಮೆರಿಕ ಮತ್ತು ಆಳುವವರ ಹುನ್ನಾರಗಳಿಗೆ ವ್ಯವಸ್ಥಿತ ಪ್ರತಿರೋಧ ಒಡ್ಡುವ ಶಕ್ತಿ ಇದೆ ಎಂಬ ಭರವಸೆ ನೀಡುವುದಿಲ್ಲ. ಅಧ್ಯಕ್ಷ ಚವೇಝ್ ಹಲವು ಪ್ರಗತಿಪರ ಕ್ರಮಗಳನ್ನು ಕೈಗೊಂಡು ಪ್ರಚಂಡ ಜನಪ್ರಿಯತೆ ಗಳಿಸಿದ್ದರೂ ಆತ ಸಂಘಟಿತ ರಾಜಕೀಯ ಶಕ್ತಿ ನೇತಾರನಲ್ಲ. ಜನತೆಯೂ ಈ ಮೊದಲ ಸುತ್ತಿನ ಹೋರಾಟದಿಂದ ಪಾಠ ಕಲಿತು ಎರಡನೇ ಸುತ್ತಿಗೆ ತಯಾರಾಗಲೀ ಎಂದು ಆಶಿಸಬೇಕಷ್ಟೇ!

- [illegible]

"ಮೇಡ್ ಇನ್ ಯುಎಸ್‌ಎ ಮಿಲಿಟರಿ ದಂಗೆ"

ನವಂಬರ್‌ನಿಂದಲೇ ಈ ದಂಗೆಗೆ ವಾಷಿಂಗ್‌ಟನ್‌ನಲ್ಲಿ ಸಿದ್ಧತೆ ಆರಂಭವಾಗಿತ್ತು. ವಿದೇಶ, ರಕ್ಷಣಾ ಸಚಿವ ಖಾತೆಗಳೊಳಗೆ 'ವೆನೆಜುವೆಲಾದ ಸಮಸ್ಯೆ' ಬಗೆಹರಿಸುವುದು ಎಂಬ ಬಗ್ಗೆ ಚರ್ಚೆ ಆಗಿತ್ತು. ವೆನೆಜುವೆಲಾವನ್ನು 'ರಾಜತಾಂತ್ರಿಕ ದಿಗ್ಬಂಧನ'ಕ್ಕೆ ಒಳಪಡಿಸಬೇಕೆಂದು ನಿರ್ಧಾರವೂ ಆಗಿತ್ತು.

ಐಎಂಎಫ್, ಅಮೆರಿಕನ್ ಬ್ಯಾಂಕ್‌ಗಳು, ಮತ್ತು ಹಣಕಾಸು ಸಂಸ್ಥೆಗಳು ವೆನೆಜುವೆಲಾದ ಆರ್ಥಿಕ ದುಸ್ಥಿತಿಗೆ ಹೋಗುತ್ತಿದೆ. ಹೊಸ ಮಧ್ಯಂತರ ಸರ್ಕಾರ'ದ ಜತೆಮಾತ್ರ ಮುಂದಿನ ಹಣಕಾಸು ವಿಷಯಗಳ ಬಗ್ಗೆ ಮಾತನಾಡಲು ಸಾಧ್ಯ ಎಂದು ಹೇಳುತ್ತಾ ಚವೇಝು ಸರ್ಕಾರವನ್ನು ಕಿತ್ತುಹಾಕಲು ಆಹ್ವಾನ ಕೊಡುತ್ತಿತ್ತು.

ಕಾರ್‌ಕಾಸ್‌ನ ಪೆತಿಯರ್ ಮತ್ತು ಹಲವು ಹಿರಿಯ ಮಿಲಿಟರಿ ಅಧಿಕಾರಿಗಳ (ಆಮೇಲೆ ದಂಗೆಯಲ್ಲಿ ಭಾಗವಹಿಸಿದವರು) ಜತೆ ಅಮೆರಿಕನ್ ರಾಯಭಾರ ಕಚೇರಿಯ ಅಧಿಕಾರಿಗಳು ಹಲವು ಮಾತುಕತೆಗಳನ್ನು ನಡೆಸಿದ್ದರು. ದಂಗೆಯಾದಾಗಲೂ ಅಮೆರಿಕನ್ ಸರ್ಕಾರದ ವಕ್ತಾರ ಅದನ್ನು ಸ್ವಾಗತಿಸಿದ್ದ. ದಂಗೆ ವಿಫಲವಾದ ಮೇಲೆ ಮಾತ್ರ ಅಮೆರಿಕಕ್ಕೆ ಈ ದಂಗೆಯಲ್ಲಿ ಏನು ಪಾತ್ರವಿರಲಿಲ್ಲ ಎಂದು ವಕ್ತಾರರು ಹೇಳಿದರು.

ಚವೇಝುರ ಅಪರಾಧಗಳು

ಜಗತ್ತಿನ ನಾಲ್ಕನೇ ಅತಿ ದೊಡ್ಡ ತೈಲ ಉತ್ಪಾದಕ ಮತ್ತು ಅಮೆರಿಕಾದ ಶೇಕಡಾ 15 ತೈಲ ರಫ್ತು ಮಾಡುವ ವೆನೆಜುವೆಲಾದ ಮೇಲೆ ಇದ್ದ ಅಮೆರಿಕಾದ ನಿಯಂತ್ರಣ ಚವೇಝುಗೆ ಇಲ್ಲವಾಗಿತ್ತು. ಸರ್ಕಾರಿ ತೈಲ ಕಂಪನಿ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳಲು ಆರಂಭಿಸಿದ್ದು ಮಾತ್ರವಲ್ಲದೆ, ತೈಲ ರಫ್ತು ಮಾಡುವ ದೇಶಗಳ ಕೂಟ OPECನಲ್ಲಿ ವೆನೆಜುವೆಲಾ ತೈಲ ಬೆಲೆ ಹೆಚ್ಚಳಕ್ಕೆ ಬೆಂಬಲ ನೀಡಿತ್ತು. ಹಿಂದೆ ಅಮೆರಿಕಾ ವೆನೆಜುವೆಲಾವನ್ನು ಬಳಸಿ OPEC ನಿರ್ಧಾರಗಳ ಮೇಲೆ ಒತ್ತಡ ತರುತ್ತಿತ್ತು. ಕ್ಯೂಬಾಕ್ಕೆ 53 ಸಾವಿರ ಬ್ಯಾರೆಲ್‌ಗಳು ಪ್ರತಿದಿನ ಸರಬರಾಜು ಮಾಡಲು ನಿರ್ಧರಿಸಿತ್ತು.

- ಸರ್ಕಾರ ಸ್ವಾಮ್ಯದ ತೈಲ ಕಂಪನಿಗಳನ್ನು ಐಎಂಎಫ್ ಖಾಸಗೀಕರಿಸುವ ಯೋಜನೆಯನ್ನು ತಿರಸ್ಕರಿಸಿದ್ದು
- ಅಮೆರಿಕ 'ವೈರಿ'ಗಳಾದ ಇರಾಕ್, ಲಿಬ್ಯಾ, ಉತ್ತರ ಕೊರಿಯಾ ಮುಂತಾದ ದೇಶಗಳ ಜತೆ ಆರ್ಥಿಕ-ರಾಜಕೀಯ ಸಂಬಂಧ ಸಾಮಾನ್ಯೀಕರಿಸಿದ್ದು
- ಭೂಸುಧಾರಣೆಗಳನ್ನು ಜಾರಿ ಮಾಡಿದ್ದು
- ವೈದ್ಯಕೀಯ ಸೇವೆ, ಶಿಕ್ಷಣ ಮುಂತಾದ ಸಾಮಾಜಿಕ ಕಲ್ಯಾಣ ಕ್ರಮಗಳನ್ನು ಆರಂಭಿಸಿ, ಐಎಂಎಫ್‌ನ ಕಡಿತಗಳನ್ನು ಪಾಸ್ಸು ಮಾಡದಿದ್ದದ್ದು.
- ನೆರೆಯ ಕೊಲಂಬಿಯಾದಲ್ಲಿ ಅಮೆರಿಕ ಆರಂಭಿಸಿರುವ 'ಪ್ರಾಕ್ಸಿ ಯುದ್ಧ' ವಿರೋಧಿಸಿದ್ದು ಮಾತ್ರವಲ್ಲದೆ, ಅಲ್ಲಿನ ಮಿಲಿಟರಿ ಹಸ್ತಕ್ಷೇಪಕ್ಕೆ ಅಮೆರಿಕಕ್ಕೆ ಯಾವುದೇ ಸಹಾಯ ಮಾಡದ್ದು
- ಅಫಘಾನಿಸ್ತಾನದಲ್ಲಿ ಅಮೆರಿಕದ ಮಿಲಿಟರಿ ದಾಳಿಗಳನ್ನು ವಿಶ್ವಸಂಸ್ಥೆ ಬಹಿರಂಗವಾಗಿ ಖಂಡಿಸಿ ವಿರೋಧಿಸಿದ ಕೆಲವೇ ನಾಯಕರಲ್ಲಿ ಒಬ್ಬ ಚವೇಝು

ಇಷ್ಟೆಲ್ಲಾ 'ಅಪರಾಧ'ಗಳು ಸಾಲದೇ?

ಯುವಜನತೆಯಲ್ಲಿರುವ ಸುಪ್ತ ಪ್ರತಿಭೆಗಳನ್ನು ಗುರುತಿಸಿ, ಬೆಳೆಸಿ, ಅವರನ್ನು ಸಮಾಜಮುಖಿಗಳನ್ನಾಗಿಸುವ ಉದ್ದೇಶದಿಂದ ಆರಂಭಗೊಂಡ ಮಂಗಳೂರಿನ 'ಕೊಂಚಾಡಿ ಯುವಕ ಕಲಾ ಮಂಡಳಿಗೆ ಈಗ 50 ವರ್ಷಗಳ ಸಂಭ್ರಮ. ಈ ಐದು ದಶಕಗಳುದ್ದಕ್ಕೂ ಮಂಡಳಿಯ ಪಾತ್ರವೂ ವೈವಿಧ್ಯಮಯ. ಆದರ ಸುವರ್ಣಮಹೋತ್ಸವದ ನೆನಪಿನಲ್ಲಿ ಇತ್ತೀಚೆಗೆ ಅದ್ಭುತ ಕಾರ್ಯಕ್ರಮಗಳು-ಹಳೆ, ಹೊಸ ನಾಟಕಗಳ ಮೂಲಕ ಜನಮನ ಸೂರೆಗೊಂಡಿತು ಈ ತಂಡ. ಇಂತಹ ಒಂದು ತಂಡದ ಆರಂಭ ಅದೊಂದು ಚಳುವಳಿಯಾಗಿ ರೂಪುಗೊಳ್ಳುವಲ್ಲಿ ಬೆನ್ನೆಲುಬಾಗಿ ನಿಂತವರು ಕೆ.ಆರ್.ಶ್ರೀಯಾನರು. ಹಾಗೆ ಶ್ರೀಯಾನರೆಂದರೆ ಕೇವಲ 'ಟ್ರೇಡ್ ಯೂನಿಯನ್' ಅಲ್ಲ ಅವರ ಸಾಂಸ್ಕೃತಿಕ ವ್ಯಕ್ತಿತ್ವದ ಪರಿಚಯವೂ ಇಲ್ಲಿ ಅನಾವರಣಗೊಂಡಿದೆ. ಅದರತ್ತ ವರದಿ....



ಜನಮನ ಸೂರೆಗೊಂಡ ಕೊಂಚಾಡಿ ಯುವಕ ಕಲಾ ಮಂಡಲಿ ಸುವರ್ಣ ಮಹೋತ್ಸವ

ಜಯಂತ್ ಕುಮಾರ್

2002ನೇ ಫೆಬ್ರವರಿ 9 ಮತ್ತು 10 ಈ ಎರಡು ದಿನಗಳಲ್ಲಿ ಮಂಗಳೂರು ಪಟ್ಟಣದಿಂದ 8 ಕಿ.ಮೀ ದೂರದಲ್ಲಿರುವ ಕೊಂಚಾಡಿ ಎಂಬ ಊರಿನಲ್ಲಿ ಕಳೆದ 50 ವರುಷಗಳಿಂದ ಸಾಂಸ್ಕೃತಿಕ ಸಾಮಾಜಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಾ ಬಂದ ಈ ಊರಿನ ಜನರ ಮೆಚ್ಚುಗೆ ಗಳಿಸಿದ ಕೊಂಚಾಡಿ ಯುವಕ ಕಲಾ ಮಂಡಲಿಯ ಸುವರ್ಣ ಮಹೋತ್ಸವದ ಸಾಂಸ್ಕೃತಿಕ ಉತ್ಸವವು ಜರುಗಿ ಈ ಪ್ರದೇಶದ ಜನರಿಗೆ ಹಬ್ಬದ ವಾತಾವರಣ ನಿರ್ಮಿಸಿತು.

ಅಪರೂಪದ ಕಾರ್ಯಕ್ರಮಗಳು

ಕೊಂಚಾಡಿ ಶ್ರೀ ರಾಮಾಶ್ರಮ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ನಿರ್ಮಿಸಿದ ಅಪೂರ್ವ ಅದ್ದೂರಿ ಹಾಗೂ ಆಕರ್ಷಕವಾದ ಮೂರು ರಂಗ ವೇದಿಕೆಗಳಲ್ಲಿ ಸಾಂಸ್ಕೃತಿಕ ಉತ್ಸವವ ತನ್ನದೇ ಆದ ವೈಶಿಷ್ಟ್ಯದಿಂದ ಮೆರೆಯಿತು. ಚೆಂಡೆ, ಕೊಂಬು, ಮಂಗಳ ವಾದ್ಯಗಳು, ಡೋಲ ಕುಣಿತ ದುಡಿವಾದನ, ಭೂತಾರಾಧನೆಯ ದೃಶ್ಯವೈಭವ, ಕೋಲಾಟ ಯಕ್ಷಗಾನ ಬಯಲಾಟ ಮುಂತಾದ ತುಳು ಜಾನಪದ ಕಾರ್‍ಕ್ರಮಗಳನ್ನೂ ಭಾರತೀಯ ಮತ್ತು ಪಾಶ್ಚಿಮಾತ್ಯ ನೃತ್ಯ ವೈಭವಗಳನ್ನು ಮೂರು ರಂಗ ವೇದಿಕೆಗಳಲ್ಲಿ ಎಡೆಬಿಡದೆ ಪ್ರದರ್ಶಿಸಿದ ಕಾರ್ಯಕ್ರಮಗಳು ರಾಜ್ಯ ಪ್ರಶಸ್ತಿ ವಿಜೇತ ಬಾಲಕೃಷ್ಣ ಪೈ ಕುಂದಾಪುರ ಇವರ ತಂಡದ "ಮೂರು ಮುತ್ತುಗಳು" ಕನ್ನಡ ನಾಟಕ, ಕೆ. ಆರ್. ಶ್ರೀಯಾನ್ ನಿರ್ದೇಶಿಸಿದ ಪೀಪಲ್ಸ್ ಥಿಯೇಟರ್ಸ್ ಮಂಗಳೂರು ತಂಡದವರಿಂದ 'ಇಲ್ಲಿ ದೆತ್ತಿ ಮಗೆ' ಎಂಬ ತುಳು ನಾಟಕ ಮುಂತಾದ ಕಾರ್ಯಕ್ರಮಗಳು ಪ್ರೇಕ್ಷಕರ ಮನಗೆದ್ದಿತು. ಮೇಲಾಗಿ ಕಾರ್ಯಕ್ರಮಗಳು ನಡೆಯುತ್ತಿರುವಾಗ ಆಗಸದೆತ್ತರದಲ್ಲಿ ಸಿಡಿದು ಹೂಮಳೆಗರೆದ ಸಿಡಿಮದ್ದುಗಳು ಇಡೀ ಪ್ರೇಕ್ಷಕ ವೃಂದವನ್ನು ಹಬ್ಬದ ವಾತಾವರಣದಲ್ಲಿ ಮುಳುಗಿಸಿತು. ಶಾಲೆಯ ಆವರಣದಲ್ಲಿ ನಿರ್ಮಿಸಿದ ಅದ್ದೂರಿಯ ರಂಗವೇದಿಕೆಗಳತ್ತ ಆಕರ್ಷಿತರಾಗಿ ಆಗಮಿಸಿದ ಸಾವಿರಾರು ಮಂದಿ ರಸ್ತೆಯುದ್ದಕ್ಕೂ ವಿದ್ಯುದ್ದೀಪಾಲಂಕಾರದ ಮಧ್ಯೆ ಸಾಲುಗಟ್ಟಿ ನಡೆದು ಬರುವ ಜನರ ದೃಶ್ಯ ನೋಡುಗರಿಗೆ ಖುಷಿ ಕೊಡುತ್ತಿತ್ತು. ಕೊಂಚಾಡಿ ಯುವಕ ಕಲಾ ಮಂಡಲಿಯ ಸುವರ್ಣ ಮಹೋತ್ಸವದ ಸಾಂಸ್ಕೃತಿಕ ಉತ್ಸವದ ಬಗ್ಗೆ ಜನರು ತುಂಬಾ ಮೆಚ್ಚುಗೆ ವ್ಯಕ್ತಪಡಿಸಿದರು. ಹಿಂದೆಂದೂ ಇಷ್ಟೊಂದು ಅದ್ದೂರಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಈ ಪ್ರದೇಶದಲ್ಲಿ ಜರುಗಿದ್ದಿಲ್ಲ. ಇದೊಂದು ಅಪರೂಪದ ಕಾರ್ಯಕ್ರಮವಾಗಿತ್ತು.

ಎರಡು ದಿನಗಳ ಸಾಂಸ್ಕೃತಿಕ ಕಾರ್ಯಕ್ರಮಗಳ ಮಧ್ಯೆ ಖ್ಯಾತ ನಾಟಕಕರ್ತ ಡಾ। ಪಿ. ಸಂಜೀವ ದಂಡಕೇರಿ, ಖ್ಯಾತ ರಂಗ ನಟಿ ಶ್ರೀಮತಿ ಸರೋಜಿನಿ ಶೆಟ್ಟಿಯವರನ್ನು ಸನ್ಮಾನಿಸಲಾಯಿತು. ಸುವರ್ಣ ಮಹೋತ್ಸವದ ನಿಮಿತ್ತ ಕೊಂಚಾಡಿ ಶ್ರೀ ರಾಮಾ ಸಂಯುಕ್ತ ಶಾಲೆಗಳ ಪದವಿಪೂರ್ವ ಕಾಲೇಜ್, ಪ್ರೌಢ ಪ್ರಾಥಮಿಕ ಶಾಲೆ ಮತ್ತು ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ಏರ್ಪಡಿಸಲಾದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು. ಕೊಂಚಾಡಿ ಯುವಕ ಕಲಾ ಮಂಡಲಿಯ ಅನೇಕ ಹಿರಿಯ ಕಾರ್ಯಕರ್ತರನ್ನೂ ಸನ್ಮಾನಿಸಲಾಯಿತು. ಈ ಎರಡು ದಿನಗಳ ಕಾರ್ಯಕ್ರಮದಲ್ಲಿ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ। ವಾಮನ ನಂದಾವರ, ನ್ಯಾಯವಾದಿಗಳೂ, ಯಕ್ಷಗಾನ ಪಟುಗಳೂ ಆದ ಮುರುಳಿಯ ಕೇಶವಯ್ಯ,ನ್ಯಾಯವಾದಿ ಹಾಗೂ ರಾಮಾಶ್ರಮ ಶಾಲಾ ಟ್ರಸ್ಟ್ ಬೋರ್ಡಿನ ಅಧ್ಯಕ್ಷರಾದ ಎಂ.ಎಸ್.ಭಟ್, ಮತ್ತು ಕರೆಸ್ಪಾಂಡೆಂಟ್ ಡಾ. ಎಸ್.ವಿ.ಪೂಜಾರಿ, ದ.ಕ. ಜಿಲ್ಲಾ ಸಹಕಾರಿ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್‌ರಾದ ಅಣ್ಣಯ್ಯ ಶೇರಿಗಾರ್, ಗಣಪತಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾರರಾದ ಪ್ರೊ। ಚಂದ್ರಕಲಾ ನಂದಾವರ, ನ್ಯಾಯವಾದಿ ಎನ್. ಬಾಲಕೃಷ್ಣ ಶರ್ಮಾ ಕಾರ್ಪೊರೇಟರ್ ಮಹಾಬಲ ಮಾರ್ಲ, ರಾಮಾಶ್ರಮ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಸತ್ಯನಾರಾಯಣ ಭಟ್, ಹಿರಿಯ ಪ್ರಾಥಮಿಕ ಶಾಲೆ ಮುಖ್ಯೋಪಾಧ್ಯಾಯ ರಾದ ಗುರುರಾಜ್ ಭಟ್, ಮೊದಲಾದ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಐವತ್ತು ಸಂವತ್ಸರಗಳನ್ನು ಯಶಸ್ವಿಯಾಗಿ ದಾಟಿ ಬಂದ ಕೊಂಚಾಡಿ ಯುವಕ ಕಲಾ ಮಂಡಲಿಯ ಪರಿಚಯ ಮಾಡಿಕೊಡುವುದು ಸಂದರ್ಭೋಚಿತ ವಾಗಿದೆ. 1952ರಲ್ಲಿ ಕೊಂಚಾಡಿ ಯುವಕ ಕಲಾ ಮಂಡಲಿಯನ್ನು ಸ್ಥಾಪಿಸಲಾಯಿತು. ಅಂದು ವಿದ್ಯಾರ್ಥಿಯಾಗಿದ್ದ ಕೆ.ಆರ್. ಶ್ರೀಯಾನರು ಅದರ ಸ್ಥಾಪಕರು.

50 ಸಂವತ್ಸರಗಳು... ಹಿಂದುರುಗಿ ನೋಡಿದಾಗ

ತನ್ನ ಹುಟ್ಟೂರಾದ ಕೊಂಚಾಡಿ ಪ್ರದೇಶದ ಆಸುಪಾಸಿನ ಗ್ರಾಮಗಳ ಯುವಕರನ್ನು ಸೇರಿಸಿ ಅವರನ್ನು ಸಂಘಟಿಸುವ ಉದ್ದೇಶದಿಂದ, ಯುವಜನರಲ್ಲಿ ಸುಪ್ತವಾಗಿರುವ ಕಲೆ, ಸಾಹಿತ್ಯ, ಆಟೋಟಗಳಿಗೆ ಪ್ರೋತ್ಸಾಹಿಸಿ ಅವರನ್ನು ಸಾಮಾಜಿಕವಾಗಿ ಕರ್ತವ್ಯಶೀಲರನ್ನಾಗಿ ಮಾಡುವ, ಬೆಳೆಸುವ ಉದ್ದೇಶದಿಂದ ಈ ಸಂಸ್ಥೆಯನ್ನು ಅಂದು ವಿದ್ಯಾರ್ಥಿಯಾಗಿದ್ದ ಕೆ.ಆರ್.ಶ್ರೀಯಾನರು ಸ್ಥಾಪಿಸಿದರು. ಈ ರೀತಿಯ ಯುವಜನ ಸಂಘಟನೆಗಳು ಬಹಳ ಕಡಿಮೆಯಿದ್ದ ಕಾಲವದು. ಈ ಪ್ರದೇಶದ ಆಸುಪಾಸಿನ ಯುವಕರೂ, ವಿದ್ಯಾರ್ಥಿಗಳೂ ಸ್ಥಾಪನೆಯಾದ ಕೊಂಚಾಡಿ ಯುವಕ ಕಲಾ ಮಂಡಲಿಗೆ ಆಕರ್ಷಿತರಾಗಿ ಬಹಳಷ್ಟು ಮಂದಿ ಸೇರಿದರು.

ತನ್ನ ಸದಸ್ಯರ ಅಭಿರುಚಿಗೆ ತಕ್ಕಂತೆ ನಾಟಕ, ಸಂಗೀತ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಆಟೋಟಗಳು, ವಯಸ್ಕರ ಶಿಕ್ಷಣ, ಚರ್ಚಾಕೂಟ, ಶ್ರಮದಾನ ಹಾಗೂ ವಿವಿಧ ಸಾಮಾಜಿಕ ಚಟುವಟಿಕೆಗಳನ್ನು ಚುರುಕಾಗಿ ನಡೆಸಲಾಯಿತು. ಹತ್ತಿರದ ಪದವಿನಂಗಡಿಯಲ್ಲಿ ಮಂಡಲಿಯ ವತಿಯಿಂದ ವಯಸ್ಕರಿಗಾಗಿ ಒಂದು ರಾತ್ರಿ ಶಾಲೆಯನ್ನೂ ತೆರೆಯಲಾಯಿತು. ಬಡವರ್ಗದ ಅನೇಕ ಮಕ್ಕಳೂ, ವಯಸ್ಕರೂ ಈ ಶಾಲೆಗೆ ಸೇರಿ ಅಕ್ಷರಾಭ್ಯಾಸ ಮಾಡಿದರು. ಆಗ ಕಡ್ಡಾಯ ಶಿಕ್ಷಣ ಪದ್ಧತಿ ಜಾರಿಯಲ್ಲಿರಲಿಲ್ಲ. ಇದರಿಂದಾಗಿ ಈ ರಾತ್ರಿ ಶಾಲೆಗೆ ದೊಡ್ಡ ಸಂಖ್ಯೆಯಲ್ಲಿ ಅಕ್ಷರಾಭ್ಯಾಸ ಮಾಡಲು ಬರುತ್ತಿದ್ದರು.

ಜನತೆಗಾಗಿ...

'ಕಲೆಯು ಕಲೆಗಾಗಿಯಲ್ಲ ಅದು ಜನತೆಗಾಗಿ' ಎಂಬ ಧ್ಯೇಯವನ್ನಿಟ್ಟುಕೊಂಡು ಜನರ ಮಧ್ಯೆ ಎದ್ದು ಬರುವ ಬಹುಮುಖಿ ಸಮಸ್ಯೆಗಳನ್ನು ನಾಟಕಗಳ ಮೂಲಕ ರಂಗ ಭೂಮಿಯಲ್ಲಿ ಪ್ರದರ್ಶಿಸಿ ಈ ಮೂಲಕ ಜನಜಾಗೃತಿಗೊಳಿಸುವ ಕಾರ್ಯಕ್ರಮಗಳನ್ನು ಕೊಂಚಾಡಿ ಯುವಕ ಕಲಾ ಮಂಡಲಿಯು ಮಾಡುತ್ತಾ ಬಂದಿದೆ.

ಸಮಾಜದಲ್ಲಿ ಆಳವಾಗಿ ಬೇರೂರಿರುವ ಅಂಧಶ್ರದ್ಧೆ, ಅಜ್ಞಾನ ಮತ್ತು ಹಳೆಯ ಪಾಳೆಯಗಾರೀ ಮೌಲ್ಯಗಳನ್ನು ಕಿತ್ತುಹಾಕಿ ಹೊಸ ಮೌಲ್ಯಗಳನ್ನು ಸೃಷ್ಟಿಸುವ ಉದ್ದೇಶದಿಂದ ನಮ್ಮ ಸಮಾಜದಲ್ಲಿ ಜನರಿಗೆ ತಿಳು ವಳಿಕೆ ನೀಡಲು ಸಾಧ್ಯ. ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಸಾಧ್ಯ. ಜನಸಾಮಾನ್ಯರ ನೋವಿಗೆ ಮಿಡಿಯುವ ಸಾಂಸ್ಕೃತಿಕ ಚಳುವಳಿಗಳನ್ನು ನಡೆಸುವ ಮೂಲಕ ಸಾಂಸ್ಕೃತಿಕ ಚಳವಳಿ ಜನಸಾಮಾನ್ಯರ ಆಶೋತ್ತರಗಳನ್ನು ಪ್ರತಿಬಿಂಬಿಸಬಹುದು. ಈ ನಿಟ್ಟಿನಲ್ಲಿ ಮಹತ್ವದ ಸಾಧನೆಗಳನ್ನು ಈ ಮಂಡಲಿಯು ಮಾಡಲು ಶ್ರಮಿಸುತ್ತಾ ಬಂದಿದೆ.

ಮಂಡಲಿಯು ಈ 50 ವರುಷಗಳಲ್ಲಿ 75ಕ್ಕೂ ಮಿಕ್ಕಿ ನಾಟಕಗಳನ್ನು ರಂಗಭೂಮಿಯಲ್ಲಿ ಪ್ರದರ್ಶಿಸಿದೆ. ಈ ನಾಟಕಗಳಲ್ಲಿ ಹೆಚ್ಚಿನವು ಕೆ.ಆರ್.ಶ್ರೀಯಾನರು ಬರೆದವುಗಳು. ಅವರು ಬರೆದ ಮತ್ತು ನಿರ್ದೇಶಿಸಿದ ನಾಟಕಗಳಲ್ಲಿ ಕಾರಾಗೃಹ, ಬಿಡುಗಡೆ, ಬಂಧನ, ಹಣೆಬರವು, ದಗೆಮಲ್ಪಡೆ, ಮನೇಜರ್ ಕಾಂತ, ನಿರಪರಾಧಿ, ಕಾಲಬದಲಾಗ, ಇಲ್ಲದೆತ್ತಿಮಗೆ ಇತ್ಯಾದಿ ನಾಟಕಗಳು ಭಾರೀ ಜನಮೆಚ್ಚುಗೆ ಪಡೆದಿದೆ.

ದೀರ್ಘ ಪಯಣ

ಮಂಡಲಿಯ ಈ 50 ವರುಷಗಳೆಂದರೆ ಅದೊಂದು ದೀರ್ಘ ಪಯಣ. ಅನೇಕ ಎಡರು ತೊಡರುಗಳು ಇದಿರಾದರೂ ಅದನ್ನು ಎದುರಿಸಿ ಮುಂದೆ ಸಾಗುತ್ತಾ ಬಂದಿದೆ. ಅದಕ್ಕಾಗಿ ಯುವಕರ ಒಂದು ದೊಡ್ಡ ತಂಡವನ್ನು ಬೆಳೆಸಿದೆ. ಕ್ರಿಯಾಶೀಲ ಕಾರ್ಯಕರ್ತರನ್ನು ತನ್ನ ಬಳಗದಲ್ಲಿ ಸೇರಿಸಿ ಕೊಂಡಿದೆ. ಗಟ್ಟಿಯಾದ ಅಡಿಪಾಯ, ಶಿಸ್ತು, ಐಕ್ಯತೆ ಸ್ಪಷ್ಟವಾದ ಪುರೋಗಾಮೀ ಧ್ಯೇಯೋದ್ದೇಶ ಹಾಗೂ ಪ್ರಬುದ್ಧ ಮುಖಂಡತ್ವ, ಎಂತಹ ಪರಿಸ್ಥಿತಿ ಇದಿರಾದರೂ ಅವಿಶ್ರಾಂತ ರಾಜಕೀಯ , ಸಾಮಾಜಿಕ ಕಾರ್ಯಕ್ರಮಗಳ ಮಧ್ಯೆಯೂ ಈ ಸಂಸ್ಥೆಯ ಸ್ಥಾಪಕರಾದ ಕೆ.ಆರ್. ಶ್ರೀಯಾನರು ತನ್ನನ್ನು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲೂ ತೊಡಗಿಸಿಕೊಂಡಿರುವುದು ಈಗಲೂ ಅವರು ಈ ಮಂಡಲಿಯ ಅಧಾರಸ್ತಂಭವಾಗಿದ್ದಾರೆ. ಅದರ ಕೇಂದ್ರ ಬಿಂದುವಾಗಿದ್ದಾರೆ. ತಾನು ಹುಟ್ಟಿದ ಊರಿನಲ್ಲಿ, ವಿದ್ಯಾಭ್ಯಾಸ ಆರಂಭಿಸಿದ ಶಾಲೆಯಲ್ಲಿ ಆರಂಭಿಸಿದ ಕೊಂಚಾಡಿ ಯುವಕ ಕಲಾ ಮಂಡಲಿಯು ಕ್ರಿಯಾಶೀಲವಾಗಿ 50 ವರುಷಗಳ ಧೀರ್ಘ ಪಯಣ ಮಾಡುತ್ತಾ ಮುಂದುವರಿಯುತ್ತಿರುವುದು ಶ್ಲಾಘನೀಯವಾಗಿದೆ.

'ಇಲ್ಲೆದೆತ್ತಿಮಗೆ' ನಾಟಕದ ಇನ್ನೊಂದು ಪ್ರದರ್ಶನ



ಕೊಂಚಾಡಿ ಯುವಕ ಕಲಾ ಮಂಡಲಿಯ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕೆ.ಆರ್. ಶ್ರೀಯಾನರ ನಿರ್ದೇಶನದಲ್ಲಿ ಪಿಪಲ್ಸ್ ಥಿಯೇಟರ್ಸ್ ಮಂಗಳೂರು' ಇವರು ಅಭಿನಯಿಸಿದ ತುಳು ನಾಟಕ ಇಲ್ಲೆದೆತ್ತಿಮಗೆ ಇದರ ಇನ್ನೊಂದು ಪ್ರದರ್ಶನವು 2-6-02ರಂದು ಸಂಜೆ 6ಕ್ಕೆ ಮಂಗಳೂರು ಪುರಭವನದಲ್ಲಿ ನಡೆಯಲಿದೆ. ಇದು ಈ ನಾಟಕದ ಹತ್ತನೇ ಪ್ರಯೋಗವಾಗಿದೆ. ಬಹುಜನರ ಅಪೇಕ್ಷೆಯಂತೆ ಈ ವಿಶೇಷ ಪ್ರದರ್ಶನ ಏರ್ಪಡಿಸಲಾಗಿದೆ. ಪೀಪಲ್ಸ್ ಥಿಯೇಟರ್ಸ್‌ರವರು ಈ ನಾಟಕವನ್ನು ಅಭಿನಯಿಸಿದ ಮೇಲೆ ಇದರ ಕಥಾ ವಸ್ತುವಿನ ಬಗ್ಗೆ, ಸಂಗೀತ, ನಟನೆ ಮತ್ತು ಪ್ರಯೋಗದ ಬಗ್ಗೆ ತುಳು ರಂಗ ಭೂಮಿಗೆ ಹೊಸ ಹಾಗೂ ಅಪೂರ್ವ ಕೊಡುಗೆ ಎಂಬ ಅಭಿಪ್ರಾಯ ಮೂಡಿ ಬಂದಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/ KA /BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್. ಸೂರ್ಯನಾರಾಯಣ ರಾವ್
ಸಂಪಾದಕರು: ... ಗುರುರಾಜ್, ಸಂಪಾದಕೀಯ ಕಚೇರಿ: ನಂ.12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,